
ಸಂಪುಟ: 06 ಸಂಚಿಕೆ: 36 ಪುಟಗಳು: 08 ಸೋಮವಾರ 20 ಏಪ್ರಿಲ್ 2026
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಕ್ರೌರ್ಯಕ್ಕೆ ಕ್ರೌರ್ಯವೇ ಉತ್ತರ ಎನ್ನುವವರು ನಿಶ್ಚಿತವಾಗಿಯೂ ಬೌದ್ಧಿಕ ದಾರಿದ್ರ್ಯವನ್ನು ಅನುಭವಿಸುತ್ತಿರುತ್ತಾರೆ. ಅದು ವಿಷವರ್ತುಲದ ಆರಂಭವಷ್ಟೆ.







# ಬಣ್ಣಬದಲಿಸಿದ ಇರಾನ್‌ಗೆ ಭಾರತ ವಾರ್ನ್

## ಹಾರ್ಮುಜ್'ನಲ್ಲಿ ಹಡಗುಗಳ ಮೇಲೆ ಗುಂಡಿನ ದಾಳಿ

## ಭಾರತಕ್ಕೆ ತೆರಳುತ್ತಿದ್ದ 14 ಹಡಗುಗಳಿಗೆ ಇರಾನ್ ತಡೆ



**ಹಾರ್ಮೂಜ್ ಜಲಸಂಧಿಯಲ್ಲಿ ಎರಡು ಭಾರತೀಯ ಧ್ವಜದ ಹಡಗುಗಳ ಮೇಲೆ ನಡೆದ ಗುಂಡಿನ ದಾಳಿಯ ಘಟನೆ ಬಳಿಕ ಇರಾನ್ ಮತ್ತು ಭಾರತದ ನಡುವಿನ ಸಂಬಂಧಗಳ ಬಗ್ಗೆ ಚರ್ಚೆಗಳು ಆರಂಭವಾಗಿದ್ದು, ಇದರ ಬೆನ್ನಲ್ಲೇ ಭಾರತ-ಇರಾನ್ ಸಂಬಂಧಗಳು ಅತ್ಯಂತ ಬಲಿಷ್ಠವಾಗಿವೆ ಎಂದು ಸ್ಪಷ್ಟಪಡಿಸಿದೆ. ಇರಾನ್ ರಾಷ್ಟ್ರದ ಪರಮೋಚ್ಚ ನಾಯಕನ ಭಾರತದ ಪ್ರತಿನಿಧಿ ಡಾ. ಅಬ್ದುಲ್ ಮಜೀದ್ ಹಕೀಮ್ ಇಲಾಹಿ ಅವರು ಮಾತನಾಡಿ, ಭಾರತ-ಇರಾನ್ ಸಂಬಂಧಗಳು ಅತ್ಯಂತ ಬಲಿಷ್ಠವಾಗಿವೆ ಎಂದು ಸ್ಪಷ್ಟಪಡಿಸಿದ್ದಾರೆ ಹಾಗೂ ಈ ಪ್ರದೇಶದಲ್ಲಿ ಶಾಂತಿ ಕಾಪಾಡಬೇಕೆಂದು ಕರೆ ನೀಡಿದ್ದಾರೆ.**

• ಉದಯವಾಹಿನಿ, ಬೆಂಗಳೂರು

ಭಾರತ ಮತ್ತು ಇರಾನ್ ನಡುವಿನ ಸಂಬಂಧ ಅತ್ಯಂತ ಗಟ್ಟಿಯಾಗಿದೆ. ಎರಡೂ ದೇಶಗಳ ನಡುವಿನ ಉತ್ತಮ ಸಂಬಂಧದಿಂದ ಭಾರತಕ್ಕೆ ಹಾರ್ಮೂಜ್ ಜಲಸಂಧಿಯ ಮೂಲಕ ತೈಲ ಸಾಗಣೆ ಮತ್ತು ಟ್ಯಾಂಕರ್ ಸಂಚಾರದಲ್ಲಿ ಬಹಳ ಲಾಭವಾಗಿದೆ ಎಂದು ಹೇಳಿದ್ದಾರೆ. ಭಾರತದ ಪ್ರಧಾನಿ ಮತ್ತು ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ನಡುವೆ ಯಶಸ್ವಿ ಮಾತುಕತೆಗಳು ನಡೆದಿದ್ದು, ವಿದೇಶಾಂಗ ಸಚಿವರ ಮಟ್ಟದಲ್ಲಿಯೂ ನಿರಂತರ ಮಾತುಕತೆಗಳು ನಡೆದಿವೆ ಎಂದು ವಿವರಿಸಿದ್ದಾರೆ. ಭಾರತ ಮತ್ತು ಇರಾನ್ ನಡುವಿನ ಸಂಬಂಧವು ಸುಮಾರು 5,000 ವರ್ಷಗಳ ನಾಗರಿಕತೆ, ಸಂಸ್ಕೃತಿ ಮತ್ತು ಇತಿಹಾಸದ ಆಧಾರವನ್ನು ಹೊಂದಿದೆ. ಭಾರತ ಮತ್ತು ಇರಾನ್ ನಡುವಿನ ಸಂಬಂಧವು ಕೇವಲ ರಾಜತಾಂತ್ರಿಕವಲ್ಲ, ಬದಲಾಗಿ 5,000 ವರ್ಷಗಳ ಹಳೆಯದಾದ ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಆಧ್ಯಾತ್ಮಿಕ ನಾಗರಿಕ ಸಂಬಂಧವಾಗಿದೆ. ಈ ಸಂಬಂಧವು ಎಷ್ಟು ಗಾಢವಾಗಿದೆ ಎಂದರೆ ಯಾವುದೇ ಅಲ್ಪಕಾಲಿಕ ಘಟನೆಗಳು ಇದನ್ನು ಹಾನಿಗೊಳಿಸಲು ಸಾಧ್ಯವಿಲ್ಲ ಈ ಸಂಬಂಧ ಇನ್ನಷ್ಟು ಬಲವಾಗುತ್ತಲೇ ಹೋಗುತ್ತದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಇದೇ ವೇಳೆ ಭಾರತೀಯ ಹಡಗುಗಳ ಮೇಲೆ ನಡೆದ ಗುಂಡಿನ ದಾಳಿ ಕುರಿತು ಮಾತನಾಡಿರುವ ಅವರು, ಗುಂಡಿನ ದಾಳಿ ಕುರಿತು ನನಗೆ ವಿವರಗಳು ಸ್ಪಷ್ಟವಾಗಿ ತಿಳಿದಿಲ್ಲ ಎಂದು ಹೇಳಿದ್ದು, ''ಈ ಘಟನೆ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇಲ್ಲ. ಆದರೆ, ಇದು ಶೀಘ್ರದಲ್ಲೇ ಪರಿಹಾರವಾಗಲಿ ಎಂಬ ವಿಶ್ವಾಸವಿದೆ ಎಂದು ತಿಳಿಸಿದ್ದಾರೆ. ಜೊತೆಗೆ, ಈ ಪ್ರದೇಶದಲ್ಲಿ ಯುದ್ಧ ಬೇಡ, ಶಾಂತಿ ಬೇಕು ಎಂಬುದನ್ನು ಒತ್ತಿ ಹೇಳಿದ್ದಾರೆ. ನಾವು ಯುದ್ಧವನ್ನು ಬಯಸುವುದಿಲ್ಲ, ಶಾಂತಿ ಬೇಕು. ಇತರೆ ರಾಷ್ಟ್ರಗಳೂ ಶಾಂತಿಗೆ ಸಹಕರಿಸಬೇಕು ಎಂದು ಹೇಳಿದ್ದಾರೆ.

ಬಳಿಕ ಹಾರ್ಮುಜ್ ಜಲಸಂಧಿಯ ಸ್ಥಿತಿಗತಿಗಳ ಬಗ್ಗೆ ಮಾತನಾಡಿದ ಅವರು, ಭದ್ರತಾ ಕಾರಣಗಳಿಂದ ಕೆಲ ಸಮಯದ ಮಟ್ಟಿಗೆ ಸಂಚಾರದಲ್ಲಿ ಅಡಚಣೆ ಉಂಟಾಗಿದೆ ಎಂದು ತಿಳಿಸಿದ್ದಾರೆ.

''ಜಲಸಂಧಿ ಮೊದಲು ತೆರೆದಿತ್ತು, ಆದರೆ ಇರಾನ್ ವಿರುದ್ಧ ಹೇರಲಾಗಿರುವ ಒತ್ತಡ ಮತ್ತು ಭದ್ರತಾ ಸಮಸ್ಯೆಗಳ ಕಾರಣದಿಂದ ಕೆಲ ನಿರ್ಬಂಧಗಳು ಬಂದಿವೆ. ಸಮಸ್ಯೆಗಳು ಪರಿಹಾರವಾದ ನಂತರ ಇದು ಮತ್ತೆ ಸಂಪೂರ್ಣವಾಗಿ ತೆರೆದಿಡಲಾಗುತ್ತದೆ ಎಂದು ಅವರು ಹೇಳಿದ್ದಾರೆ. ಇಲಾಹಿ ಅವರು ಅಮೆರಿಕ ಮತ್ತು ಇರಾನ್ ನಡುವೆ ನಡೆದ ಶಾಂತಿ ಮಾತುಕತೆಗಳ ಕುರಿತು ಕೂಡ ಪ್ರತಿಕ್ರಿಯಿಸಿದ್ದು, ಮಾತುಕತೆಗಳು ವಿಫಲವಾಗಿರುವಾಗಿ ತಿಳಿಸಿದ್ದಾರೆ. ಅಮೆರಿಕ ಆರಂಭದಲ್ಲಿ 10 ಅಂಶಗಳ ಆಧಾರದ ಮೇಲೆ ಮಾತುಕತೆಗೆ ಒಪ್ಪಿಕೊಂಡಿದ್ದರೂ ನಂತರ ಬೇರೆ ಬೇಡಿಕೆಗಳನ್ನು ಮುಂದಿಟ್ಟ ಕಾರಣದಿಂದ ಚರ್ಚೆಗಳು ವಿಫಲವಾದವು. ಮುಂದಿನ ದಿನಗಳಲ್ಲಿ ಹೊಸ ಪ್ರಸ್ತಾವನೆಗಳ ಆಧಾರದ ಮೇಲೆ ಮಾತುಕತೆಗಳು ನಡೆಯಬಹುದೆಂದು ತಿಳಿಸಿದ್ದಾರೆ.

**ಹಾರ್ಮುಜ್ ಜಲಸಂಧಿ ಮತ್ತೆ ಬಂದ್ :** ಹಾರ್ಮುಜ್ ಜಲಸಂಧಿಯನ್ನು ಮತ್ತೆ ಮುಚ್ಚಲಾಗಿದೆ. ಅದನ್ನು ಸಮೀಪಿಸುವ ಯಾವುದೇ ಹಡಗನ್ನು ಟಾರ್ಗೆಟ್ ಮಾಡಿ ಹೊಡೆಯಲಾಗುವುದು ಎಂದು ಇರಾನ್ ಎಚ್ಚರಿಕೆ ನೀಡಿದೆ. ಭಾರತ ತೆರಳುತ್ತಿದ್ದ 14 ಹಡಗುಗಳನ್ನು ಇರಾನ್ ತಡೆದಿದೆ. ಇರಾನ್ ಜಲಸಂಧಿ ಅಥವಾ ಅದರ ಸಮೀಪದಲ್ಲಿರುವ ಹಡಗುಗಳು, ಒಂದು ಟ್ಯಾಂಕರ್ ಮೇಲೆ ಗುರಿಯಿಡಲಾಗಿದೆ ಎಂಬ ವರದಿಗಳು ಹೊರಬಿದ್ದವು. ಅದರ ಬೆನ್ನಲ್ಲೇ ಹಾರ್ಮುಜ್ ಜಲಸಂಧಿ ಮುಚ್ಚಲಾಗಿದೆ. ಪ್ರಮುಖ ಜಾಗತಿಕ ಹಡಗು ಮಾರ್ಗವನ್ನು ತಾತ್ಕಾಲಿಕವಾಗಿ ಪುನಃ ತೆರೆಯಲಾಗಿದೆ ಎಂದು ಇರಾನ್‌ನ ವಿದೇಶಾಂಗ ಸಚಿವರು ಘೋಷಿಸಿದ್ದರು. ಜಲಸಂಧಿ ತೆರೆದು ಒಂದು ದಿನ ಕಳೆಯುವಷ್ಟರಲ್ಲಿ ಮತ್ತೆ ಬಂದ್ ಮಾಡಲಾಗಿದೆ.

**1** ಭಾರತದ ತೈಲ ಹಡಗಿನ ಮೇಲೆ ಇರಾನ್ ಅಟ್ಯಾಕ್

**2** ಸಮುದ್ರದಲ್ಲಿ 14 ಹಡಗು ಲಾಕ್, ಬಣ್ಣಬದಲಿಸಿದ ಇರಾನ್

**3** ಹೊರ್ಮುಜ್ ಜಲಸಂಧಿಯಲ್ಲಿ ಭಾರತೀಯ ಧ್ವಜ ಹೊತ್ತ ಎರಡು ಹಡಗುಗಳ ಮೇಲೆ ಗುಂಡಿನ ದಾಳಿ

### ಇರಾನ್ ಕಳವಳ

ಭಾರತೀಯ ಧ್ವಜ ಹೊತ್ತಿದ್ದ ಎರಡು ಹಡಗುಗಳ ಮೇಲೆ ಹೊರ್ಮುಜ್ ಜಲಸಂಧಿಯಲ್ಲಿ ದಾಳಿಯಾಗಿರುವುದಾಗಿ ಇರಾನ್ ಕಳವಳ ಕುರಿತು ಭಾರತದಲ್ಲಿರುವ ಇರಾನ್‌ನ ಸರ್ವೋಚ್ಚ ನಾಯಕನ ಪ್ರತಿನಿಧಿ ಡಾ. ಅಬ್ದುಲ್ ಮಜೀದ್ ಹಕೀಮ್ ಇಲಾಹಿ ಅವರ ಭಾರತದಲ್ಲಿರುವ ಪ್ರತಿನಿಧಿ ಮಾಹಿತಿ ನೀಡಿದ್ದು, ಭಾರತದೊಂದಿಗಿನ ಇರಾನ್ ಸಂಬಂಧಗಳು ತುಂಬಾ ಬಲವಾಗಿವೆ. ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ ಪಡೆಗಳು ಹಡಗುಗಳ ಮೇಲೆ ದಾಳಿ ನಡೆಸಿದ ಬಳಿಕ ಭಾರತವು ಕೂಡ ತೀವ್ರ ಆತಂಕ ವ್ಯಕ್ತಪಡಿಸಿದೆ ಎಂದು ಹೇಳಿದರು. ಹೊರ್ಮುಜ್ ಜಲಸಂಧಿಯಲ್ಲಿ ಭಾರತೀಯ ಧ್ವಜ ಹೊತ್ತ ಎರಡು ಹಡಗುಗಳ ಮೇಲೆ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ ಗುಂಡಿನ ದಾಳಿ ನಡೆಸಿದ ಬಳಿಕ ಶಾಂತಿಗಾಗಿ ಕರೆ ನೀಡಿರುವ ಇಲಾಹಿ, ಘಟನೆಯ ಬಗ್ಗೆ ನಿಖರ ಮಾಹಿತಿ ತಮಗೆ ತಿಳಿದಿಲ್ಲ ಎಂದು ತಿಳಿಸಿದರು.

### ಜಾಗತಿಕ ತೈಲ ಮಾರುಕಟ್ಟೆಯ ಮೇಲೆ ಪರಿಣಾಮ

ಜಾಗತಿಕ ತೈಲ ಮಾರುಕಟ್ಟೆಯ ಮೇಲೆ ಪರಿಣಾಮ ಹಾರ್ಮುಜ್ ಜಲಸಂಧಿಯು ವಿಶ್ವದ ಪ್ರಮುಖ ತೈಲ ಸಾಗಾಣಿಕೆಯ ಮಾರ್ಗವಾಗಿದ್ದು, ಇಲ್ಲಿ ನಡೆಯುವ ಇಂತಹ ದಾಳಿಗಳು ಜಾಗತಿಕ ತೈಲ ಬೆಲೆಗಳ ಮೇಲೆ ನೇರ ಪರಿಣಾಮ ಬೀರಬಹುದು. ಅಮೆರಿಕ ಮತ್ತು ಇರಾನ್ ನಡುವಿನ ಉದ್ವಿಗ್ನತೆ ಈಗಾಗಲೇ ಗರಿಷ್ಠ ಮಟ್ಟದಲ್ಲಿದ್ದು, ಈಗ ಭಾರತೀಯ ಹಡಗುಗಳ ಮೇಲಿನ ದಾಳಿಯು ಈ ಭಾಗದಲ್ಲಿನ ನೌಕಾ ಸುರಕ್ಷತೆಯ ಬಗ್ಗೆ ದೊಡ್ಡ ಪ್ರಶ್ನೆಯನ್ನು ಹುಟ್ಟುಹಾಕಿದೆ.



### ಇರಾನ್ ರಾಯಭಾರಿ ಬಳಿ ವಿವರಣೆ ಕೇಳಿದ ಭಾರತ

ಹಾರ್ಮುಜ್ ಜಲಸಂಧಿಯಲ್ಲಿ ಭಾರತದ ಹಡಗುಗಳ ಮೇಲೆ ಇರಾನ್ ಮಿಲಿಟರಿ ದಾಳಿ ನಡೆಸಿದ ಕಾರಣ, ಭಾರತ ಆಕ್ರೋಶ ವ್ಯಕ್ತಪಡಿಸಿದೆ. ಕದನ ವಿರಾಮವಿದ್ದರೂ ಇರಾನ್ ದಾಳಿ ಮುಂದುವರೆಸಿದೆ. ಇರಾನ್‌ನ ರಾಯಭಾರಿಯನ್ನು ಕರೆಸಿ ಭಾರತ ವಿವರಣೆ ಕೇಳಿದೆ. ಅಮೆರಿಕಾ ನೌಕಾಪಡೆ ಇರುವ ಕಾರಣ ಸಂಚಾರ ನಿಷೇಧಿಸಿದೆ ಎಂದು ಇರಾನ್ ಹೇಳಿದೆ. ಹಾರ್ಮುಜ್ ಜಲಸಂಧಿಯಲ್ಲಿ ಭಾರತದ ಹಡಗುಗಳ ಮೇಲೆ ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ (ಐಆರ್‌ಜಿಸಿ) ದಾಳಿ ನಡೆಸಿದೆ. ಭಾರತದ ಎರಡು ಹಡಗುಗಳು ಗುಂಡಿನ ದಾಳಿಗೆ ಒಳಗಾಗಿದ್ದು, ಒಂದು ಹಡಗು ಭಾರತದ ಕರಾವಳಿ ಕಡೆಗೆ ತಪ್ಪಿಸಿಕೊಂಡಿದೆ. ಈ ಘಟನೆಯಿಂದ ಭಾರತ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದು, ಭಾರತದಲ್ಲಿರುವ ಇರಾನ್ ರಾಯಭಾರಿಯನ್ನು ಕರೆಸಿ ವಿವರಣೆ ಕೇಳಿದೆ. ಇರಾನ್, ಇಸ್ರೇಲ್ ಮತ್ತು ಅಮೆರಿಕಾ ನಡುವೆ ಕದನ ವಿರಾಮ ಘೋಷಣೆಯಾಗಿದ್ದರೂ, ಹರ್ಮುಜ್ ಜಲಸಂಧಿಯಲ್ಲಿ ಮತ್ತೆ ಉದ್ವಿಗ್ನತೆ ಸೃಷ್ಟಿಯಾಗಿದೆ.

# ಕೃತಕ ಬುದ್ಧಿಮತ್ತೆ ನ್ಯಾಯಾಂಗಕ್ಕೆ ಪರ್ಯಾಯವಾಗಿರಬಾರದು

• ಉದಯವಾಹಿನಿ, ಬೆಂಗಳೂರು

'ಕೃತಕ ಬುದ್ಧಿಮತ್ತೆಯು ನ್ಯಾಯಾಂಗ ವ್ಯವಸ್ಥೆಗೆ ಪೂರಕವಾಗಿ ಇರಬೇಕೇ ಹೊರತು, ಪರ್ಯಾಯವಾಗಿ ಅಲ್ಲ. ತಂತ್ರಜ್ಞಾನವನ್ನು ನಮ್ಮ ನೆರವಿಗೆ ಬಳಸಿಕೊಳ್ಳಬೇಕು. ಹಾಗಾಗಿ ಎ.ಐ ಬಗ್ಗೆ ಭಯಪಡುವ ಅಗತ್ಯವಿಲ್ಲ' ಎಂದು ಭಾರತದ ಮುಖ್ಯ ನ್ಯಾಯ ಮೂರ್ತಿ ಸೂರ್ಯಕಾಂತ್ ಹೇಳಿದರು. ಕರ್ನಾಟಕ ರಾಜ್ಯ ನ್ಯಾಯಾಂಗ ಅಧಿಕಾರಿಗಳ ಸಂಘ ಶನಿವಾರ ಆಯೋಜಿಸಿದ್ದ 'ಕೃತಕ ಬುದ್ಧಿಮತ್ತೆಯ ಯುಗದಲ್ಲಿ ನ್ಯಾಯಾಂಗವನ್ನು ಪುನರ್ ಕಲ್ಪಿಸುವುದು' ವಿಷಯದ ಕುರಿತು ನಡೆದ 22ನೇ ದ್ವೈವಾರ್ಷಿಕ ರಾಜ್ಯಮಟ್ಟದ ನ್ಯಾಯಾಂಗ ಅಧಿಕಾರಿಗಳ ಸಮ್ಮೇಳನದಲ್ಲಿ ಅವರು ಮಾತನಾಡಿದರು. 'ನ್ಯಾಯಾಂಗ ವ್ಯವಸ್ಥೆಯಲ್ಲಿ ಎ.ಐ ತಂತ್ರಜ್ಞಾನದ ಅಳವಡಿಕೆ ಮಾಡುವಾಗ ಅದರ ಮಿತಿಗಳ ಬಗ್ಗೆ ಸ್ಪಷ್ಟ ಮತ್ತು ಪ್ರಜ್ಞಾಪೂರ್ವಕ ತಿಳಿವಳಿಕೆಯನ್ನು ಹೊಂದಿರಬೇಕು. ಯಾವುದೇ ತಂತ್ರ ಜ್ಞಾನವು ಮನುಷ್ಯನಿಗೆ ಪರ್ಯಾಯವಾಗಬಾರದು.

ಎ.ಐ ಸಂಯೋಜಿಸುವಾಗ ಸಮತೋಲನದ ತತ್ವವನ್ನು ಪಾಲಿಸಬೇಕು. ದಕ್ಷತೆ ಹೆಚ್ಚಿಸಲು ಬಳಸಿ ಕೊಳ್ಳಬೇಕು. ಆದೇ ಹೊತ್ತಿನಲ್ಲಿ ನ್ಯಾಯದ ಹೃದಯ ಭಾಗದಲ್ಲಿರುವ ಮಾನವ ಬುದ್ಧಿಶಕ್ತಿ, ಅನುಭವ ಮತ್ತು ಸಾಂವಿಧಾನಿಕ ವಿವೇಕವನ್ನು ಅಚಲವಾಗಿ ಕಾಪಾಡಿಕೊಳ್ಳಬೇಕು. ಆಗ ನಿಮ್ಮೊಳಗಿನ ನ್ಯಾಯಾಧೀಶರು ಸ್ವತಂತ್ರರಾಗಿ ಉಳಿಯುತ್ತಾರೆ. ತಾಂತ್ರಿಕ ಪರಿಕರಗಳಿಂದ ಪ್ರಭಾವಿತರಾಗುವುದಿಲ್ಲ' ಎಂದು ಅವರು ಹೇಳಿದರು.

# ಕುವೆಂಪು ವಿ.ವಿ ಹಗರಣ ತನಿಖೆಗೆ ಸಮಿತಿ ನೇಮಕ

• ಉದಯವಾಹಿನಿ, ಬೆಂಗಳೂರು

ಕುವೆಂಪು ವಿಶ್ವವಿದ್ಯಾಲಯದಲ್ಲಿ ಸ್ಮಾರ್ಟ್‌ಕ್ಲಾಸ್‌ಗಳ ನಿರ್ಮಾಣಕ್ಕಾಗಿ ನೀಡಿದ್ದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆಯ ಹಣ ದುರುಪಯೋಗ ಕುರಿತು ತನಿಖೆ ನಡೆಸಲು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಗುರುರಾಜನ್ ಅವರನ್ನು ನೇಮಿಸಲಾಗಿದೆ. ಹಣ ದುರುಪಯೋಗ ಕುರಿತು ನೇಮಕವಾದ ಏಕಸದಸ್ಯ ತನಿಖಾ ಸಮಿತಿಯು ಸೂಕ್ತ ತನಿಖೆ ನಡೆಸಿ, ಒಂದು ತಿಂಗಳ ಒಳಗೆ ವರದಿ ನೀಡುವಂತೆ ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಆದೇಶ ಹೊರಡಿಸಿದ್ದಾರೆ.

ಸಮಿತಿಗೆ ನೆರವು ನೀಡುವ ಜವಾಬ್ದಾರಿಯನ್ನು ಲೋಕಭವನದ ವಕೀಲ ಅಭಿಷೇಕ್ ಕುಮಾರ್ ಅವರಿಗೆ ವಹಿಸಲಾಗಿದೆ. ವಿಶ್ವವಿದ್ಯಾಲಯದಲ್ಲಿ ಸ್ಮಾರ್ಟ್‌ಕ್ಲಾಸ್ ಸೌಲಭ್ಯ ಒದಗಿಸಲು 2022ನೇ ಜನವರಿಯಲ್ಲಿ ರಾಜ್ಯ ಸರ್ಕಾರ 5 ಕೋಟಿ ಅನುದಾನ ಒದಗಿಸಿತ್ತು. ಸ್ನಾತಕೋತ್ತರ ಅಧ್ಯಯನ ವಿಭಾಗಗಳಲ್ಲಿ 'ಸ್ಮಾರ್ಟ್‌ಕ್ಲಾಸ್'ಗಳನ್ನು ಸಿದ್ಧಪಡಿಸಲಾಗಿತ್ತು. ಆದರೆ, ಮಾರುಕಟ್ಟೆ ಬೆಲೆಗಿಂತ ಅಧಿಕ ದರದಲ್ಲಿ ಸಾಮಗ್ರಿಗಳನ್ನು ಖರೀದಿಸಿ ವಂಚಿಸಲಾಗಿದೆ. ಭೌತಿಕ ಪರಿಶೀಲನೆ ನಡೆಸದೆ, ನಗದು ರಸೀದಿ ಪಡೆಯದೆ ಗುತ್ತಿಗೆ ಕಂಪನಿಯೊಂದಕ್ಕೆ 2.99 ಕೋಟಿ ಪಾವತಿಸಲಾಗಿದೆ ಎಂದು ಕೆಲವರು ಉನ್ನತ ಶಿಕ್ಷಣ ಇಲಾಖೆಗೆ ದೂರು ನೀಡಿದ್ದರು.

ಈ ಕುರಿತು ಈಗಾಗಲೇ ಶಿವಮೊಗ್ಗ ಜಿಲ್ಲಾ ನ್ಯಾಯಾಧೀಶ ಎಚ್.ಬಿ.ರವೀಂದ್ರನಾಥ್ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿತ್ತು. ಸಮಿತಿಯು ಅಂದಿನ ಕುಲಪತಿ ಪ್ರೊ.ಬಿ.ಪಿ.ವೀರಭದ್ರಪ್ಪ ಸೇರಿದಂತೆ ಹಲವು ಅಧಿಕಾರಿಗಳು ಲೋಪ ಎಸಗಿದ್ದಾರೆ ಎಂದು ವರದಿ ನೀಡಿತ್ತು. ರಾಜ್ಯ ಸರ್ಕಾರ ಸಲ್ಲಿಸಿದ ಈ ವರದಿಯ ಆಧಾರದಲ್ಲಿ ದೂರುಗಳ ಸತ್ಯಾಸತ್ಯತೆ ಪರಿಶೀಲಿಸಲು ಹೊಸ ಸಮಿತಿ ರಚಿಸಲಾಗಿದೆ.

# ಇಂಧನ ಪರಿವರ್ತನೆಗೆ ಸಂಘಟಿತ ಪ್ರಯತ್ನಗಳು ಅನಿವಾರ್ಯ: ಸಚಿವ

• ಉದಯವಾಹಿನಿ, ಬೆಂಗಳೂರು

ಇಂಧನ ಪರಿವರ್ತನೆಗೆ ನೀತಿ, ನಿಯಂತ್ರಣದ ಜತೆಗೆ ಸಂಘಟಿತ ಪ್ರಯತ್ನಗಳು ಅನಿವಾರ್ಯ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಅವರು ಹೇಳಿದ್ದಾರೆ. ನಗರದಲ್ಲಿ ಕಾಮನ್‌ವೆಲ್ತ್ ಲೀಗಲ್ ಎಜುಕೇಷನ್ ಅಸೋಸಿಯೇಷನ್, ಇಂಧನ ಇಲಾಖೆ ಆಶ್ರಯದಲ್ಲಿ ಆಯೋಜಿಸಿದ್ದ 'ಸುಸ್ಥಿರ ಇಂಧನ, ಭಾರತದ ಕಾರ್ಯಸೂಚಿ 2047-ಇಂಧನ ಭದ್ರತೆಗಾಗಿ ಕಾನೂನು, ನೀತಿ ಹಾಗೂ ಆವಿಷ್ಕಾರಗಳ ಹೊಸ ಚಿಂತನೆ' ಕುರಿತ ಅಂತಾರಾಷ್ಟ್ರೀಯ ಸಮ್ಮೇಳನದ 2ನೇ ದಿನ ಸಮಾರೋಪ ಭಾಷಣ ಮಾಡಿದ ಅವರು, ಸಾಂಪ್ರದಾಯಿಕ ಮೂಲಗಳಿಂದ ನವೀಕರಿಸಬಹುದಾದ ಮೂಲಗಳಿಗೆ ಇಂಧನ ಪರಿವರ್ತನೆಯು ಮಹತ್ವಾಕಾಂಕ್ಷೆಯಾಗಿ ಉಳಿಯದೇ, ಅನುಷ್ಠಾನಕ್ಕೆ ಸಂಘಟಿತ ಕ್ರಮವಹಿಸಬೇಕಿದೆ ಎಂದರು.

'ನ್ಯಾಯಾಂಗ, ನೀತಿ ನಿರೂಪಕರು, ನಿಯಂತ್ರಕರು ಮತ್ತು ಉದ್ಯಮದ ನಡುವಿನ ಅರ್ಥಪೂರ್ಣ ಚರ್ಚೆಗಳಿಗೆ ಈ ಸಮೇಳನ ವೇದಿಕೆಯಾಯಿತು. ಸುಸ್ಥಿರ ಇಂಧನ ಭವಿಷ್ಯವನ್ನು ರೂಪಿಸುವಲ್ಲಿ ಈ ಸಮ್ಮೇಳನದ ನಿರ್ಣಯಗಳು ಪ್ರಮುಖ ಪಾತ್ರ ವಹಿಸುತ್ತವೆ' ಎಂದು ಕೆ.ಜೆ.ಜಾರ್ಜ್ ಅವರು ಹೇಳಿದರು. ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯರ ಮಾರ್ಗದರ್ಶನವು ನ್ಯಾಯಾಂಗ ಮತ್ತು ಇಂಧನ ವಲಯದ ಪ್ರಮುಖರನ್ನು ಒಗ್ಗೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಸಮ್ಮೇಳನದ ಯಶಸ್ಸಿಗೆ ಕಾರಣರಾದ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು, ಸಿಎಲ್‌ಇಎ ಅಧ್ಯಕ್ಷ ಪ್ರೊ. ಡಾ.ಎಸ್.ಶಿವಕುಮಾರ್‌ಗೆ ಧನ್ಯವಾದಗಳು. ಅಲ್ಲದೆ, ಸಮ್ಮೇಳನದಲ್ಲಿ ಪಾಲ್ಗೊಂಡ ದೇಶ-ವಿದೇಶಗಳ ಪ್ರಮುಖ ನ್ಯಾಯಶಾಸ್ತ್ರಜ್ಞರು, ನೀತಿ ನಿರೂಪಕರು, ಉದ್ಯಮ ಹಾಗೂ ಶಿಕ್ಷಣ ತಜ್ಞರ ಕೊಡುಗೆ ಅಪಾರ ಎಂದು ಜಾರ್ಜ್ ಹೇಳಿದರು.

ನವೀಕರಿಸಬಹುದಾದ ಇಂಧನ ವಿಸ್ತರಣೆ, ಸಂಗ್ರಹಣೆಗೆ ಸೂಕ್ತ ವ್ಯವಸ್ಥೆ ಮೂಲಸೌಕರ್ಯ ಬಲವರ್ಧನೆಯ ಮೂಲಕ ಕರ್ನಾಟಕ ತನ್ನ ಮುಂದಾಳತ್ವವನ್ನು ಮುಂದುವರಿಸಲಿದೆ. ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ನಾವೀನ್ಯತೆಯನ್ನು ಬೆಂಬಲಿಸಲು ಮತ್ತು ಸುಸ್ಥಿರ ಭವಿಷ್ಯವನ್ನು ಸಾಧಿಸಲು ಸಹಯೋಗದೊಂದಿಗೆ ಕೆಲಸ ಮಾಡುತ್ತೇವೆ. ಮುಖ್ಯವಾಗಿ ಕೈಗೆಟುಕುವ ದರದಲ್ಲಿ ಎಲ್ಲರಿಗೂ ಗುಣಮಟ್ಟದ ವಿದ್ಯುತ್ ಪೂರೈಸಲು ನಮ್ಮ ಸರಕಾರ ಬದ್ಧವಾಗಿದೆ ಎಂದರು.

ಸಮಾರಂಭದಲ್ಲಿ ಪಾಲ್ಗೊಂಡಿದ್ದ ಸಚಿವ ಎಚ್.ಕೆ.ಪಾಟೀಲ್, 'ಈ ಸಮ್ಮೇಳನದ ನಿರ್ಣಯಗಳು ನವೀಕರಿಸಬಹುದಾದ ಇಂಧನ ವಲಯದಲ್ಲಿ ಮಹತ್ವದ ಬದಲಾವಣೆಗೆ ಕಾರಣವಾಗಲಿವೆ.

ಇಂಧನ ನೀತಿಯನ್ನು ರೂಪಿಸುವಲ್ಲಿ ನ್ಯಾಯಾಂಗದ ಪಾತ್ರ ನಿರ್ಣಾಯಕವಾಗಿದ್ದು, ಈ ಸಮ್ಮೇಳನವು ಅದಕ್ಕೆ ವೇದಿಕೆಯನ್ನು ಒದಗಿಸಿದೆ. ನವೀಕರಿಸಬಹುದಾದ ಇಂಧನ ವಲಯದಲ್ಲಿ ಕರ್ನಾಟಕ 2ನೇ ಸ್ಥಾನದಲ್ಲಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ವಿಷಯ.

ಅದಕ್ಕಾಗಿ ಸಿಎಂ ಸಿದ್ದರಾಮಯ್ಯ ಮತ್ತು ಸಚಿವ ಕೆ.ಜೆ.ಜಾರ್ಜ್‌ರನ್ನು ಅಭಿನಂದಿಸುತ್ತೇನೆ ಎಂದರು.




> 'ಈ ಸಮ್ಮೇಳನವು ನ್ಯಾಯಾಂಗ ಮತ್ತು ಕಾರ್ಯಾಂಗದ ನಡುವೆ ಅರ್ಥಪೂರ್ಣ ಸಂವಾದಕ್ಕೆ ವೇದಿಕೆ ಕಲ್ಪಿಸಿತು.ಭಾರತದ ಇಂಧನ ಪರಿವರ್ತನೆಗೆ ಸಾಂಸ್ಥಿಕ ಸಹಯೋಗವು ನಿರ್ಣಾಯಕವಾಗಿರುತ್ತದೆ'
>
> -ಡಾ.ಶಾಲಿನಿ ರಜನೀಶ್
> ಸರಕಾರದ ಮುಖ್ಯ ಕಾರ್ಯದರ್ಶಿ

> '2047ರ ವೇಳೆಗೆ ಭಾರತದ ಇಂಧನ ಬೇಡಿಕೆ ಸುಮಾರು ನಾಲ್ಕು ಪಟ್ಟು ಹೆಚ್ಚಾಗುವ ಸಾಧ್ಯತೆ ಇದ್ದು, ನವೀಕರಿಸಬಹುದಾದ ಇಂಧನದ ಬಳಕೆಗೆ ಒತ್ತು ನೀಡುವುದೇ ಇದಕ್ಕೆ ಇರುವ ಪರಿಹಾರ. ಇಂಧನ ಭದ್ರತೆಗಾಗಿ ಇಂಧನ ಸಂಗ್ರಹಣಾ ವ್ಯವಸ್ಥೆಗಳು ಮತ್ತು ಸುಧಾರಿತ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವುದು ಅನಿವಾರ್ಯ. ನ್ಯಾಯಾಂಗ, ಸರಕಾರ ಮತ್ತು ಉದ್ಯಮಗಳ ನಡುವಿನ ಸಹಕಾರ ಈ ನಿಟ್ಟಿನಲ್ಲಿ ನಿರ್ಣಾಯಕವಾಗುತ್ತದೆ'
>
> -ಗೌರವ್ ಗುಪ್ತ, ಇಂಧನ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ

# ಡಿಎಂಕೆ ಸ್ವಾರ್ಥಕ್ಕೆ ದಕ್ಷಿಣ ರಾಜ್ಯಗಳ ಹಿತ ಬಲಿ: ಎಚ್.ಡಿ. ಕುಮಾರಸ್ವಾಮಿ

## ■ ಸಂವಿಧಾನ ತಿದ್ದುಪಡಿ ಮಸೂದೆಗಳ ಬಗ್ಗೆ ಒಪ್ಪಿಗೆ ನೀಡಿದ್ದ ಡಿಎಂಕೆ ಪಕ್ಷವು ನಂತರ ಯುಟರ್ನ್

• ಉದಯವಾಹಿನಿ, ಹೊಸದಿಲ್ಲಿ

'ತಮಿಳುನಾಡಿನ ಡಿಎಂಕೆ ಪಕ್ಷದ ರಾಜಕೀಯ ಸ್ವಾರ್ಥಕ್ಕೆ ದಕ್ಷಿಣದ ರಾಜ್ಯಗಳ ಹಿತ ಬಲಿಯಾಗಿದೆ' ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ನೇರ ಆರೋಪ ಮಾಡಿದ್ದಾರೆ.

'ಮೊದಲು ಸಂವಿಧಾನ ತಿದ್ದುಪಡಿ ಮಸೂದೆಗಳ ಬಗ್ಗೆ ಒಪ್ಪಿಗೆ ನೀಡಿದ್ದ ಡಿಎಂಕೆ ಪಕ್ಷವು ನಂತರ ಯುಟರ್ನ್ ಹೊಡೆಯಿತು. ಇದರಿಂದ ದಕ್ಷಿಣ ರಾಜ್ಯಗಳಿಗೆ ಸಿಕ್ಕಿದ್ದ ಬಂಗಾರದಂತಹ ಅವಕಾಶ ತಪ್ಪಿಹೋಯಿತು. ಡಿಎಂಕೆ ಮತ್ತು ಕಾಂಗ್ರೆಸ್ ಜನರಲ್ಲಿ ವಿನಾಕಾರಣ ಗೊಂದಲ-ಭೀತಿ ಸೃಷ್ಟಿಸುತ್ತಿವೆ' ಎಂದು ದೂರಿದರು.

ಕೆಲದಿನಗಳ ಹಿಂದೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಕರೆದಿದ್ದ ಸಭೆಯಲ್ಲಿ ಭಾಗಿಯಾಗಿದ್ದ ಡಿಎಂಕೆ ನಾಯಕರಿಗೆ ಮಹಿಳಾ ಮೀಸಲು ಹಾಗೂ ಕ್ಷೇತ್ರ ಮರುವಿಂಗಡಣೆ ಮಸೂದೆಗಳ ಬಗ್ಗೆ ಮನವರಿಕೆ ಮಾಡಿಕೊಡಲಾಗಿತ್ತು. ಅದಾದ ಮೇಲೆ ಮಾಧ್ಯಮ ಹೇಳಿಕೆ ನೀಡಿದ್ದ ತಮಿಳುನಾಡು ಸಿಎಂ ಎಂ.ಕೆ. ಸ್ಟಾಲಿನ್, 'ಈ ಮಸೂದೆಗಳನ್ನು ಪಾಸ್ ಮಾಡಲು ಜೂನ್ ತಿಂಗಳಲ್ಲಿ ಸಂಸತ್ ಅಧಿವೇಶನ ಕರೆಯಿರಿ' ಎಂದು ಕೇಂದ್ರಕ್ಕೆ ಸಲಹೆ ಮಾಡಿದ್ದರು. ಕೂಡಲೇ ಮಸೂದೆಗಳನ್ನು ಸಂಸತ್ತಿನಲ್ಲಿ ಅಂಗೀಕರಿಸಿದರೆ ಚುನಾವಣೆಯಲ್ಲಿ ತನಗೆ ಧಕ್ಕೆ ಆಗಬಹುದೆಂಬ ಕಾರಣಕ್ಕೆ ಆ ಪಕ್ಷವು ಮಸೂದೆಗಳಿಗೆ ಬೆಂಬಲ ನೀಡಲಿಲ್ಲ ಎಂದು ಟೀಕಿಸಿದರು.

ದಕ್ಷಿಣದ ರಾಜ್ಯಗಳಿಗೆ ಈ ತಿದ್ದುಪಡಿ ಮಸೂದೆಗಳಿಂದ ಅನ್ಯಾಯವಾಗುತ್ತಿದೆ ಎಂದು ಡಿಎಂಕೆ ಹೇಳುತ್ತಿರುವುದರಲ್ಲಿ ಸತ್ಯಾಂಶವಿಲ್ಲ. ಹಾಗೆ ನೋಡಿದರೆ ಡಿಎಂಕೆಯಿಂದಲೇ ದಕ್ಷಿಣಕ್ಕೆ ಅನ್ಯಾಯವಾಗುತ್ತಿದೆ.

ಒಂದು ವೇಳೆ ಅನ್ಯಾಯ ಆಗುವುದೇ ಆಗಿದ್ದರೆ ಕರ್ನಾಟಕದ ಸಿಎಂ ಸಿದ್ದರಾಮಯ್ಯ, ತೆಲಂಗಾಣ ಸಿಎಂ ರೇವಂತ್ ರೆಡ್ಡಿ ಹಾಗೂ ಆಂಧ್ರ ಸಿಎಂ ಚಂದ್ರಬಾಬು ನಾಯ್ಡು ಆಕ್ಷೇಪ ಎತ್ತಲಿಲ್ಲವೇಕೆ?. ನಾಯ್ಡು ಅವರಂತೂ ಮಸೂದೆಗಳಿಗೆ ಮುಕ್ತ ಬೆಂಬಲ ನೀಡಿದರು ಎಂದು ಕುಮಾರಸ್ವಾಮಿ ತಿಳಿಸಿದರು.

ಜನಸಂಖ್ಯೆ ನಿಯಂತ್ರಣದಲ್ಲಿ ಉತ್ತಮ ಸಾಧನೆ ಮಾಡಿ, ರಾಷ್ಟ್ರೀಯ ನೀತಿಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತಂದಿರುವ ಈ ಐದು ರಾಜ್ಯಗಳಿಗೆ ಅನ್ಯಾಯ ಆಗಬಾರದೆಂಬ ಏಕೈಕ ಉದ್ದೇಶದಿಂದ ಕೇಂದ್ರವು ಎಲ್ಲರಿಗೂ ಸಮಾನ ನ್ಯಾಯ ನೀಡುವ ಸಲುವಾಗಿ ಪ್ರತೀರಾಜ್ಯದ ಲೋಕಸಭೆ ಕ್ಷೇತ್ರಗಳ ಸಂಖ್ಯೆಯನ್ನು ಸರಾಸರಿ ಶೇ.50ರಷ್ಟು ಹೆಚ್ಚಿಸುವುದಾಗಿ ಹೇಳಿತು. ಲೋಕಸಭೆಯಲ್ಲಿ ಈ ಬಗ್ಗೆ ಅಮಿತ್ ಶಾ ಯಾವುದೇ ಗೊಂದಲಕ್ಕೆ ಅವಕಾಶವಿಲ್ಲದಂತೆ ಅಂಕಿ-ಅಂಶಗಳ ಸಮೇತ ವಿವರಿಸಿದರು. ಹಾಗಿದ್ದರೂ ಕಾಂಗ್ರೆಸ್ ತನ್ನ ಪ್ರತಿಷ್ಠೆಗಾಗಿ ತಾನೂ ದಾರಿ ತಪ್ಪಿದ್ದಲ್ಲದೆ, ತನ್ನ ಮಿತ್ರಪಕ್ಷಗಳನ್ನು ದಿಕ್ಕುತಪ್ಪಿಸಿತು.



ಈಗ ದಕ್ಷಿಣದ ರಾಜ್ಯಗಳಿಗೆ ಆಗುತ್ತಿರುವ ಅನ್ಯಾಯವನ್ನು ಯಾರು ಸರಿಪಡಿಸುತ್ತಾರೆ? ಎಂದು ಕುಮಾರಸ್ವಾಮಿ ಪ್ರಶ್ನಿಸಿದರು.

**ಬ್ರದರ್‌ಗಳ ನಡುವೆ ಹೊಂದಾಣಿಕೆ ಇಲ್ಲ:** ಪಶ್ಚಿಮ ಬಂಗಾಳದಲ್ಲಿ ತೃಣಮೂಲ ಕಾಂಗ್ರೆಸ್ ಮತ್ತು ಕಾಂಗ್ರೆಸ್ ಕಿತ್ತಾಡುತ್ತಿವೆ. ನಾವೇ ಸ್ವಂತ ಬಲದಿಂದ ಸರಕಾರ ಮಾಡುತ್ತೇವೆಂದು ಆ ರಾಜ್ಯದ ಕಾಂಗ್ರೆಸ್ ಸಮಿತಿ ಅಧ್ಯಕ್ಷರು ಹೇಳಿಕೆ ನೀಡಿದ್ದಾರೆ.

ಹಾಗೆಯೇ, ತಮಿಳುನಾಡಿನಲ್ಲಿ ದೊಡ್ಡ ಬ್ರದರ್ (ಸ್ಟಾಲಿನ್) ಮತ್ತು ಚಿಕ್ಕ ಬ್ರದರ್ (ರಾಹುಲ್ ಗಾಂಧಿ) ನಡುವೆ ಹೊಂದಾಣಿಕೆ ಆಗುತ್ತಿಲ್ಲ ಎಂದು ಕುಮಾರಸ್ವಾಮಿ ಟೀಕಿಸಿದರು.

ಕ್ಷೇತ್ರ ಮರುವಿಂಗಡಣೆ ಇದೇ ಮೊದಲಲ್ಲ. ನೆಹರು ಅವರ ಕಾಲದಿಂದಲೂ ನಡೆದುಕೊಂಡು ಬಂದಿದೆ. ಮೋದಿ ಬಂದು ಹೊಸದಾಗಿ ಮಾಡಿದ್ದಲ್ಲ. ಈ ಉದ್ದೇಶಕ್ಕಾಗಿ ರಚಿಸುವ ಆಯೋಗಕ್ಕೆ ರಾಜ್ಯ ವಿಧಾನಸಭೆಗಳ ಸ್ಪೀಕರ್‌ಗಳು ಹಾಗೂ ಲೋಕಸಭೆ ಸ್ಪೀಕರ್ ಸೇರಿ ಸದಸ್ಯರನ್ನು ನೇಮಕ ಮಾಡುತ್ತಾರೆ. ಆ ಆಯೋಗ ವರದಿ ನೀಡಿದ ನಂತರ ಅದರ ಬಗ್ಗೆ ಸಂಸತ್ತು ಅಂತಿಮ ನಿರ್ಧಾರ ಕೈಗೊಳ್ಳುತ್ತದೆ. ಕಾಂಗ್ರೆಸ್ ಆಡಳಿತಾವಧಿಯಲ್ಲಿ ಎಷ್ಟು ಸಲ ಕ್ಷೇತ್ರ ಮರು ವಿಂಗಡಣೆ ಆಗಿದೆ ಎನ್ನುವುದು ರಾಹುಲ್ ಗಾಂಧಿಗೆ ಗೊತ್ತಿಲ್ಲವೇ? ದುರಂತವೆಂದರೆ, ಈ ಪಕ್ಷಕ್ಕೆ ವ್ಯವಸ್ಥೆ ಮೇಲೆಯೇ ನಂಬಿಕೆ ಇಲ್ಲ ಎಂದು ಅವರು ವಾಗ್ದಾಳಿ ನಡೆಸಿದರು.

ರಾಷ್ಟ್ರದಲ್ಲಿ ಅರ್ಧದಷ್ಟಿರುವ ಮಹಿಳೆಯರಿಗೆ ಘೋರ ಅನ್ಯಾಯವನ್ನು ಕಾಂಗ್ರೆಸ್ ಮೈತ್ರಿಕೂಟ ಮಾಡಿದೆ. ಇದಕ್ಕೆ ಕ್ಷಮೆ ಇಲ್ಲ. ಮುಂದಿನ ದಿನಗಳಲ್ಲಿ ಮಹಿಳೆಯರೇ ಇವರಿಗೆಲ್ಲಾ ತಕ್ಕ ಶಾಸ್ತಿ ಮಾಡಲಿದ್ದಾರೆ ಎಂದು ಎಚ್ಚರಿಸಿದ ಕುಮಾರಸ್ವಾಮಿ, ತನ್ನ ರಾಜಕೀಯ ಸ್ವಾರ್ಥಕ್ಕಾಗಿ ಕರ್ನಾಟಕ ಕಾಂಗ್ರೆಸ್ ಸರಕಾರ ಬಿಬಿಎಂಪಿಯನ್ನು ತೆಗೆದು ಗ್ರೇಟರ್ ಬೆಂಗಳೂರು ಪ್ರಾಧಿಕಾರ ಎಂದು ಮಾಡಿದೆ ಎಂದು ಕೆಂಡಾಮಂಡಲವಾಗಿ ದೂರಿದರು.

### ಅನ್ಯಾಯ ಆಗುತ್ತಿರಲಿಲ್ಲ

**ಸ್ವತಃ ನಾನು ದಕ್ಷಿಣ ರಾಜ್ಯಗಳ ಜನಪ್ರತಿನಿಧಿಯಾಗಿ ಹೇಳುತ್ತಿದ್ದೇನೆ. ದಕ್ಷಿಣದ ಐದು ರಾಜ್ಯಗಳಿಗೆ ಸಿಗಲಿದ್ದ ಸುವರ್ಣಾವಕಾಶವನ್ನು ಡಿಎಂಕೆ ಹಾಳು ಮಾಡಿದೆ. ನಮಗೆ ಸಿಗಲಿದ್ದ ಉತ್ತಮ ಪಾಲು ಸಿಗದಂತೆ ಆ ಪಕ್ಷ ಮಾಡಿ ಅನ್ಯಾಯವೆಸಗಿದೆ. ಕರ್ನಾಟಕದ ಲೋಕಸಭೆ ಕ್ಷೇತ್ರಗಳ ಸಂಖ್ಯೆ 28ರಿಂದ 42ಕ್ಕೆ ಹೆಚ್ಚುತ್ತಿತ್ತು. ಈ ಅವಕಾಶ ತಪ್ಪಿಹೋಗಿದೆ. ಇದನ್ನು ಡಿಎಂಕೆ ಅಥವಾ ಕಾಂಗ್ರೆಸ್‌ನಿಂದ ಸರಿಪಡಿಸಲು ಸಾಧ್ಯವೇ?. ಈ ಬಗ್ಗೆ ರಾಹುಲ್ ಗಾಂಧಿ ಉತ್ತರಿಸಬೇಕಿದೆ ಎಂದು ಕುಮಾರಸ್ವಾಮಿ ಒತ್ತಾಯಿಸಿದರು. ಪ್ರತೀ ರಾಜ್ಯಕ್ಕೂ ಶೇ.50ರ ಅನುಪಾತದಲ್ಲಿ ಕ್ಷೇತ್ರಗಳನ್ನು ಹೆಚ್ಚಿಸಿದಾಗ ಉತ್ತರದ ಕೆಲ ರಾಜ್ಯಗಳ ಸಂಖ್ಯೆಯ ಬಗ್ಗೆ ಸುಳ್ಳು ಸಂಕಥನಗಳನ್ನು ಸ್ವತಃ ಕಾಂಗ್ರೆಸ್ ಹಾಗೂ ಅದರ ಮಿತ್ರಪಕ್ಷಗಳು ವ್ಯವಸ್ಥಿತವಾಗಿ ಹರಡಿದವು. ಡಿಎಂಕೆ ಹಠಮಾರಿತನದಿಂದ ದಕ್ಷಿಣ ರಾಜ್ಯಗಳಿಗೆ ದೊಡ್ಡ ಅನ್ಯಾಯವಾಗಿದೆ. ನೆಹರೂ ಕಾಲದಿಂದ ನಡೆದುಕೊಂಡು ಬಂದ ಕ್ಷೇತ್ರ ಮರುವಿಂಗಡಣೆ ವ್ಯವಸ್ಥೆ ಸುಧಾರಣೆಗೆ ಬೆಂಬಲ ನೀಡುವ ಬದಲು, ತನ್ನ ಮತದಾರರ ಗಮನವನ್ನು ಬೇರೆಡೆಗೆ ಸೆಳೆಯಲು ಈ ಅವಕಾಶವನ್ನು ದುರ್ಬಳಕೆ ಮಾಡಿಕೊಂಡಿತು. ಕರ್ನಾಟಕ, ಕೇರಳ, ಆಂಧ್ರ, ತೆಲಂಗಾಣ ಹಾಗೂ ಸ್ವತಃ ತಮಿಳುನಾಡಿಗೆ ಆಗಿರುವ ಈ ಐತಿಹಾಸಿಕ ಅನ್ಯಾಯಕ್ಕೆ ನೇರವಾಗಿ ಡಿಎಂಕೆ ಪಕ್ಷವೇ ಕಾರಣ ಎಂದು ಅವರು ಅರೋಪಿಸಿದರು.**

**ಈ ದಿನದ ದರ** ಪೆಟ್ರೋಲ್: 103.33 ₹/L | ಡೀಸೆಲ್ : 90.99 ₹/L | ಬಂಗಾರ: ₹15,578/Gram24ct ₹14,280/Gram22ct | ಬೆಳ್ಳಿ: ₹275.00/Gram

# ಜಿಬಿಎ ಅಂತಿಮ ಮತದಾರರ ಪಟ್ಟಿ ಪ್ರಕಟ


## ಮತದಾರರ ಸಂಖ್ಯೆ 88,95,361ಕ್ಕೆ ಏರಿಕೆ, ಯಾವ್ಯಾವ ಪಾಲಿಕೆಗಳಲ್ಲಿ ಎಷ್ಟು ?

• ಉದಯವಾಹಿನಿ, ಬೆಂಗಳೂರು

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಐದು ನಗರ ಪಾಲಿಕೆಗಳ ವ್ಯಾಪ್ತಿಗೆ ಸಂಬಂಧಿಸಿದಂತೆ ಅಂತಿಮ ಮತದಾರರ ಪಟ್ಟಿ ಪ್ರಕಟಿಸಲಾಗಿದೆ. ನಗರದಲ್ಲಿ ಒಟ್ಟು 88,95,361 ಮತದಾರರಿದ್ದಾರೆ. ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಜಿಲ್ಲಾ ಚುನಾವಣಾಧಿಕಾರಿಯೂ ಆಗಿರುವ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ ರಾವ್, ಮಾ.9ರಂದು ಪರಿಷ್ಕೃತ ಕರಡು ಮತದಾರರ ಪಟ್ಟಿ ಪ್ರಕಟಿಸಲಾಗಿತ್ತು. ಇದಕ್ಕೆ ಸಂಬಂಧಿಸಿದಂತೆ ಮತದಾರರು ಹಾಗೂ ರಾಜಕೀಯ ಪಕ್ಷಗಳು ಸಲ್ಲಿಸಿದ್ದ ದೂರು ಮತ್ತು ಆಕ್ಷೇಪಣೆಗಳಂತೆ ಕೆಲ ಮಾರ್ಪಾಡುಗಳೊಂದಿಗೆ ಅಂತಿಮ ಮತದಾರರ ಪಟ್ಟಿ ಬಿಡುಗಡೆ ಮಾಡಲಾಗಿದೆ. ಪರಿಷ್ಕೃತ ಕರಡು ಮತದಾರರ ಪಟ್ಟಿಯಲ್ಲಿ 88,92,528 ಮತದಾರರು ಇದ್ದರು. ಇದೀಗ 2,833ರಷ್ಟು ಹೆಚ್ಚಳದೊಂದಿಗೆ ಮತದಾರರ ಸಂಖ್ಯೆ 88,95,361ಕ್ಕೆ ಏರಿಕೆಯಾಗಿದೆ ಎಂದು ಹೇಳಿದರು.

45,71,169 ಪುರುಷ ಮತದಾರರು, 43,22,557 ಮಹಿಳೆಯರು ಹಾಗೂ 1635 ಮಂದಿ ಇತರೆ ಮತದಾರರು ಇದ್ದಾರೆ. 5 ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ 8023 ಮತಗಟ್ಟೆಗಳನ್ನು ಸ್ಥಾಪಿಸಲಾಗುತ್ತದೆ,'' ಎಂದು ತಿಳಿಸಿದರು.

ಐದು ಪಾಲಿಕೆಗಳ 369 ವಾರ್ಡ್‌ಗಳ ಪೈಕಿ ಬೆಂಗಳೂರು ದಕ್ಷಿಣ ನಗರ ಪಾಲಿಕೆಯ ಸುಬ್ರಮಣ್ಯಪುರ ವಾರ್ಡ್‌ನಲ್ಲಿ ಅತಿ ಹೆಚ್ಚು ಮತದಾರರು (53,660) ಹಾಗೂ ಬೆಂಗಳೂರು ಪೂರ್ವ ನಗರ ಪಾಲಿಕೆಯ ವಿಜ್ಞಾನನಗರ ವಾರ್ಡ್ ಅತಿ ಕಡಿಮೆ ಮತದಾರರಿರುವ ವಾರ್ಡ್ ಆಗಿದೆ, ಎಂದು ಹೇಳಿದರು.




ಪೂರಕ ಪಟ್ಟಿಯಲ್ಲಿ ಹೆಸರು ಸೇರ್ಪಡೆಗೆ ಅವಕಾಶ ಸಾರ್ವಜನಿಕರು ವಾರ್ಡ್‌ವಾರು ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಇದೆಯೇ ಅಥವಾ ಇಲ್ಲವೇ ಎಂಬುದನ್ನು ಜಿಬಿಎ ಅಧಿಕೃತ ವೆಬ್‌ಸೈಟ್‌ನಲ್ಲಿ ವೀಕ್ಷಿಸಿ ಖಚಿತಪಡಿಸಿಕೊಳ್ಳಬಹುದಾಗಿದೆ. ಒಂದೊಮ್ಮೆ ಅಂತಿಮ ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆಯಾಗದಿದ್ದರೆ, ಹೊಸದಾಗಿ ಅರ್ಜಿ ಸಲ್ಲಿಸಿ ಪೂರಕ ಪಟ್ಟಿಯಲ್ಲಿ ಹೆಸರು ಸೇರಿಸಿಕೊಳ್ಳಬಹುದು.

ಬೂತ್ ಲೆವೆಲ್ ಏಜೆಂಟ್ ನೇಮಕ ನೋಂದಾಯಿತ ಮತ್ತು ಮಾನ್ಯತೆ ಪಡೆದ ರಾಜಕೀಯ ಪಕ್ಷಗಳು ಪ್ರತಿ ವಾರ್ಡ್‌ನ ಪ್ರತಿ ಮತಗಟ್ಟೆಗೆ ಒಬ್ಬರು ಬೂತ್ ಲೆವೆಲ್ ಏಜೆಂಟರುಗಳನ್ನು ನೇಮಕ ಮಾಡಿ, ಅರ್ಹ ಮತದಾರರ ನೋಂದಣಿಗೆ ಮತಗಟ್ಟೆ ಅಧಿಕಾರಿಗಳೊಂದಿಗೆ ಸಹಕರಿಸಬೇಕೆಂದು ಜಿಲ್ಲಾ ಚುನಾವಣಾಧಿಕಾರಿಗಳು ಕೋರಿದ್ದಾರೆ.

> **ಗ್ರೇಟರ್ ಬೆಂಗಳೂರು ಪ್ರಾಧಿಕಾರ ನಗರದ ಪಾಲಿಕೆಗಳಿಗೆ ಸಂಬಂಧಿಸಿದಂತೆ ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಿದೆ. ಈ ಪಟ್ಟಿಯಲ್ಲಿ ಒಟ್ಟು 88,95,361 ಮತದಾರರಿದ್ದು, ಈ ಪೈಕಿ ಪುರುಷ ಮತದಾರರ ಸಂಖ್ಯೆ 45,71,169, ಮಹಿಳಾ ಮತದಾರರ ಸಂಖ್ಯೆ 43,22,557 ಹಾಗೂ ಇತರೆ ಮತದಾರರ ಸಂಖ್ಯೆ 1635 ಆಗಿದೆ. ಇನ್ನು, ನಗರದಲ್ಲಿ ಒಟ್ಟು 8023 ಮತಗಟ್ಟೆಗಳನ್ನು ಸ್ಥಾಪಿಸಲಾಗುತ್ತದೆ.**
> –ಮಹೇಶ್ವರ ರಾವ್, ಜಿಬಿಎ ಮುಖ್ಯ ಆಯುಕ್ತ

### ಜಿಬಿಎ ಅಂತಿಮ ಮತದಾರರ ಪಟ್ಟಿಯ ಸಂಪೂರ್ಣ ವಿವರ

- ಪಾಲಿಕೆಗಳ ಸಂಖ್ಯೆ: 5 ಪಾಲಿಕೆಗಳು
- ಪುರುಷ ಮತದಾರರ ಸಂಖ್ಯೆ: 45,71,169
- ಮಹಿಳಾ ಮತದಾರರ ಸಂಖ್ಯೆ: 43,22,557
- ಇತರೆ ಮತದಾರರು: 1635
- ಒಟ್ಟು ಮತದಾರರು: 88,95,361
- ಮತಗಟ್ಟೆಗಳು: 8023
- ಅತಿಹೆಚ್ಚು ಮತದಾರರಿರುವ ವಾರ್ಡ್: ಸುಬ್ರಮಣ್ಯಪುರ ವಾರ್ಡ್(53,660)
- ಅತಿ ಕಡಿಮೆ ಮತದಾರರಿರುವ ವಾರ್ಡ್: ವಿಜ್ಞಾನನಗರ(12,897)

# ಅಕ್ಷಯ ತೃತೀಯ; ಶ್ರೀ ರಾಘವೇಂದ್ರ ಸ್ವಾಮಿಗಳ ಬೃಂದಾವನಕ್ಕೆ ಸಂಪೂರ್ಣ ಶ್ರೀಗಂಧ ಲೇಪನ ಅಲಂಕಾರ

• ಉದಯವಾಹಿನಿ, ಬೆಂಗಳೂರು

ಜಯನಗರದ 5ನೇ ಬಡಾವಣೆ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪರಮಪೂಜ್ಯ ಶ್ರೀ1008 ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಆದೇಶದಂತೆ ಶ್ರೀ ಮಠದ ಹಿರಿಯ ವ್ಯವಸ್ಥಾಪಕರಾದ ಶ್ರೀ ಆರ್.ಕೆ. ವಾದೀಂದ್ರ ಆಚಾರ್ಯರ ನೇತೃತ್ವದಲ್ಲಿ ಅಕ್ಷಯ ತೃತೀಯ



ಪ್ರಯುಕ್ತ ಶ್ರೀ ಶ್ರೀ ಪಾದಂಗಳವರ ಆಜ್ಞಾನುಸಾರ ಶ್ರೀಮಠದಲ್ಲಿ ಪ್ರತಿ ವರ್ಷದಂತೆ ವೈಶಾಖ ಶುಕ್ಲಪಕ್ಷ ತೃತೀಯ ಸೋಮವಾರ ದಿನಾಂಕ 20-04-2026 ಅಕ್ಷಯ ತೃತೀಯ ಪ್ರಯುಕ್ತ ಶ್ರೀರಾಘವೇಂದ್ರ ಸ್ವಾಮಿಗಳವರ ಬೃಂದಾವನಕ್ಕೆ ಶ್ರೀಗಂಧಲೇಪನ, ವಿಶೇಷ ಸೇವೆಗಳನ್ನು ಏರ್ಪಡಿಸಲಾಗಿದೆ. ಭಕ್ತರು ಈ ಸೇವೆಯಲ್ಲಿ ಭಾಗವಹಿಸಿ ಶ್ರೀ ಹರಿವಾಯು ಗುರುಗಳ ಅನುಗ್ರಹಕ್ಕೆ ಪಾತ್ರರಾಗುವುದು. ಸಂಪೂರ್ಣ ಸೇವೆ,ಉದಯಸ್ತಮಾನ ಸೇವೆ, ನೂತನ ವಸ್ತ ಸೇವೆ, ಹೂವಿನ ಅಲಂಕಾರ ಸೇವೆ, ಸಾಮೂಹಿಕ ಅನ್ನದಾನ ಸೇವೆ, ಪ್ರಹ್ಲಾದರಾರಿಗೆ ರತ್ನಕವಚ ಸೇವೆ, ಶ್ರೀರಾಘವೇಂದ್ರ, ಅಪಾಕ್ಷರ ಹೋಮ, ಶ್ರೀಗಂಧಲೇಪನ ಸಾಮೂಹಿಕ ಸೇವೆ, ಶ್ರೀರಾಘವೇಂದ್ರ, ಅಪ್ಲಾಕ್ಷರ ಹೋಮ ಸಾಮೂಹಿಕ, ಫಲ ಪಂಚಾಮೃತ ಅಭಿಷೇಕ, ಸಂಪೂರ್ಣ ಅಲಂಕಾರ ಸೇವೆ, ಶ್ರೀಗಂಧಲೇಪನ ವಿಶೇಷ ಸೇವೆ.

# ಪ್ರತಿಯೊಂದು ಸಮುದಾಯಕ್ಕೂ ಸಂವಿಧಾನ ಅಗತ್ಯ:ಅಂಬರೀಶ್



ಉದಯವಾಹಿನಿ ಚಿತ್ರ

• ಉದಯವಾಹಿನಿ, ಕೆ.ಆರ್.ಪುರ

ಪ್ರತಿಯೊಂದು ಸಮುದಾಯಕ್ಕೂ ಸಂವಿಧಾನ ಅಗತ್ಯವಿದೆ ಎಂದು ದಲಿತ ಸಂಘರ್ಷ ಸಮಿತಿ ಪೂರ್ವ ತಾಲ್ಲೂಕು ಸಂಚಾಲಕ ಕುರುಡುಸೊಣ್ಣೆನಹಳ್ಳಿ ಅಂಬರೀಶ್ ತಿಳಿಸಿದರು. ಮಹದೇವಪುರ ಕ್ಷೇತ್ರದ ಕುರುಡು ಸೊಣ್ಣೆನಹಳ್ಳಿ ಗ್ರಾಮದಲ್ಲಿ ಡಾ.ಬಿ. ಆರ್ ಅಂಬೇಡ್ಕರ್ ರವರ ಜಯಂತಿಯಲ್ಲಿ ಭಾಗಿಯಾಗಿ ಮತನಾಡಿ ಅವರು. ಅಂಬೇಡ್ಕರ್ ಅವರ ಸಮಾನತೆ ಹಾಗೂ ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಿದ ಮಹಾಪುರುಷ, ಅವರು ಕೊಟ್ಟು ಸಂವಿಧಾನಕ್ಕೆ ಪ್ರತಿಯೊಬ್ಬರು ಗೌರವಿಸಬೇಕಿದೆ ಎಂದರು. ಈ ಸಂದರ್ಭದಲ್ಲಿ ಸ್ಥಳೀಯ ಮುಖಂಡರಾದ ಅನಿಲ್ ಕುಮಾರ್, ಅಕ್ಷಯ್, ಚಿಂಟು, ವಿನೋದ್ ಮತ್ತಿತರರು ಉಪಸ್ಥಿತರಿದ್ದರು.

# ತ್ಯಾಗರಾಜನಗರ ರಾಯರ ಮಠದಲ್ಲಿ ಶ್ರೀನಿವಾಸ ಕಲ್ಯಾಣ ಪ್ರವಚನ ಕಲ್ಯಾಣೋತ್ಸವ

• ಉದಯವಾಹಿನಿ, ಬೆಂಗಳೂರು



ಉದಯವಾಹಿನಿ ಚಿತ್ರ

ತ್ಯಾಗರಾಜನಗರದ 11ನೇ ಅಡ್ಡರಸ್ತೆಯಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ವೈಶಾಖ ಮಾಸದ ಪ್ರಯುಕ್ತ ಏಪ್ರಿಲ್ 21 ರಿಂದ 25ರ ವರೆಗೆ ಪ್ರತಿದಿನ ಸಂಜೆ 6-30ಕ್ಕೆ ಮ||ಶಾ||ಸಂ|| ಶ್ರೀ ಪುರಂದರ ಹಯಗ್ರೀವಾಚಾರ್ಯರಿಂದ ಶ್ರೀನಿವಾಸ ಕಲ್ಯಾಣ ಪ್ರವಚನ ಮತ್ತು 26, ಭಾನುವಾರ ಸಂಜೆ 6-00ಕ್ಕೆ ಮ||ಶಾ||ಸಂ|| ಶ್ರೀ ಕಂಬಾಲೂರು ಪವಮಾನಾಚಾರ್ಯರ ನೇತೃತ್ವದಲ್ಲಿ ಶ್ರೀ ಶ್ರೀನಿವಾಸ ಕಲ್ಯಾಣೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ಶ್ರೀಮಠದ ಪದಾಧಿಕಾರಿಗಳು ತಿಳಿಸಿದ್ದಾರೆ.

# ಸರಣಿ ಅಪಘಾತದಲ್ಲಿ ಇಬ್ಬರ ಸಾವು

• ಉದಯವಾಹಿನಿ, ಹೊಸಪೇಟೆ

ತಾಲ್ಲೂಕಿನ ಡಾಣಾಪುರ ಬಳಿಯ ರಾಷ್ಟ್ರೀಯ ಹೆದ್ದಾರಿ 50ರಲ್ಲಿ ಇಂದು ಬೆಳಿಗ್ಗೆ ಸಂಭವಿಸಿದ ಸರಣಿ ಅಪಘಾತದಲ್ಲಿ ಇಬ್ಬರು ಮೃತಪಟ್ಟಿದ್ದು, 21ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಬೈಕ್‌ನಲ್ಲಿದ್ದ ಸುಜಾತ (40) ಮತ್ತು ದುರ್ಗಪ್ಪ(55) ಅಪಘಾತದಲ್ಲಿ ಮೃತಪಟ್ಟಿದ್ದಾರೆ ಎಂದು ಪೊಲೀಸರು ಈ ಸಂಜೆಗೆ ತಿಳಿಸಿದ್ದಾರೆ. ಕಾರು, ಕೆಎಸ್‌ಆರ್ ಟಿಸಿ ಬಸ್, ಲಾರಿ, ಬೈಕ್ ನಡುವೆ ಈ ಸರಣಿ ಅಪಘಾತ ನಡೆದಿದ್ದು, ವಾಹನಗಳಿಗೆ ಡಿಕ್ಕಿ ಹೊಡೆದ ರಭಸಕ್ಕೆ ಬೆಳ್ಳುಳ್ಳಿ ಸಾಗಿಸುತ್ತಿದ್ದ ಲಾರಿ ಪಲ್ಟಿಯಾಗಿ ರಸ್ತೆ ಪಕ್ಕ ಉರುಳಿ ಬಿದ್ದಿದೆ.ಗಾಯಗೊಂಡವರನ್ನು ಹೊಸಪೇಟೆ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಲಾಗಿದೆ. ಇವರಲ್ಲಿ ಇಬ್ಬರ ಸ್ಥಿತಿ ಚಿಂತಾಜನಕವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಬೆಳಿಗ್ಗೆ 9.20 ರ ಸುಮಾರಿನಲ್ಲಿ ಹೊಸಪೇಟೆ ಮಾರ್ಗವಾಗಿ ಬೆಳ್ಳುಳ್ಳಿ ತುಂಬಿದ ಲಾರಿ ಚಿತ್ರದುರ್ಗಕ್ಕೆ ತೆರಳುತ್ತಿತ್ತು. ಲಾರಿಚಾಲಕ ವೇಗವಾಗಿ ಚಲಿಸುತ್ತಿದ್ದಾಗ ಬಿಎಂಎಂ ಫ್ಯಾಕ್ಟರಿ ಬಳಿ ಎದುರಿಗೆ ಬರುತ್ತಿದ್ದ ಬೈಕ್‌ಗೆ ಗುದ್ದಿ ತಪ್ಪಿಸಿಕೊಳ್ಳಲು ಹೋಗಿ ಕಾರು, ಕೆಎಸ್‌ಆರ್‌ಟಿಸಿ ಬಸ್ಸಿಗೆ ಡಿಕ್ಕಿ ಹೊಡೆದು ರಸ್ತೆ ಬದಿ ಉರುಳಿಬಿದ್ದಿದೆ. ಈ ಅವಘಡದಲ್ಲಿ ಬಹುತೇಕ ಎಲ್ಲಾ ವಾಹನಗಳು ಜಖಂಗೊಂಡಿದ್ದು ರಾಷ್ಟ್ರೀಯ ಹೆದ್ದಾರಿಯಲ್ಲಿ ಭಾರೀ ಸಂಚಾರ ದಟ್ಟಣೆ ಉಂಟಾಗಿತ್ತು. ಸುದ್ದಿ ತಿಳಿದು ಸ್ಥಳಕ್ಕೆ ಬಂದ ಹಿರಿಯ ಪೊಲೀಸ್ ಅಧಿಕಾರಿಗಳು ರಕ್ಷಣಾ ಕಾರ್ಯದಲ್ಲಿ ತೊಡಗಿದರು. ಈ ಬಗ್ಗೆ ಮರಿಯಮನಹಳ್ಳಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

# ಜಕ್ಕಸಂದ್ರ ಗ್ರಾಮಸ್ಥರ ಪ್ರತಿಭಟನೆ



ಉದಯವಾಹಿನಿ ಚಿತ್ರ

• ಉದಯವಾಹಿನಿ, ನೆಲಮಂಗಲ

ಮೂಲಸೌಕರ್ಯ ಕಲ್ಪಿಸುವಂತೆ ಆಗ್ರಹಿಸಿ ನಗರಸಭೆ ಕಚೇರಿ ಎದುರು ಖಾಲಿ ಕೊಡ ಹಾಗೂ ಪೊರಕೆ ಹಿಡಿದು ಜಕ್ಕಸಂದ್ರ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು. ಜಕ್ಕಸಂದ್ರ ಗ್ರಾಮವನ್ನು ನಗರಸಭೆ ವ್ಯಾಪ್ತಿಗೆ ಸೇರಿಸಲಾಗಿದೆ. ಸಂಗ್ರಹಿಸಿದ ತೆರಿಗೆಗೆ ತಕ್ಕಂತೆ ಮೂಲಸೌಕರ್ಯ ಕಲ್ಪಿಸಿಲ್ಲ ಗ್ರಾಮಸ್ಥರು ದೂರಿದರು. ಎರಡು ತಿಂಗಳಿಂದ ಕುಡಿಯುವ ನೀರು ಸಮರ್ಪಕವಾಗಿ ಪೂರೈಕೆ ಆಗುತ್ತಿಲ್ಲ. ಕಸ ವಿಲೇವಾರಿ ಆಗುತ್ತಿಲ್ಲ, ಕಸ ಸಂಗ್ರಹಿಸುವ ಗಾಡಿಗಳು ಸರಿಯಾಗಿ ಬರುತ್ತಿಲ್ಲ. ವಿದ್ಯುತ್ ದೀಪಗಳನ್ನು ಬದಲಿಸಿಲ್ಲ, ರಸ್ತೆಗಳು ಹಾಳಾಗಿವೆ. ಚರಂಡಿಗಳು ಕಟ್ಟಿಕೊಂಡಿವೆ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು.

ನಗರಸಭೆ ಆಯುಕ್ತ ಎಚ್.ಗಂಗಾಧರ್ ಮಾತನಾಡಿ, ಶೀಘ್ರ ವಾರ್ಡ್ ಸಭೆ ನಡೆಸಿ ಸಮಸ್ಯೆಗಳನ್ನು ಪರಿಹರಿಸಲಾಗುವುದು. ನೀರಿನ ಸಮಸ್ಯೆ ನಿವಾರಣೆಗೆ ಕೊಳವೆ ಬಾವಿಗಳನ್ನು ಕೊರೆಸಲಾಗುವುದು ಅಲ್ಲಿಯವರೆಗೂ ಉಚಿತವಾಗಿ ಟ್ಯಾಂಕರ್ ನೀರು ಒದಗಿಸಲಾಗುವುದು ಎಂದು ಭರವಸೆ ನೀಡಿದರು.

# ಅರೆ ಏನ್ ನಡಿತಿದೆ ಗುರು ಮೆಲೋನಿಯನ್ನು ಬರಸೆಳೆದು ಚುಂಬಿಸಿದ ಮ್ಯಾಕ್ರನ್

• ಉದಯವಾಹಿನಿ, ಬೆಂಗಳೂರು

ಇರಾನ್- ಇಸ್ರೇಲ್ ಯುದ್ಧದ ತಲೆಬಿಸಿಯಲ್ಲಿ ಜಗತ್ತು ಇದ್ದರೆ, ಅತ್ತ ಫ್ರಾನ್ಸ್ ಅಧ್ಯಕ್ಷ, ಇಟಲಿ ಪ್ರಧಾನಿ ಇನ್ನೇನೋ ಬಿಸಿ ಏರಿಸುವ ರೀತಿ ನಡೆದುಕೊಂಡಿರುವುದು ಭಾರೀ ಚರ್ಚೆಯಾಗುತ್ತಿದೆ. ಭಾನುವಾರ ಪ್ಯಾರಿಸ್‌ನಲ್ಲಿ ಉಕ್ರೇನ್-ರಷ್ಯಾ, ಇಸ್ರೇಲ್-ಇರಾನ್ ಯುದ್ಧ ನಿಲ್ಲಿಸುವ ಉನ್ನತ ಮಟ್ಟದ ಮಾತುಕತೆ ನಡೆಯುತ್ತಿದೆ. ಈ ವೇಳೆ ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ಮತ್ತು ಇಟಲಿಯ ಪ್ರಧಾನಿ ಜಾರ್ಜಿಯಾ ಮೆಲೋನಿ,



ಇಬ್ಬರು ಪರಸ್ಪರ ಅಪ್ಪಿಕೊಂಡ ರೀತಿ ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಚರ್ಚೆಗೆ ಕಾರಣವಾಗಿದೆ. ಅರೆ ಇವರಿಬ್ಬರ ಮಧ್ಯೆ ಏನ್ ನಡಿತಿದೆ ಗುರು ಎಂದು ನೆಟ್ಟಿಗರು ಪ್ರಶ್ನಿಸಿದ್ದಾರೆ. ಇದಕ್ಕೆ ಕಾರಣ ಈ ಅಪ್ಪುಗೆ ಇಬ್ಬರು ರಾಷ್ಟ್ರನಾಯಕರ ಔಪಚಾರಿಕ ಅಪ್ಪುಗೆ ರೀತಿ ಇರಲಿಲ್ಲ. ಮಾಕ್ರನ್ ಅವರು, ಮೆಲೋನಿ ಅವರನ್ನು ಬರಸೆಳೆದು ಅಪ್ಪಿಕೊಂಡಿದ್ದಲ್ಲದೇ ದೀರ್ಘವಾಗಿ ಚುಂಬಿಸಿದರು. ಒಂದು ಕ್ಷಣ ಮೆಲೋನಿ ತಬ್ಬಿಬ್ಬಾಗಿ ಸಾವರಿಸಿಕೊಂಡು ನಗುತ್ತಾ ಅಲ್ಲಿಂದ ಹೊರಟುಹೋದರು. ಕ್ಯಾಮೆರಾಗಳ ಎದುರೇ ಇಷ್ಟೆಲ್ಲಾ ನಡಿದಿದೆ. ಅನೇಕರು ಇದನ್ನು ಅವಮಾನಕರ, ಮುಜುಗರದ ಕ್ಷಣ ಎಂದು ಟೀಕಿಸಿದ್ದಾರೆ. ಇನ್ನೂ ಕೆಲವರು ಜಗತ್ತಿಗೆ ಯುದ್ಧದ ಚಿಂತೆಯಾದರೆ ಇವರಿಗೆ ಇನ್ನೇನೋ ಚಿಂತೆ ಎಂದು ಕುಹಕವಾಡಿದ್ದಾರೆ. ಇನ್ನು ಮೆಲೋನಿ ಅವರ ಈ ಘಟನೆ ಬಗ್ಗೆ ಭಾರತದಲ್ಲಿ ಮೋದಿ ಅಭಿಮಾನಿಗಳು ಏನು ಹೇಳುತ್ತಾರೆ ಎಂಬುದನ್ನು ನೋಡಬೇಕಿದೆ. ಯುರೋಪಿಯನ್ ಯೂನಿಯನ್‌ನ ಪ್ರಮುಖ ನಿರ್ಧಾರಗಳು, ವಲಸೆ ನೀತಿಗಳ ವಿಷಯದಲ್ಲಿ ಮ್ಯಾಕ್ರನ್, ಮೆಲೋನಿ ನಡುವೆ ಆಗಾಗ ಭಿನ್ನಾಭಿಪ್ರಾಯಗಳು ಕಾಣಿಸಿಕೊಳ್ಳುತ್ತವೆ. ಆದರೂ ಇವರಿಬ್ಬರ ದೇಹಭಾಷೆಯನ್ನು ರಾಜಕೀಯ ವಿಶ್ಲೇಷಕರು ಸೂಕ್ಷ್ಮವಾಗಿ ನೋಡುತ್ತಿದ್ದಾರೆ. ಈ ಮಾತುಕತೆಯಲ್ಲಿ ಪ್ರಮುಖವಾಗಿ ಇರಾನ್- ಇಸ್ರೇಲ್, ಉಕ್ರೇನ್ ಯುದ್ಧ, ಯುರೋಪಿನ ಭದ್ರತೆ ಮತ್ತು ಆರ್ಥಿಕ ಸಹಕಾರದ ಬಗ್ಗೆ ಚರ್ಚಿಸಲಾಗಿದೆ ಎಂದು ವರದಿಯಾಗಿದೆ. ಒಟ್ಟಾರೆಯಾಗಿ, ಗಂಭೀರ ರಾಜಕೀಯ ಚರ್ಚೆಗಳಿಗಿಂತಲೂ ಈ ಇಬ್ಬರು ನಾಯಕರ ನಡುವಿನ ಅಸಹಜವೆನಿಸುವ ಸಂವಹನದ ವಿಡಿಯೋ ಈಗ ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚು ಗಮನ ಸೆಳೆಯುತ್ತಿದೆ. ಈ ಕುರಿತು ಹಲವು ಅಂತರರಾಷ್ಟ್ರೀಯ ಮಾಧ್ಯಮಗಳು ವರದಿ ಮಾಡಿವೆ.

# ಉ. ಕರ್ನಾಟಕದಲ್ಲಿ ಆಲಿಕಲ್ಲು ಮಳೆ ಮುನ್ನೆಚ್ಚರಿಕೆ

• ಉದಯವಾಹಿನಿ, ಬೆಂಗಳೂರು

ಪೂರ್ವ ಮುಂಗಾರು ಮಳೆ ದುರ್ಬಲಗೊಂಡ ಬೆನ್ನಲ್ಲೇ ರಾಜ್ಯದಲ್ಲಿ ಬೇಸಿಗೆ ಬಿಸಿಲ ತೀವ್ರತೆ ನಿರಂತರವಾಗಿ ಏರತೊಡಗಿದ್ದು, ಜನರು ತತ್ತರಿಸುವಂತಾಗಿದೆ. ರಾಜಧಾನಿ ಬೆಂಗಳೂರು ಸೇರಿದಂತೆ ರಾಜ್ಯದಲ್ಲಿ ಗರಿಷ್ಠ ತಾಪಮಾನ ಗಣನೀಯವಾಗಿ ಏರಿಕೆಯಾಗಿದೆ. ಉತ್ತರ ಒಳನಾಡು ಜಿಲ್ಲೆಗಳಲ್ಲಿ ಏ.21ರವರೆಗೆ ಆಲಿಕಲ್ಲು ಮಳೆಯಾಗುವ ಮುನ್ಸೂಚನೆಯನ್ನು ಭಾರತೀಯ ಹವಾಮಾನ ಇಲಾಖೆ ನೀಡಿದೆ. ವಾತಾವರಣದಲ್ಲಿ ಬಿಸಿಗಾಳಿ ಹೆಚ್ಚಾಗಿರುವುದು ಒಂದೆಡೆಯಾದರೆ, ಮತ್ತೊಂದೆಡೆ ಆಲಿಕಲ್ಲು ಮಳೆ ಮುನ್ಸೂಚನೆ ಜನರನ್ನು ಮತ್ತಷ್ಟು ಆತಂಕಕ್ಕೆ ದೂಡಿದಂತಾಗಿದೆ.

ಗಂಟೆಗೆ 40-50 ಕಿ.ಮೀ.ವೇಗದಲ್ಲಿ ಗಾಳಿ ಬೀಸಲಿದ್ದು, ಬಿರುಗಾಳಿ, ಆಲಿಕಲ್ಲು ಸಹಿತ ಮಳೆಯಾಗಲಿದೆ. ಕೆಲವೆಡೆ ಮಿಂಚು, ಗುಡುಗಿನ ಆರ್ಭಟದೊಂದಿಗೆ ಮಳೆಯಾಗಲಿದೆ. ಹೀಗಾಗಿ ರಾಜ್ಯದ ಉತ್ತರ ಒಳನಾಡಿನ ಜನರು ಅಗತ್ಯ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕು ಎಂದು ಕರ್ನಾಟಕ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ತಿಳಿಸಿದೆ. ರಾಜ್ಯದ ದಕ್ಷಿಣ ಒಳನಾಡು, ಮಲೆನಾಡು ಹಾಗೂ ಕರಾವಳಿ ಭಾಗದಲ್ಲಿ ಒಣ ಹವೆ ಮುಂದುವರೆಯಲಿದ್ದು, ಕೆಲವೆಡೆ ಹಗುರದಿಂದ ಸಾಧಾರಣ ಮಳೆಯಾಗುವ ನಿರೀಕ್ಷೆ ಇದೆ. ಮಾರ್ಚ್ ತಿಂಗಳಲ್ಲಿ ರಾಜ್ಯದ ಹಲವೆಡೆ



ಉದಯವಾಹಿನಿ ಚಿತ್ರ

ಆಲಿಕಲ್ಲು ಸಹಿತ ಮಳೆಯಾಗಿ ಅಪಾರ ಪ್ರಮಾಣದ ಕೃಷಿ, ತೋಟಗಾರಿಕೆ ಬೆಳೆಗಳು ಹಾನಿಗೀಡಾಗಿದ್ದವು. ಈಗಾಗಲೇ ರಾಜ್ಯದಲ್ಲಿ ಗರಿಷ್ಠ ತಾಪಮಾನ 35 ಡಿ.ಸೆ.ಗಿಂತ ಹೆಚ್ಚಾಗಿದೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಗರಿಷ್ಠ ತಾಪಮಾನ 40 ಡಿ.ಸೆ.ಗಿಂತ ಅ ಕವಾಗಿದೆ. ರಾಯಚೂರು ಸೇರಿದಂತೆ ಕೆಲವೆಡೆ 42, 43 ಡಿ.ಸೆ. ನಷ್ಟು ಗರಿಷ್ಠ ತಾಪಮಾನ ದಾಖಲಾಗುತ್ತಿದೆ.

ಬೆಂಗಳೂರಿನಲ್ಲೂ 36, 37 ಡಿ.ಸೆ. ನಷ್ಟು ಗರಿಷ್ಠ ತಾಪಮಾನ ದಾಖಲಾಗುತ್ತಿದೆ. ಮುಂದಿನ ದಿನಗಳಲ್ಲಿ ಬಿಸಿಲಿನ ತೀವ್ರತೆ ಮತ್ತಷ್ಟು ಹೆಚ್ಚಾಗುವ ಸಾಧ್ಯತೆಗಳಿವೆ. ನಿರೀಕ್ಷಿತ ಪ್ರಮಾಣದಲ್ಲಿ ಬೇಸಿಗೆ ಮಳೆಯಾಗದಿರುವುದು ತಾಪಮಾನ ಹೆಚ್ಚಳಕ್ಕೆ ಪ್ರಮುಖ ಕಾರಣವಾಗಿದೆ. ಹಗಲು ಮತ್ತು ರಾತ್ರಿ ವೇಳೆ ಸೆಖೆ ಹೆಚ್ಚಾಗಿರುವುದರಿಂದ ಹೆಚ್ಚು ದ್ರವ ಪದಾರ್ಥ ಹಾಗೂ ತಂಪು ಪಾನೀಯಗಳನ್ನು ಸೇವಿಸಲು ವೈದ್ಯರು ಸಲಹೆ ಮಾಡಿದ್ದಾರೆ.

# ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಲ್ಲಿ ರಾಜ್ಯ ಹೆದ್ದಾರಿ ವಿಸ್ತರಣೆ

• ಉದಯವಾಹಿನಿ, ಬೆಂಗಳೂರು

ನಾಗರಹೊಳೆ ಹುಲಿ ಸಂರಕ್ಷಿತ ಅರಣ್ಯ ಪ್ರದೇಶದಲ್ಲಿ ರಾಜ್ಯ ಹೆದ್ದಾರಿ ವಿಸ್ತರಣೆ ಮಾಡುವ ಲೋಕೋಪಯೋಗಿ ಇಲಾಖೆ ನಡೆಗೆ ಆಕ್ಷೇಪ ವ್ಯಕ್ತವಾಗಿದೆ. ಈ ರಸ್ತೆಯ ಯಥಾಸ್ಥಿತಿ ಕಾಪಾಡಬೇಕೆ ಹೊರತು, ವಿಸ್ತರಣೆ ಇಲ್ಲವೇ ಮೇಲ್ದರ್ಜೆಗೇರಿಸಲು ಅವಕಾಶ ನೀಡಬಾರದು ಎಂದು ಸುಪ್ರೀಂ ಕೋರ್ಟ್ ಆದೇಶ ನೀಡಿತ್ತು ಅದರ ಅನ್ವಯ ವನ್ಯಜೀವಿ ಮಂಡಳಿ ಯಥಾಸ್ಥಿತಿಗೆ ಶಿಫಾರಸು ಮಾಡಿತ್ತು. ಇದನ್ನು ಕೇಂದ್ರ ಉನ್ನತಾಧಿಕಾರ ಸಮಿತಿ (ಸಿಇಸಿ) ಒಪ್ಪಿಕೊಂಡು ರಾಜ್ಯಕ್ಕೆ ಆದೇಶ ನೀಡಿತ್ತು. ಹಾಗಿದ್ದರೂ, ಕರ್ನಾಟಕ ಮತ್ತು ಕೇರಳ ರಾಜ್ಯಗಳನ್ನು ಸಂಪರ್ಕಿಸುವ 21 ಕಿ.ಮೀ. ರಸ್ತೆಯಲ್ಲಿ ಕಾಮಗಾರಿ ನಡೆಸುತ್ತಿರುವ ಕ್ರಮಕ್ಕೆ ವಿರೋಧ ಎದುರಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಇಲ್ಲಿ ಹೆದ್ದಾರಿ ನಿರ್ವಹಣೆ ಬಿಟ್ಟರೆ ಯಾವುದೇ ವಿಸ್ತರಣೆ ಕಾಮಗಾರಿ ನಡೆದಿರಲಿಲ್ಲ. ಈಗ ರಸ್ತೆ ವಿಸ್ತರಿಸುವ ಚಟುವಟಿಕೆ ಕೈಗೊಳ್ಳಲಾಗುತ್ತಿದೆ. ಇದನ್ನು ತಡೆಯಬೇಕಾದ ಅರಣ್ಯ ಇಲಾಖೆ ಮೌನ ವಹಿಸಿದೆ ಎಂದು ವನ್ಯಜೀವಿ ಸ್ವಯಂ ಸೇವಾ ಸಂಸ್ಥೆ ಪ್ರತಿನಿಧಿ ಸಿಇಸಿಗೆ ದೂರು ನೀಡಿದ್ದಾರೆ.

**ತರಾತುರಿ ಕಾಮಗಾರಿ:** ಮೈಸೂರಿನಿಂದ ಹ್ಯಾಂಡ್ ಪೋಸ್ಟ್ ಮಾರ್ಗವಾಗಿ ಕೇರಳದ ಮಾನಂದವಾಡಿಗೆ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಕೋರ್ ಏರಿಯಾದಲ್ಲಿ ಹಾದು ಹೋಗುವ ಹಳೆ ರಸ್ತೆಯನ್ನು



ಉದಯವಾಹಿನಿ ಚಿತ್ರ

ಸಂಪೂರ್ಣ ಬಂದ್ ಮಾಡಿ ಪರ್ಯಾಯ ರಸ್ತೆಗೆ ಸೂಚಿಸಲಾಗಿತ್ತು. ಹೀಗಿದ್ದರೂ ಉದ್ದೂರು ಗೇಟ್‌ನಿಂದ ಬಾವಲಿ ಗೇಟ್‌ವರೆಗೆ 21 ಕಿ.ಮಿ ರಸ್ತೆ ವಿಸ್ತರಣೆ ಕಾಮಗಾರಿ ಆರಂಭವಾಗಿದೆ. ಇಲ್ಲಿ ಯಾವುದೇ ವಿಸ್ತರಣೆ ಕಾರ್ಯ ನಡೆಯುತ್ತಿಲ್ಲ. ಬರೀ ನಿರ್ವಹಣೆಯಷ್ಟೇ. ನಿತ್ಯ ಸಂಚರಿಸುವ ವಾಹನಗಳು ರಸ್ತೆ ಬದಿಗೆ ಇಳಿದಾಗ ಆಗುತ್ತಿದ್ದ ತೊಂದರೆ ತಪ್ಪಿಸಲು ಎರಡೂ ಬದಿಯಲ್ಲಿ ಮಣ್ಣು ಹಾಕಲಾಗುತ್ತಿದೆ ಎಂದು ದೊಡ್ಡ ಬೈರನಕುಪ್ಪೆ ವಲಯ ಅರಣ್ಯಾಧಿಕಾರಿ ಹನುಮಂತರಾಜು ಅವರು ಸಮಜಾಯಿಷಿ ನೀಡಿದರು.

ಲೋಕೋಪಯೋಗಿ ಇಲಾಖೆ ಯಾವ ಅನುದಾನದ ಅಡಿ ರಸ್ತೆ ಅಗಲೀಕರಣ ಕೈಗೆತ್ತಿಕೊಂಡಿದೆ. ಎಷ್ಟು ಅನುದಾನ ಬಳಸುತ್ತಿದೆ. ಅರಣ್ಯ ಇಲಾಖೆ ಅನುಮತಿ ಪಡೆಯಲಾಗಿದೆಯೇ ಎನ್ನುವ ಕುರಿತು ಎಚ್.ಡಿ.ಕೋಟೆ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರಮೇಶ್ ಅವರಿಂದ ಮಾಹಿತಿ ಪಡೆಯಲು ಪ್ರಯತ್ನಿಸಿದರೂ ಅವರು ಸಂಪರ್ಕಕ್ಕೆ ಲಭ್ಯವಾಗಲಿಲ್ಲ.

**ಆದೇಶ ಏನಿದೆ?:** ಹುಲಿ ಸಂರಕ್ಷಿತ ಪ್ರದೇಶದ ಕೋರ್ ಪ್ರದೇಶದಲ್ಲಿ ವಾಹನ ದಟ್ಟಣೆಯಿಂದ ವನ್ಯಜೀವಿಗಳ ಸಹಜ ಸಂಚಾರಕ್ಕೆ ಅಡ್ಡಿಯಾಗಿ ಅವುಗಳ ಸಾವಿಗೆ ಕಾರಣವಾಗುತ್ತಿದೆ. ಇದರಿಂದ ಕೋರ್ ಪ್ರದೇಶದಲ್ಲಿ ಹಾದು ಹೋಗುವ ಹೆದ್ದಾರಿಗಳ ವಿಸ್ತರಣೆ ಇಲ್ಲವೇ ವಿಸ್ತರಣೆಗೆ ಅವಕಾಶ ಮಾಡಿಕೊಡಬಾರದು. ರಾತ್ರಿ ವೇಳೆ ವಾಹನ ಸಂಚಾರ ನಿಷೇಧಿಸಬೇಕು ಎಂದು ಸುಪ್ರೀಂ ಕೋರ್ಟ್‌ನಲ್ಲಿ ರಿಟ್ ಅರ್ಜಿ (ಸಂಖ್ಯೆ 202/1995) ಸಲ್ಲಿಸಲಾಗಿತ್ತು. ಕೇಂದ್ರ ಉನ್ನತಾಧಿಕಾರ ಸಮಿತಿ ವರದಿ ಆಧರಿಸಿ 2008ರ ಮೇ 5ರಂದು ಸುಪ್ರೀಂ ಕೋರ್ಟ್ ಹುಲಿ ಸಂರಕ್ಷಿತ ಪ್ರದೇಶದ ಕೋರ್ ಪ್ರದೇಶದಲ್ಲಿ ರಸ್ತೆ ವಿಸ್ತರಣೆ ಮಾಡಬಾರದು. ಸಂಜೆ 6ರಿಂದ ಬೆಳಗಿನ ಜಾವ 6ರವರೆಗೆ ವಾಹನ ಸಂಚಾರಕ್ಕೆ ಅವಕಾಶ ನೀಡಬಾರದು ಎಂದು ಆದೇಶಿಸಿತ್ತು. ಬಳಿಕ ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವಾಲಯ ಮಾರ್ಗಸೂಚಿ ಪ್ರಕಟಿಸಿತ್ತು.

> **ಹುಲಿ ಸಂರಕ್ಷಿತ ಪ್ರದೇಶದ ಕೋರ್ ಪ್ರದೇಶದಲ್ಲಿ ರಸ್ತೆ ವಿಸ್ತರಣೆ ಮಾಡುವುದಕ್ಕೆ ಅವಕಾಶವಿಲ್ಲ. ಆದೇಶ ಉಲ್ಲಂಘಿಸಿ ಕಾಮಗಾರಿ ಕೈಗೊಂಡರೆ ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳುತ್ತೇವೆ**
> –ಕುಮಾರ ಪುಷ್ಕರ್ ಪಿಸಿಸಿಎಫ್

# ಮಹಿಳಾ ಸಬಲೀಕರಣದ ಮುಖವಾಡ ಧರಿಸಿ ಬಿಜೆಪಿ ಸರ್ಕಾರದಿಂದ ಭೀಕರ ಸಂಚು: ಡಿಕೆಶಿ

• ಉದಯವಾಹಿನಿ, ಬೆಂಗಳೂರು

ಕೇಂದ್ರದ ಬಿಜೆಪಿ ಸರ್ಕಾರವು ಮಹಿಳಾ ಸಬಲೀಕರಣದ ಮುಖವಾಡ ಧರಿಸಿ ದಕ್ಷಿಣ ಭಾರತದ ರಾಜಕೀಯ ಅಸ್ಮಿತೆಯನ್ನು ಅಳಿಸಲು ಭೀಕರ ಸಂಚು ರೂಪಿಸಿದೆ ಎಂದು ಡಿಸಿಎಂ ಹಾಗೂ ಕೆಪಿಸಿಸಿ ಅಧ್ಯಕ್ಷರಾದ ಡಿ.ಕೆ. ಶಿವಕುಮಾರ್ ತೀವ್ರ ವಾಗ್ದಾಳಿ ನಡೆಸಿದ್ದಾರೆ. ಈ ಕುರಿರು ಪ್ರಕಟಣೆ ನೀಡಿರುವ ಅವರು, ಬಿಜೆಪಿ ಜಾರಿಗೆ ತರಲು ಹೊರಟಿರುವ ಮಹಿಳಾ ಮೀಸಲಾತಿ ಮಸೂದೆಯು ಕೇವಲ ಒಂದು ಮಾಯಾಜಾಲವಾಗಿದ್ದು, ಇದು ದಕ್ಷಿಣದ ರಾಜ್ಯಗಳ ಹಕ್ಕುಗಳನ್ನು ಕಸಿದುಕೊಳ್ಳಲು ನಡೆಸುತ್ತಿರುವ ರಾಜಕೀಯ ಸರ್ಜಿಕಲ್ ಸ್ಟ್ರೈಕ್ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

**ಕ್ಷೇತ್ರ ಮರುವಿಂಗಡಣೆ ಎಂಬ ಕುತಂತ್ರ:** ಮಹಿಳೆಯರಿಗೆ ರಾಜಕೀಯ ಅಧಿಕಾರ ಸಿಗಬೇಕು ಎಂಬುದು ಕಾಂಗ್ರೆಸ್ ಪಕ್ಷದ ಅಚಲ ನಿಲುವು. ರಾಜೀವ್ ಗಾಂಧಿಯವರು ಸ್ಥಳೀಯ ಸಂಸ್ಥೆಗಳಲ್ಲಿ ಮೀಸಲಾತಿ ತಂದಾಗ ವಿರೋಧಿಸಿದವರು ಈಗ ಮಹಿಳಾ ಮೀಸಲಾತಿಯ ಜಪ ಮಾಡುತ್ತಿದ್ದಾರೆ ಆದರೆ, ಈ ಮೀಸಲಾತಿ ಜಾರಿಯಾಗಲು ಕ್ಷೇತ್ರ ಮರುವಿಂಗಡಣೆ ಆಗಲೇಬೇಕು ಎಂಬ ಷರತ್ತು ವಿಧಿಸಿರುವುದು ತರ್ಕಹೀನವಾದುದು.

ಇದು ಮಹಿಳೆಯರಿಗೆ ತಕ್ಷಣಕ್ಕೆ ನ್ಯಾಯ ಒದಗಿಸುವ ಬದಲು, ಮೀಸಲಾತಿಯನ್ನು ಮುಂದೂಡುವ ಮತ್ತು



> **ಮಹಿಳಾ ಮೀಸಲಾತಿ ಎಂಬುದು ಮಹಿಳೆಯರ ಹಕ್ಕಾಗಬೇಕೇ ಹೊರತು, ದಕ್ಷಿಣ ಭಾರತವನ್ನು ಹತ್ತಿಕ್ಕುವ ಆಯುಧವಾಗಬಾರದು. ಒಕ್ಕೂಟ ವ್ಯವಸ್ಥೆಯ ಅಡಿಪಾಯಕ್ಕೆ ಧಕ್ಕೆ ತರುತ್ತಿರುವ ಕೇಂದ್ರ ಸರ್ಕಾರವು ತಕ್ಷಣವೇ ಮರುವಿಂಗಡಣೆಯ ಷರತ್ತನ್ನು ಕೈಬಿಟ್ಟು ಮಹಿಳಾ ಮೀಸಲಾತಿಯನ್ನು ಜಾರಿಗೆ ತರಬೇಕು, ಇಲ್ಲದಿದ್ದರೆ ದಕ್ಷಿಣ ಭಾರತದ ಜನತೆ ತಕ್ಕ ಪಾಠ ಕಲಿಸಲಿದ್ದಾರೆ.**
> –ಡಿ.ಕೆ. ಶಿವಕುಮಾರ್, ಡಿಸಿಎಂ

ಮರುವಿಂಗಡಣೆಯನ್ನು ಬಿಜೆಪಿಯ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳುವ ಷಡ್ಯಂತ್ರವಾಗಿದೆ ಎಂದು ಕಿಡಿಕಾರಿದ್ದಾರೆ.

**ಪ್ರಗತಿಪರ ರಾಜ್ಯಗಳಿಗೆ ಸಿಗುತ್ತಿರುವ ಶಿಕ್ಷೆಯೇ?:** ಕ್ಷೇತ್ರ ಮರುವಿಂಗಡಣೆಯಿಂದ ದಕ್ಷಿಣ ಭಾರತಕ್ಕೆ ಅನ್ಯಾಯವನ್ನು ಆಗುತ್ತಿದೆ. ಕರ್ನಾಟಕ, ತಮಿಳುನಾಡು, ಕೇರಳದಂತಹ ರಾಜ್ಯಗಳು ರಾಷ್ಟ್ರೀಯ ಹಿತಾಸಕ್ತಿಯಿಂದ ಜನಸಂಖ್ಯೆಯನ್ನು ಯಶಸ್ವಿಯಾಗಿ ನಿಯಂತ್ರಿಸಿವೆ. ಆದರೆ, ಈಗ ಕೇಂದ್ರ ಸರ್ಕಾರ ಜನಸಂಖ್ಯೆ ಹೆಚ್ಚಿಸಿಕೊಂಡ ರಾಜ್ಯಗಳಿಗೆ ಹೆಚ್ಚಿನ ಸಂಸತ್ ಸ್ಥಾನ ನೀಡಿ, ಜನಸಂಖ್ಯೆ ನಿಯಂತ್ರಿಸಿದ ನಮಂತಹ ಪ್ರಗತಿಪರ ರಾಜ್ಯಗಳ ಪ್ರಾತಿನಿಧ್ಯ ಕುಗ್ಗಿಸಲು ಹೊರಟಿದೆ. ಇದು ಕನ್ನಡಿಗರ ಹಾಗೂ ಇಡೀ ದಕ್ಷಿಣ ಭಾರತೀಯರ ಸ್ವಾಭಿಮಾನಕ್ಕೆ ಎಸಗುತ್ತಿರುವ ದ್ರೋಹ ಎಂದು ಡಿ.ಕೆ.ಶಿವಕುಮಾರ್ ಕಡಿನುಡಿಗಳನ್ನಾಡಿದ್ದಾರೆ.

ಮಹಿಳಾ ಮೀಸಲಾತಿ ನೀಡಲು ಕ್ಷೇತ್ರ ಮರುವಿಂಗಡಣೆ ಆಗಲೇಬೇಕು ಎಂಬ ಹಠವೇಕೆ? ಈಗಿರುವ 543 ಕ್ಷೇತ್ರಗಳಲ್ಲೇ ಮೀಸಲಾತಿ ನೀಡಲು ಕೇಂದ್ರ ಸರ್ಕಾರಕ್ಕೆ ಇರುವ ತೊಂದರೆಗಳೇನು ಎಂದು ಸರಣಿ ಪ್ರಶ್ನೆಗಳನ್ನು ಡಿ.ಕೆ.ಶಿವಕುಮಾರ್ ಮುಂದಿಟ್ಟಿದ್ದಾರೆ. ಜನಸಂಖ್ಯೆ ನಿಯಂತ್ರಿಸಿದ ದಕ್ಷಿಣದ ರಾಜ್ಯಗಳ ಸಂಸತ್ ಸ್ಥಾನಗಳ ಸಂಖ್ಯೆ ಇಳಿಕೆಯಾಗುವುದಿಲ್ಲ ಎಂದು ಕೇಂದ್ರ ಸರ್ಕಾರ ಕಾನೂನಾತ್ಮಕವಾಗಿ ಗ್ಯಾರಂಟಿ ನೀಡುತ್ತದೆಯೇ ಎಂದು ಸವಾಲು ಹಾಕಿದ್ದಾರೆ.

**ರಾಜಿ ಇಲ್ಲದ ಹೋರಾಟ:** ಉತ್ತರ ಭಾರತದ ಹಿಂದಿ ಭಾಷಿಕ ರಾಜ್ಯಗಳಲ್ಲಿ ಸ್ಥಾನಗಳನ್ನು ಹೆಚ್ಚಿಸಿಕೊಂಡು, ದಕ್ಷಿಣ ಭಾರತದ ಧ್ವನಿಯನ್ನು ಕ್ಷೀಣಿಸುವಂತೆ ಮಾಡುವುದು ಬಿಜೆಪಿಯ ರಹಸ್ಯ ಅಜೆಂಡಾ. ಸಂಸತ್ತಿನಲ್ಲಿ ನಮ್ಮ ಧ್ವನಿ ಕ್ಷೀಣಿಸಿದರೆ ತೆರಿಗೆ ಹಣದ ಹಂಚಿಕೆಯಲ್ಲೂ ನಮಗೆ ಅನ್ಯಾಯವಾಗುತ್ತದೆ. ಇದನ್ನು ಕಾಂಗ್ರೆಸ್ ಪಕ್ಷ ಎಂದಿಗೂ ಒಪ್ಪುವುದಿಲ್ಲ. ನಾವು ಮಹಿಳಾ ಮೀಸಲಾತಿಯನ್ನು ಸ್ವಾಗತಿಸುತ್ತೇವೆ, ಆದರೆ ಅದರ ಹೆಸರಲ್ಲಿ ನಡೆಯುವ ಪ್ರಾದೇಶಿಕ ಅನ್ಯಾಯವನ್ನು ಬಲವಾಗಿ ವಿರೋಧಿಸುತ್ತೇವೆ. ನಮ ರಾಜ್ಯದ ಹಿತಾಸಕ್ತಿ ಬಲಿ ಕೊಡಲು ನಾವು ಬಿಡುವುದಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

# ವಿನಯ್ ಕುಲಕರ್ಣಿಗೆ ಕಂಕಟವಾದ ಬಸವರಾಜ್ ಮುತ್ತಗಿ ಮಾಫಿ ಸಾಕ್ಷಿ

• ಉದಯವಾಹಿನಿ, ಬೆಂಗಳೂರು

ಬಿಜೆಪಿ ಮುಖಂಡ ಯೋಗೀಶ್ ಗೌಡ ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ, ನ್ಯಾಯಾಲಯದ ತೀರ್ಪಿನಲ್ಲಿ ಕೊಲೆ ಸಂಚು ಬಯಲಾಗಿದ್ದು, ಎ1 ಆಗಿರುವ ಬಸವರಾಜ್ ಮುತ್ತಗಿ ಮಾಫಿ ಜೊತೆಗೆ ಸಂಪರ್ಕದ ಬಗ್ಗೆ ಸ್ಫೋಟಕ ಮಾಹಿತಿಗಳು ಬಯಲಾಗಿದೆ. ಎ1 ಬಸವರಾಜ್ ಮುತ್ತಗಿ ಮಾಫಿ ಜೊತೆ ಸಂಪರ್ಕದಲ್ಲಿ ಇರಲು ವಿನಯ್ ಕುಲಕರ್ಣಿ ತನ್ನ ಪತ್ನಿ ಹೆಸರಲ್ಲಿ ಸಿಮ್ ಖರೀದಿಸಿದ ವಿಚಾರ ತನಿಖೆಯಲ್ಲಿ ಬಯಲಾಗಿದೆ.

## ಇಬ್ಬರ ನಡುವೆ ಮಾತುಕತೆ

ಪತ್ನಿ ಹೆಸರಿನಲ್ಲಿ ಸಿಮ್ ಖರೀದಿ ಮಾಡಿರುವ ವಿನಯ್ ಕುಲಕರ್ಣಿ, 94 ಬಾರಿ ಮುತ್ತಗಿ ಜೊತೆಗೆ ಮಾತಾಡಿದ್ದಾರೆ ಎಂದು ತಿಳಿದು ಬಂದಿದೆ. ಯೋಗೀಶ್ ಗೌಡ ಕೊಲೆ ಬಳಿಕವೂ ಇಬ್ಬರ ನಡುವೆ ಮಾತುಕತೆ ಮುಂದುವರೆದಿದ್ದು, ಕೇವಲ ಆರು ತಿಂಗಳಲ್ಲಿ ಬಸವರಾಜ್ ಮುತ್ತಗಿ ಜೊತೆಗೆ 57 ಬಾರಿ ಮಾತುಕತೆ ನಡೆದಿದೆ. ಸಿಬಿಐ ಅಧಿಕಾರಿಗಳ ತನಿಖೆ ವೇಳೆ ಸಿಡಿಆರ್,ಟವರ್ ಲೋಕೇಷನ್ ಪರೀಕ್ಷೆ ಮಾಡಿದ್ದು, ಇಬ್ಬರೂ ಒಂದೇ ಪ್ರದೇಶದಲ್ಲಿ ಆರು ಬಾರಿ ಇರುವುದು ಪತ್ತೆಯಾಗಿದೆ. ಜಿಲ್ಲಾ ಪಂಚಾಯತ್ ಚುನಾವಣೆಯಲ್ಲಿ ಗೆಲುವು ಹಾಗೂ ರಾಜಕೀಯವಾಗಿ ಬೆಳೆದಿದ್ದೇ ಯೋಗೀಶ್ ಗೌಡ ಕೊಲೆಗೆ ಅಸಲಿ ಕಾರಣ ಎನ್ನುವ ವಿಚಾರ ಕೂಡ ತನಿಖೆಯಲ್ಲಿ ಬಯಲಾಗಿದೆ. ಬಸವರಾಜ್ ಮುತ್ತಗಿ



ಉದಯವಾಹಿನಿ ಚಿತ್ರ

> ### ಆಯುಧ ಬಳಸಿ ಕೊಲೆ
> **ಯೋಗೀಶ್ ಗೌಡ ಕೊಲೆ ಕೇಸ್‌ನಲ್ಲಿ ಬಸವರಾಜ್ ಮುತ್ತಗಿ ಮಾಫಿ ಸಾಕ್ಷಿ ಆಗಿದ್ದೇ ವಿನಯ್ ಕುಲಕರ್ಣಿಗೆ ಕಂಟಕವಾಗಿದ್ದು, ಯೋಗೀಶ್ ಗೌಡ ಹತ್ಯೆ ವೇಳೆ ಎ7 ರಿಂದ ಎ17 ಆರೋಪಿಗಳು ಆಯುಧ ಬಳಸಿ ಕೊಲೆ ಮಾಡಿದ್ದಾರೆ ಎನ್ನಲಾಗುತ್ತಿದೆ. ಆದರೆ ಪೊಲೀಸರು ಎ1 ರಿಂದ ಎ6 ಆರೋಪಿಗಳನ್ನು ಬಂಧಿಸಿ ಆಯುಧಗಳು ವಶಕ್ಕೆ ಎಂದು ಉಲ್ಲೇಖ ಮಾಡಿದ್ದರು.**

ಮತ್ತು ಆತನ ಭಾವ ಚಂದ್ರಶೇಖರ ಇಂಡಿಗೆ ವಿನಯ್ ಕುಲಕರ್ಣಿ ಸುಪಾರಿ ನೀಡಿದ್ದರು ಎನ್ನಲಾಗುತ್ತಿದೆ.

ಅಲ್ಲದೇ ಬಸವರಾಜ್ ಮುತ್ತಗಿ ಮತ್ತು ಯೋಗೀಶ್ ಗೌಡ ನಡುವಿನ ಭೂ ವ್ಯಾಜ್ಯವೇ ಕೊಲೆಗೆ ಕಾರಣ ಅಂತ ಚಾರ್ಜ್ ಶೀಟ್ ದಾಖಲಾಗಿತ್ತು. ಸಿಬಿಐ ಅಧಿಕಾರಿಗಳ ತನಿಖೆ ಬಳಿಕ ಕೊಲೆಯ ಅಸಲಿ ಕಾರಣ ಬಯಲಾಗಿದೆ.

# ಜನಗಣತಿ ಕಾರ್ಯಕ್ಕೆ ಗಣತಿದಾರರ ನಿರ್ಲಕ್ಷ್ಯ

## ನೋಟಿಸ್‌ಗೂ ಉತ್ತರಿಸದ 53 ಮಂದಿ, ಪಾಲಿಕೆಯಿಂದ ಕಾನೂನು ಕ್ರಮದ ಎಚ್ಚರಿಕೆ

• ಉದಯವಾಹಿನಿ, ಬೆಂಗಳೂರು

ರಾಷ್ಟ್ರೀಯ ಜನಗಣತಿ-2027ರ ಕಾರ್ಯಕ್ಕೆ ಗೈರು ಹಾಜರಾದ ಗಣತಿದಾರರಿಗೆ ಕಾರಣ ಕೇಳಿ ನೋಟೀಸ್ ಜಾರಿಗೊಳಿಸಿದ್ದರೂ, ನಿರ್ಲಕ್ಷ್ಯ ತೋರಿದ 53 ಜನರ ವಿರುದ್ಧ ಉತ್ತರ ನಗರ ಪಾಲಿಕೆ ಆಯುಕ್ತರು ಕೆಲಸ ಮಾಡದ ದಿನವೆಂದು ಆದೇಶ ಹೊರಡಿಸಿದ್ದಾರೆ. ಉತ್ತರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಜನಗಣತಿ-2027ರ ಕಾರ್ಯಕ್ಕೆ ಗೈರು ಹಾಜರಾದ 527 ಮೇಲ್ವಿಚಾರಕರು, ಗಣತಿದಾರರಿಗೆ ಕಾರಣ ಕೇಳಿ ಏ. 17ರಂದು ನೋಟಿಸ್ ನೀಡಿ, ಲಿಖಿತ ಉತ್ತರ ನೀಡುವಂತೆ ಸೂಚಿಸಲಾಗಿತ್ತು. ಆದರೆ, 53 ಮಂದಿ ನೋಟಿಸ್‌ಗೆ ಸಮಜಾಯಿಷಿ ನೀಡದೆ ನಿರ್ಲಕ್ಷ್ಯ ತೋರಿದ್ದಾರೆ. ಈ ಹಿನ್ನೆಲೆಯಲ್ಲಿ ಅನಧಿಕೃತ ಗೈರು ಹಾಜರಿ ಎಂದು ಪರಿಗಣಿಸಿ, ಅವರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ. ಇದೇ ವರ್ತನೆಯನ್ನು ಪುನರಾವರ್ತಿಸುವ ಗಣತಿದಾರರ ವಿರುದ್ಧ ಕ್ರಿಮಿನಲ್ ಪ್ರಕರಣದಡಿ ಎಫ್‌ಐಆರ್ ದಾಖಲಿಸುವುದಾಗಿ ಆಯುಕ್ತ ಪೊಮ್ಮಲ ಸುನಿಲ್ ಕುಮಾರ್ ಎಚ್ಚರಿಕೆ ನೀಡಿದ್ದಾರೆ.

**ಕೇಂದ್ರ ಪಾಲಿಕೆಯಿಂದ ಅಂತಿಮ ಸೂಚನೆ:** ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯ ರಾಷ್ಟ್ರೀಯ ಜನಗಣತಿ ಕಾರ್ಯಕ್ಕೆ 4068 ಗಣತಿದಾರರು ಮತ್ತು 518 ಮೇಲ್ವಿಚಾರಕರನ್ನು ನಿಯೋಜಿಸಲಾಗಿದೆ. ನಿಯೋಜಿತ ಎಲ್ಲಾ ಅಧಿಕಾರಿ ಮತ್ತು ನೌಕರರಿಗೆ ತರಬೇತಿ ನೀಡಲಾಗಿದೆ.



ಉದಯವಾಹಿನಿ ಚಿತ್ರ

ತರಬೇತಿಗೆ ಗೈರು ಹಾಜರಾಗಿರುವ ಹಾಗೂ ತರಬೇತಿಗೆ ಹಾಜರಾಗಿ ನೇಮಿಸಲಾದ ಸ್ಥಳಕ್ಕೆ ಕರ್ತವ್ಯಕ್ಕೆ ಹಾಜರಾಗದ ಗಣತಿದಾರರು ಮತ್ತು ಮೇಲ್ವಿಚಾರಕರು ಕೂಡಲೇ ನೇಮಿಸಿದ ವಾರ್ಡ್ ವ್ಯಾಪ್ತಿಯಲ್ಲಿ ಕರ್ತವ್ಯಕ್ಕೆ ಹಾಜರಾಗುವಂತೆ ತಿಳಿಸಲಾಗಿದೆ. ಕರ್ತವ್ಯವನ್ನು ನಿರಾಕರಿಸುವ ಸಿಬ್ಬಂದಿಗೆ ಇದು ಅಂತಿಮ ಎಚ್ಚರಿಕೆಯಾಗಿದ್ದು, ಇದನ್ನು ನಿರ್ಲಕ್ಷಿಸುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದಾಗಿ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್ ಎಚ್ಚರಿಕೆ ನೀಡಿದ್ದಾರೆ.

### ಉತ್ತರ ನೀಡದೆ ನಿರ್ಲಕ್ಷ್ಯತೆ

**ರಾಷ್ಟ್ರೀಯ ಜನಗಣತಿ-2027ರ ಕಾರ್ಯದಲ್ಲಿ ಬೆಂಗಳೂರಿನ ಕೆಲ ಪಾಲಿಕೆಗಳ ಗಣತಿದಾರರು ನಿರ್ಲಕ್ಷ್ಯ ಧೋರಣೆ ತೋರುತ್ತಿದ್ದು, ಇವರ ವಿರುದ್ಧ ಕಾರಣ ಕೇಳಿ ನೋಟಿಸ್ ಜಾರಿಗೊಳಿಸಲಾಗಿದೆ. ಆದಾಗ್ಯೂ, ಸುಮಾರು 53 ಮಂದಿ ಈ ನೋಟಿಸ್‌ಗೆ ಯಾವುದೇ ಉತ್ತರ ನೀಡದೆ ನಿರ್ಲಕ್ಷ್ಯತೆ ತೋರಿದ್ದಾರೆ. ಈ ಹಿನ್ನಲೆಯಲ್ಲಿ ಇವರ ವಿರುದ್ಧ ಅನಧಿಕೃತ ಗೈರು ಹಾಜರಿ ಎಂದು ಕ್ರಮಕ್ಕೆ ಮುಂದಾಗಿದ್ದು, ಇದು ಮುಂದುವರೆದರೆ ಕಾನೂನು ಕ್ರಮದ ಎಚ್ಚರಿಕೆ ನೀಡಲಾಗಿದೆ.**

> **ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯ ರಾಷ್ಟ್ರೀಯ ಜನಗಣತಿಗೆ 4393 ಗಣತಿದಾರರನ್ನು ಮತ್ತು 732 ಮೇಲ್ವಿಚಾರಕರನ್ನು ನಿಯೋಜಿಸಿದ್ದು, ಕಡ್ಡಾಯವಾಗಿ ಕೆಲಸಕ್ಕೆ ಹಾಜರಾಗಬೇಕು. ತರಬೇತಿಗೆ ಗೈರು ಹಾಜರಾದ, ಹಾಜರಾಗಿ ನೇಮಿಸಿದ ಸ್ಥಳಕ್ಕೆ ಹೋಗಿ ಕರ್ತವ್ಯ ನಿರ್ವಹಿಸದ 1774 ಗಣತಿದಾರರು ಮತ್ತು ಮೇಲ್ವಿಚಾರಕರಿಗೆ ಈಗಾಗಲೇ ನೋಟಿಸ್ ನೀಡಿದ್ದು, ಅವರೆಲ್ಲರೂ ತಕ್ಷಣವೇ ಕರ್ತವ್ಯಕ್ಕೆ ಹಾಜರಾಗಲು ಅಂತಿಮ ಕರೆ ನೀಡಲಾಗಿದೆ. ಅದಾಗ್ಯೂ, ನಿರ್ಲಕ್ಷ್ಯ ತೋರಿದರೆ ಸೇವಾ ನಿಯಮಾವಳಿಯಂತೆ ಶಿಸ್ತು ಕ್ರಮ ಹಾಗೂ ಕಾನೂನು ಕ್ರಮ ಕೈಗೊಳ್ಳಲಾಗುವುದು. ಅಗತ್ಯಬಿದ್ದರೆ ಕ್ರಿಮಿನಲ್ ಪ್ರಕರಣ ದಾಖಲಿಸಲಾಗುವುದು.**
> – ಕೆ.ಎನ್.ರಮೇಶ್, ಪಾಲಿಕೆ ಆಯುಕ್ತ

## ಸಮಾಜದಲ್ಲಿನ ಅಂಕುಡೊಂಕು ತಿದ್ದುವಲ್ಲಿ ಸಾಹಿತ್ಯ ಕೃತಿಗಳ ಪಾತ್ರ ಬಹಳ ಪ್ರಮುಖ : ಕೆ.ರಾಜು

# ಸಾಹಿತಿ ವಿಎಚ್‌ಆರ್ ಅವರ ನಾಲ್ಕು ಪುಸ್ತಕ ಲೋಕಾರ್ಪಣೆ

• ಉದಯವಾಹಿನಿ, ರಾಮನಗರ

ಸಮಾಜದಲ್ಲಿನ ಅಂಕುಡೊಂಕುಗಳನ್ನು ಸರಿಪಡಿಸುವಲ್ಲಿ ಸಾಹಿತ್ಯ ಕೃತಿಗಳ ಪಾತ್ರ ಬಹಳ ಪ್ರಮುಖವಾದದ್ದು ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಜಿಲ್ಲಾಧ್ಯಕ್ಷ ಕೆ.ರಾಜು ಅಭಿಪ್ರಾಯಪಟ್ಟರು. ನಗರದ ವಿವೇಕಾನಂದ ನಗರದಲ್ಲಿ ಸಾಹಿತಿ ಹಾಗೂ ಪ್ರಾಧ್ಯಾಪಕ ವಿ.ಎಚ್. ರಾಜಶೇಖರ್ ಅವರ ನಾಲ್ಕು ಕೃತಿಗಳ ಲೋಕಾರ್ಪಣ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, 12ನೇ ಶತಮಾನದಲ್ಲಿ ವಚನ ಸಾಹಿತಿಗಳು ಸಮಾಜದಲ್ಲಿನ ಜಾತಿ ವ್ಯವಸ್ಥೆ ನಿರ್ಮೂಲನೆಗೆ ಹೋರಾಟ ನಡೆಸಿದರು. ತದನಂತರದಲ್ಲಿ ಹಲವು ಜನ ವಚನಕಾರರು ಸಮಾಜದ ಮುಖ್ಯ ವಾಹಿನಿಯಲ್ಲಿನ ಅವ್ಯವಸ್ಥೆಗಳ ವಿರುದ್ಧ ಧ್ವನಿ ಎತ್ತಿ ಪರಿಣಾಮ ಹಲವು ಬದಲಾವಣೆಗಳಿಗೆ ನಾಂದಿಯಾಯಿತು ಎಂದರು.

ಸಮಾಜದಲ್ಲಿ ಇಂದು ಎಲ್ಲಾ ಕ್ಷೇತ್ರಗಳು ಕಲುಷಿತಗೊಂಡಿವೆ. ಹಾಗಾಗಿ ವಾಸ್ತವಕ್ಕೆ ಹತ್ತಿರದಲ್ಲಿ ಸಾಹಿತ್ಯ ರಚನೆ ಮಾಡಿದಾಗ ಅವುಗಳು ಜನಸಾಮಾನ್ಯರನ್ನು ತಲುಪಿ ಬದಲಾವಣೆಗೆ ದಾರಿ ಮಾಡಿಕೊಡುತ್ತೇವೆ ಎಂದರು ಅಭಿಪ್ರಾಯ ವ್ಯಕ್ತಪಡಿಸಿದರು.ಎದೆಯಾಳದ ದನಿ ಕೃತಿಯನ್ನು ಬಿಡುಗಡೆಗೊಳಿಸಿದ ಆನೇಕಲ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕಿ ಡಾ.ಹೇಮಾವತಿ ಮಾತನಾಡಿ, ಸಾಹಿತಿ ವಿ.ಎಚ್. ರಾಜಶೇಖರ್ ಅವರು ತಮ್ಮ ಬದುಕಿನ ಆಗುಹೋಗುಗಳನ್ನು ಬರವಣಿಗೆ ಮೂಲಕ ಮುಂದಿನ ಪೀಳಿಗೆಗೆ ತಲುಪಿಸುವ ಕೆಲಸವನ್ನು ಮಾಡಿದ್ದಾರೆ. ಸಮಾಜದಲ್ಲಿನ ತಳ ಸಮುದಾಯದಿಂದ ಮೇಲ್ವರ್ಗದ ಎಲ್ಲಾ ಜನರ ಬದುಕಿನ ಚಿತ್ರಗಳನ್ನು ಕಟ್ಟಿಕೊಡುವ ಕೆಲಸ ಮಾಡಿದ್ದಾರೆ ಎಂದು ಹೇಳಿದರು.

ಮನದ ಮಂತನ ಮತ್ತು ಅಂತರಾಳದ ಅಮೃತಬಿಂದು ಕೃತಿ ಕುರಿತು ಪತ್ರಕರ್ತ ರೂಪೇಶ್ ಕುಮಾರ್ ಮಾತನಾಡಿ, ಅಂತರಾಳದ ಅಮೃತ ಬಿಂದು ಕೃತಿಯಲ್ಲಿನ ಪ್ರತಿಯೊಂದು ನುಡಿಮುತ್ತುಗಳು ಸಹ ಮಕ್ಕಳಿಂದ ವೃದ್ದರವರೆಗೆ ನಿತ್ಯ ಜೀವನದಲ್ಲಿ ಅಳವಡಿಸಿಕೊಂಡು ಬದುಕನ್ನು ಬದಲಾಯಿಸಿಕೊಳ್ಳುವ ಶಕ್ತಿಯನ್ನು ನೀಡುತ್ತವೆ. ರೈತರ ನೋವು ನಲಿವು, ಗುರು ಹಿರಿಯರಿಗೆ ನೀಡಬೇಕಾದ ಗೌರವ, ಅಂತರಂಗ ಮತ್ತು ಬಾಹ್ಯ ಜೀವನದ ತಲ್ಲಣಗಳು, ತಂದೆ ತಾಯಿಯ ಶ್ರೇಷ್ಠತೆ ಸೇರಿದಂತೆ ಹಲವು ವಿಚಾರಗಳನ್ನು ಅತ್ಯಂತ ಸೂಕ್ಷ್ಮವಾಗಿ ಕೃತಿಯ ಮೂಲಕ ಕಟ್ಟಿಕೊಟ್ಟಿದ್ದಾರೆ ಎಂದರು.

ಮನದ ಮಂತನ ಕೃತಿಯಲ್ಲಿನ 10 ವೈಚಾರಿಕ ವಿಚಾರಗಳು ಇಂದಿನ ಸಮಾಜದ ಆಗುಹೋಗುಗಳನ್ನು ಯಥಾವತ್ತಾಗಿ ಚಿತ್ರಿಸಿದೆ. ದೇವರ ಬಗೆಗಿನನಂಬಿಕೆ ವಿಚಾರವಾಗಿ ದೇವರು ಲೇಖನದಲ್ಲಿ ಚಿತ್ರಿಸಲಾಗಿದೆ. ಹಾಗೆಯೇ ರೈತನ ಬದುಕಿನ ತಲ್ಲಣಗಳು ನಿತ್ಯ ಜೀವನದಲ್ಲಿ ದುಗುಡಗಳನ್ನು ಉತ್ತಮ ರೀತಿಯಲ್ಲಿ ಚಿತ್ರಿಸಿದ್ದಾರೆ ಎಂದರು. ಸರ್ಕಾರಿ ನೌಕರ ಸಂಘದ ಜಿಲ್ಲಾಧ್ಯಕ್ಷ ಕೆ.ಸತೀಶ್ ಮಾತನಾಡಿ, ಇಂದಿನ ಯುವ ಸಮುದಾಯಕ್ಕೆ ಉತ್ತಮ ಸಾಹಿತ್ಯ ಕೃತಿಗಳ ಅವಶ್ಯಕತೆ ಇದೆ. ಈ ನಿಟ್ಟಿನಲ್ಲಿ ಸಾಹಿತಿ ರಾಜಶೇಖರ್ ಅವರು ತಮ್ಮ ಸಾಹಿತ್ಯದ ಮೂಲಕ ಯುವ ಸಮುದಾಯಕ್ಕೆ ಉತ್ತಮ ವಿಚಾರಗಳ ಮೂಲಕ ಮಾರ್ಗದರ್ಶನ ನೀಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಸಾಹಿತಿ ವಿ.ಎಚ್.ರಾಜಶೇಖರ್‌ರವರು ಪ್ರಸ್ತಾವಿಕವಾಗಿ ಮಾತನಾಡಿ, ಒಬ್ಬ ಸಾಹಿತಿಯ ಬದುಕು ಸಾಹಿತ್ಯದ ಮೂಲಕವೇ ರೂಪಗೊಳ್ಳುತ್ತದೆ. ನನ್ನ ಬಾಲ್ಯದಲ್ಲಿಯೇ ಕನ್ನಡದ ಮೇಲಿನ ಪ್ರೀತಿಯು ನನ್ನನ್ನು ಸಾಹಿತಿಯಾಗಿ ರೂಪಿಸಿದೆ. ನನ್ನ ಜೀವನದ ಯಾತ್ರೆಯಲ್ಲಿ ನನಗೆ ಮೂಡಿಬಂದ ಚಿಂತನೆಗಳು, ಆಲೋಚನೆಗಳಿಗೆ ಬರವಣಿಗೆಯ ಮೂಲಕ ರೂಪ ಕೊಟ್ಟು ಕವಿತೆಗಳು, ಲೇಖನಗಳು, ಸೂಕ್ತಿಗಳನ್ನು ಹೊರತಂದಿದ್ದೇನೆ ಎಂದು ಹೇಳಿದರು.ಜಿಲ್ಲಾ ಲೇಖಕರ ವೇದಿಕೆ ಅಧ್ಯಕ್ಷ ಕೂ.ಗಿ.ಗಿರಿಯಪ್ಪ ಅವರು ತುಂಟನ ಕಲರವ ಕೃತಿ ಕುರಿತು ಮಾತನಾಡಿದರು. ಸಾಹಿತಿ ಹಾಗೂ ಲೇಖಕ ಡಾ.ಅಂಕನಹಳ್ಳಿ ಪಾರ್ಥ, ಜಿಲ್ಲಾ ಕಾರ್ಯನಿರತ ಪತಕರ್ತ ಸಂಘದ ಅಧ್ಯಕ್ಷ ವಿಭೂತಿಕೆರೆ ಶಿವಲಿಂಗಯ್ಯ, ಉಪನ್ಯಾಸಕರಾದ ಶಂಕರ್ ನಾಯಕ್, ವೆಂಕಟಚಲ, ಲಕ್ಷ್ಮಿ, ಸ್ಥಳೀಯ ಪ್ರಮುಖರಾದ ರವಿ ಕುಮಾರ್, ರಾಜಪ್ಪ ಮತ್ತಿತರರು ಉಪಸ್ಥಿತರಿದ್ದರು.




> ಪ್ರಾಧ್ಯಾಪಕ ವೃತ್ತಿಯ ಜೊತೆಗೆ ಬರವಣಿಗೆಯನ್ನು ರೂಡಿಸಿಕೊಂಡು ಸಾಹಿತ್ಯ ಕ್ಷೇತ್ರಕ್ಕೆ ಸೇವೆ ಸಲ್ಲಿಸುತ್ತಿರುವ ರಾಜಶೇಖರ್ ಅವರು ಇಂದಿನ ಶಿಕ್ಷಕ ಸಮುದಾಯಕ್ಕೆ ಮಾದರಿಯಾಗಿದ್ದಾರೆ ಮುದ್ರಣ ಅತ್ಯಂತ ದುಬಾರಿಯಾಗಿರುವ ಇಂದಿನ ಸಂದರ್ಭದಲ್ಲಿ 11 ಕೃತಿಗಳನ್ನು ಹೊರ ತಂದಿರುವ ಇವರ ಸಾಹಿತ್ಯಕ ಜೀವನ ಅತ್ಯಂತ ಸಾರ್ಥಕ ಎಂದು ಬಣ್ಣಿಸಿದರು. ಮನುಷ್ಯ ಇಂದು ಮೊಬೈಲ್ ಗಳಿಂದ ಸ್ವಯಂ ಒತ್ತಡ ತಂದುಕೊಂಡು ನೆಮ್ಮದಿ ಕಳೆದುಕೊಳ್ಳುತ್ತಿದ್ದಾನೆ. ಮನೆಗೆ ಬಂದ ಅತಿಥಿಗಳ ಯೋಗಕ್ಷೇಮ ವಿಚಾರಿಸುವಷ್ಟು ಸಮಯ ಇಲ್ಲದವನಾಗಿದ್ದಾನೆ. ಇಂತಹ ಸಂದರ್ಭದಲ್ಲಿ ಓದು ಮತ್ತು ಬರವಣಿಗೆ ಪುಸ್ತಕದ ಮೇಲಿನ ಪ್ರೀತಿಯು ಬದುಕಿಗೆ ನೆಮ್ಮದಿಯನ್ನು ತಂದುಕೊಡುತ್ತದೆ.
> – ಆರ್.ಕೆ.ಬೈರಲಿಂಗಯ್ಯ, ಮಾಜಿ ಜಿಲ್ಲಾಧ್ಯಕ್ಷ

> ಸಾಹಿತ್ಯ, ಸಾಂಸ್ಕೃತಿಕವಾಗಿ ರಾಮನಗರದ ಜನರಲ್ಲಿ ಹೊಸ ಪರಿಕಲ್ಪನೆಯನ್ನು ಹುಟ್ಟಿ ಹಾಕುವ ಕೆಲಸ ಮಾಡಬೇಕಾಗಿದೆ. ಸಾಂಸ್ಕೃತಿಕ ಕಾರ್ಯಕ್ರಮ ಮಾಡಲು ಜಿಲ್ಲಾ ಕೇಂದ್ರದಲ್ಲಿ ಕನ್ನಡ ಭವನ ಇಲ್ಲದಿರುವುದು ನೋವಿನ ಸಂಗತಿಯಾಗಿದ್ದು, ಜನಪ್ರತಿನಿಧಿಗಳು ಕೂಡಲೇ ಕನ್ನಡ ಭವನ ನಿರ್ಮಾಣಕ್ಕೆ ಮುಂದಾಗ ಬೇಕು.
> – ಎಚ್.ಪಿ.ನಂಜೇಗೌಡ, ಸಾಹಿತ್ಯ ಸಂಘಟಕ

# ಮಹಿಳಾ ಮೀಸಲು ವಿರೋಧಿಸಿದ ಇಂಡಿಯಾ ಒಕ್ಕೂಟದ ವಿರುದ್ಧ ಬಿಜೆಪಿ ಪ್ರತಿಭಟನೆ

• ಉದಯವಾಹಿನಿ, ರಾಮನಗರ




ಕೇಂದ್ರ ಸರ್ಕಾರ ಮಂಡನೆ ಮಾಡಿದ ಮಹಿಳಾ ಮೀಸಲಾತಿ ಬಿಲ್ ವಿರೋಧಿಸಿದ ಇಂಡಿಯಾ ಒಕ್ಕೂಟದ ವಿರುದ್ಧ ಬಿಜೆಪಿ ಮಹಿಳಾ ಮೋರ್ಚಾ ಕಾರ್ಯಕರ್ತರು ರಾಮನಗರದ ಬೆಂಗಳೂರು ಮೈಸೂರು ರಸ್ತೆಯಲ್ಲಿ ಪ್ರತಿಭಟನೆ ನಡೆಸಿ ಕಾಂಗ್ರೆಸ್ ಹಾಗೂ ಮಿತ್ರ ಪಕ್ಷಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಕೇಂದ್ರ ಸರ್ಕಾರ ದೇಶದ ಮಹಿಳೆಯರಿಗೆ ರಾಜಕೀಯವಾಗಿ ಸ್ಥಾನಮಾನ ಮತ್ತು ಆರ್ಥಿಕ ಸಬಲೀಕರಣ ನೀಡುವ ನಿಟ್ಟಿನಲ್ಲಿ ಮಹಿಳಾ ಮೀಸಲು ಬಿಲ್ ಮಂಡನೆ ಮಾಡಿತು. ಆದರೆ ಇದನ್ನು ವಿರೋಧಿಸುವ ಮೂಲಕ ಕಾಂಗ್ರೆಸ್ ಪಕ್ಷ ತನ್ನ ನೈಜ ಬಣ್ಣವನ್ನು ದೇಶದ ಜನರಿಗೆ ತೋರಿಸಿದೆ. ಇವರ ಜನವಿರೋಧಿ ನೀತಿಗೆ ಸ್ಪಷ್ಟ ನಿದರ್ಶನವಾಗಿದೆ ಎಂದು ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದ್ದರು.

ಕನಕಪುರ ಮಂಡಲ ಸಾಮಾಜಿಕ ಮಾಧ್ಯಮ ವಿಭಾಗದ ಪವಿತ್ರ ಮಾತನಾಡಿ, ಮಹಿಳಾ ಮೀಸಲಾತಿಗೆ ಕಾಂಗ್ರೆಸ್ ಸರ್ಕಾರ ವಿರೋಧ ಮಾಡುವ ಮೂಲಕ ತನ್ನ ರಾಜಕಿಯ ಒಳ ಅಂತರಂಗವನ್ನು ಬಹಿರಂಗಗೊಳಿಸಿದೆ ಎಂದರು. ಬಿಜೆಪಿ ಮುಖಂಡ ರುದ್ರದೇವರು ಮಾತನಾಡಿ, ಇಂಡಿಯಾ ಕೂಟದ ನೈಜ ರಾಜಕೀಯ ಬಣ್ಣ ಶುಕ್ರವಾರ ಸಂಸತ್‌ನಲ್ಲಿ ಬಹಿರಂಗವಾಗಿದೆ. ಮಹಿಳೆಯರನ್ನು ಕೇವಲ ಮತ ಬ್ಯಾಂಕ್ ನಂತೆ ಬಳಸಿಕೊಳ್ಳುತ್ತಿರುವ ಕಾಂಗ್ರೆಸ್ಸಿಗರ ಬಣ್ಣ ಇಡಿ ದೇಶದ ಜನರಿಗೆ ಗೊತ್ತಾಗಿದೆ ಎಂದರು.

ಮಂಜುಳಾ ಕನಕಪುರ, ಹೇಮಾವತಿ ರಾಜ್ಯ ಕಾರ್ಯಕಾರಣಿ, ನಾಗೇಶ್ ಮಾಜಿ ಸದಸ್ಯ, ದೀಪು, ಕನಕಪುರ ಮಂಡಲದ ಮಮತ, ರಾಮನಗರ ನಗರ ಅಧ್ಯಕ್ಷೆ ದೇವಿಕಾ, ಮಹಿಳಾ ಕಾರ್ಯಕರ್ತರಾದ ಚಂದ್ರಪ್ರಭ, ಮಾಗಡಿ ಗೀತಾಂಜಲಿ, ರಾಜ್ಯ ಕಾರ್ಯಕಾರಿ ಅಲ್ಪ ಸಂಖ್ಯಾತ ಘಟಕದ ತಾಸೀನಾ ಖಾನಂ, ಕಾರ್ಯದರ್ಶಿ ಕಾಳಯ್ಯ, ಬಿಜೆಪಿ ಜಿಲ್ಲಾ ಮಾಜಿ ಅಧ್ಯಕ್ಷ ಎಸ್.ಆರ್.ನಾಗರಾಜ್, ಮುಖಂಡರಾದ ಶಿವಾನಂದ, ರುದ್ರದೇವರು, ಎಸ್ಸಿ ಘಟಕದ ರಾಜು ಮತ್ತಿತರರು ಇದ್ದರು.

# ಸಿಎಂಗೆ ಕಪ್ಪು ಬಾವುಟ ಪ್ರದರ್ಶಿಸಿದರೆ ಕೇಸ್ ರೈತರಿಗೆ ಪೊಲೀಸರ ಗಂಭೀರ ಎಚ್ಚರಿಕೆ

• ಉದಯವಾಹಿನಿ, ಗುಂಡ್ಲುಪೇಟೆ




ನಾಡಿದ್ದು ಗುಂಡ್ಲುಪೇಟೆಗೆ ಆಗಮಿಸಲಿರುವ ಸಿಎಂ ಸಿದ್ದರಾಮಯ್ಯ ಅವರಿಗೆ ಕಪ್ಪು ಬಾವುಟ ಪ್ರದರ್ಶಿಸಲು ರೈತರು ಸಿದ್ಧತೆ ನಡೆಸಿದ್ದಾರೆ. ಆದರೆ, ಈ ಪ್ರತಿಭಟನೆಗೆ ಮುಂದಾದ ರೈತರಿಗೆ ಪೊಲೀಸರು ಗಂಭೀರ ಎಚ್ಚರಿಕೆ ನೀಡಿದ್ದಾರೆ. ಸಿಎಂ ಸಿದ್ದರಾಮಯ್ಯ ಅವರಿಗೆ ಕಪ್ಪು ಬಾವುಟ ಪ್ರದರ್ಶಿಸಲು ಮುಂದಾದರೆ ನಿಮ್ಮ ಮೇಲೆ ಕೇಸ್ ದಾಖಲಿಸಿ ತಕ್ಕ ಪಾಠ ಕಲಿಸಬೇಕಾಗುತ್ತದೆ ಎಂದು ಪೊಲೀಸರು ಕರೆ ಮಾಡಿ ಬೆದರಿಕೆ ಹಾಕುತ್ತಿದ್ದಾರೆ ಎಂದು ರೈತ ಸಂಘದ ರಾಜ್ಯ ಉಪಾಧ್ಯಕ್ಷ ಡಾ. ಗುರುಪ್ರಸಾದ್ ಆರೋಪಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಪೊಲೀಸರು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕಲು ಕುಮ್ಮಕ್ಕು ನೀಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಪೊಲೀಸರ ಮೂಲಕ ಬೆದರಿಕೆ ಹಾಕಿಸುವ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯ ಕಗ್ಗೊಲೆ ಮಾಡಲಾಗುತ್ತಿದೆ. ರೈತರ ಮನವಿಗಳನ್ನು ಕಸದ ಬುಟ್ಟಿಗೆ ಎಸೆದವರಿಗೆ ಮತ್ತೆ ಮನವಿ ನೀಡುವ ಅಗತ್ಯ ನಮಗಿಲ್ಲ, ರೈತ ವಿರೋಧಿ ನಿಲುವು ತಳೆದವರಿಗೆ ಕಪ್ಪು ಬಾವುಟ ಪ್ರದರ್ಶನ ಮಾಡುವುದರಲ್ಲಿ ಯಾವುದೇ ತಪ್ಪಿಲ್ಲ, ನಿಮಗೆ ಸಿಎಂ ಭೇಟಿಗೆ ಅವಕಾಶ ಕಲ್ಪಿಸುತ್ತೇವೆ, ಚಳುವಳಿಯಿಂದ ಹಿಂದೆ ಸರಿಯಿರಿ ಇಲ್ಲವಾದಲ್ಲಿ ಪರಿಣಾಮ ಎದುರಿಸಿ ಎಂದು ಬೆದರಿಕೆ ಹಾಕುತ್ತಿದ್ದಾರೆ .

ಇಂತಹ ಬೆದರಿಕೆಗಳಿಗೆ ಬಗ್ಗುವ ಜಾಯಮಾನ ರೈತರದ್ದಲ್ಲ ಅಂದು ರೈತರಿಗೆ ಏನಾದರೂ ಅನಾಹುತ ಸಂಭವಿಸಿದರೆ ಪೊಲೀಸರೇ ನೇರ ಹೊಣೆಗಾರರಾಗುತ್ತಾರೆ ಎಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ರೈತ ಸಂಘ ಚಾಮರಾಜನಗರ ಜಿಲ್ಲಾಧ್ಯಕ್ಷ ಮಹದೇವಪ್ಪ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕುಂದಕೆರೆ ಸಂಪತ್ತು, ಸಂಚಾಲಕ ಲೋಕೇಶ್,ಬೆಟ್ಟಹಳ್ಳಿ ಗುರು, ಮಣಿಕಂಠ, ನಂದೀಶ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಹದ್ದುಬಸ್ತಿಗೆ ಅಸಡ್ಡೆ: ಸಂತ್ರಸ್ತ ರೈತ ಅಳಲು




• ಉದಯವಾಹಿನಿ, ಬಂಗಾರಪೇಟೆ

ತಾಲ್ಲೂಕಿನ ವಡಿಗೇರಿ ರೈತರೊಬ್ಬರ ಜಮೀನಿನ ಹದ್ದುಬಸ್ತು ಮಾಡಿಕೊಡುವಲ್ಲಿ ಭೂಮಾಪನ ಇಲಾಖೆ ಅಧಿಕಾರಿಗಳ ವಿಳಂಬ ಧೋರಣೆ ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ನ್ಯಾಯಾಲಯದ ಆದೇಶವಿದ್ದರೂ ಗಡಿ ಗುರುತಿಸಲು ಹಿಂದೇಟು ಹಾಕುತ್ತಿರುವ ಅಧಿಕಾರಿಗಳ ನಡೆ ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ.

ವಡಿಗೇರಿ ಗ್ರಾಮದ ನಂಜಪ್ಪ ಅವರು ಸುಮಾರು 14 ವರ್ಷಗಳ ಹಿಂದೆ ಮುನಿರಾಜು ಎಂಬುವವರಿಂದ ಸರ್ವೆ ನಂಬರ್ 152/2ರಲ್ಲಿ 4 ಬೆಳ್ಳಿ 35 ಗುಂಟೆ ಜಮೀನನ್ನು ಜಿಪಿಎ ಮೂಲಕ ನೋಂದಣಿ ಮಾಡಿಸಿಕೊಂಡಿದ್ದರು. ಅಂದಿನಿಂದಲೂ ಅವರೇ ಜಮೀನಿನ ಸ್ವಾಧೀನದಲ್ಲಿದ್ದು, ಬೆಳೆ ಬೆಳೆಯುತ್ತಿದ್ದಾರೆ. ಆದರೆ, ಮೂಲ ಕುಟುಂಬದವರು ಈ ಜಮೀನು ತಮಗೆ ಸೇರಿದ್ದೆಂದು ತಹಶೀಲ್ದಾರ್ ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು.

ಸುದೀರ್ಘ ಕಾನೂನು ಹೋರಾಟದ ಬಳಿಕ ಉಪ ವಿಭಾಗಾಧಿಕಾರಿ ನ್ಯಾಯಾಲಯವು ಜಮೀನಿನ ದಾಖಲೆಗಳನ್ನು ಪರಿಶೀಲಿಸಿ ಸದರಿ ಜಮೀನು ನಂಜಪ್ಪ ಅವರಿಗೆ ಸೇರಿದ್ದೆಂದು ಅಂತಿಮ ಆದೇಶ ಹೊರಡಿಸಿದೆ. ಪ್ರಸ್ತುತ ನಂಜಪ್ಪ ಅವರ ಹೆಸರಿನಲ್ಲಿ 11ಇ ಸ್ಕೆಚ್, ಪಹಣಿ, ಪಟ್ಟಾ ಸೇರಿದಂತೆ ಎಲ್ಲಾ ಅಧಿಕೃತ ದಾಖಲೆಗಳಿವೆ.

ನ್ಯಾಯಾಲಯದ ಆದೇಶ ಮತ್ತು ದಾಖಲೆಗಳಿದ್ದರೂ ಭೂಮಾಪನ ಇಲಾಖೆ ಅಧಿಕಾರಿಗಳು ಜಮೀನಿನ ಹದ್ದುಬಸ್ತು ಮಾಡಿಕೊಡಲು ವಿನಾಕಾರಣ ಕಾಲಹರಣ ಮಾಡುತ್ತಿದ್ದಾರೆ ಎಂಬ ಆರೋಪ ಕೇಳಿ ಬಂದಿದೆ. ಅಧಿಕಾರಿಗಳು ಪದೇ ಪದೇ ದಿನಾಂಕಗಳನ್ನು ಮುಂದೂಡುತ್ತಿರುವುದು ಶಂಕೆಗೆ ಎಡೆಮಾಡಿಕೊಟ್ಟಿದೆ ಎಂದು ಸಂತ್ರಸ್ತರು ದೂರಿದ್ದಾರೆ.

ಒಂದು ಕಡೆ ದೌರ್ಜನ್ಯ. ಇನ್ನೊಂದು ಕಡೆ ಅಧಿಕಾರಿಗಳ ಅಸಡ್ಡೆಯಿಂದ ಮಾನಸಿಕವಾಗಿ ನೊಂದಿದ್ದೇನೆ. ನನಗೆ ನ್ಯಾಯ ಸಿಗದಿದ್ದರೆ ದಯಾಮರಣ ಕೊಡಿ ಎಂದು ನಂಜಪ್ಪ ಅಳಲು ತೋಡಿಕೊಂಡಿದ್ದಾರೆ. ರಿಪಬ್ಲಿಕನ್ ಸಂಘಟನೆ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಚಿಕ್ಕನಾರಾಯಣ ಮಾತನಾಡಿ, ಅಧಿಕಾರಿಗಳ ಈ ನಿರ್ಲಕ್ಷ್ಯದಿಂದ ಗ್ರಾಮದಲ್ಲಿ ಗಲಭೆ ಆಗುವ ಸಾಧ್ಯತೆಯಿದೆ.

ಕೂಡಲೇ ಎಡಿಎಲ್‌ಆರ್, ಭೂಮಾಪನ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಬಂದು ಹದ್ದುಬಸ್ತು ಮಾಡಿಕೊಡಬೇಕು. ತಪ್ಪಿದಲ್ಲಿ ತಾಲ್ಲೂಕು ಆಡಳಿತ ಕಚೇರಿಯ ಮುಂದೆ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

# ತಾಯಿ ಮರಣ ಪ್ರಮಾಣ ಇಳಿಕೆ

• ಉದಯವಾಹಿನಿ, ಕೋಲಾರ



ಜಿಲ್ಲೆಯಲ್ಲಿ ಪ್ರಸವಪೂರ್ವ, ಪ್ರಸವ ನಂತರದಲ್ಲಿ ತಾಯಿ ಮರಣ ಪ್ರಮಾಣ ಗಣನೀಯವಾಗಿ ತಗ್ಗಿದೆ. ಜಿಲ್ಲಾಡಳಿತ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕೈಗೊಂಡ ಆರ್‌ಆರ್‌ಆರ್ ಮಾದರಿ ವಿನೂತನ ಕ್ರಮ ಇದಕ್ಕೆ ಕಾರಣವಾಗಿದೆ. 2023–24ನೇ ಸಾಲಿನಲ್ಲಿ ಶೇ 50ರಷ್ಟಿದ್ದ ತಾಯಿ ಮರಣ ಪ್ರಮಾಣ ಈಗ ಶೇ 23ಕ್ಕೆ ತಗ್ಗಿದೆ. ಕೆಲ ನಿಮಿಷ ತಡವಾಗಿದ್ದರೂ ಜೀವಹಾನಿ ಸಾಧ್ಯತೆಯಾಗುವಂತಹ ಪ್ರಕರಣಗಳಲ್ಲಿಯೂ ಜೀವ ಉಳಿಸಲಾಗಿದೆ. ಪ್ರಸವಪೂರ್ವ, ನಂತರದ ಅವಧಿ ಯಲ್ಲಿ ತಾಯಂದಿರ ಮರಣ ಪ್ರಮಾಣ (ಪ್ರತಿ ಲಕ್ಷ ಜೀವಂತ ಜನನಗಳಿಗೆ) ರಾಷ್ಟ್ರಮಟ್ಟದಲ್ಲಿ ಶೇ 97ರಷ್ಟಿದ್ದು, ರಾಜ್ಯ ಮಟ್ಟದಲ್ಲಿ ಶೇ 68ರಷ್ಟಿದೆ.

**ಏನಿದು ತ್ರಿಬಲ್ ಆರ್:** ಜಿಲ್ಲೆಯಲ್ಲಿ ಮರಣಪ್ರಮಾಣ ತಗ್ಗಿಸಲು ಜಿಲ್ಲಾಧಿಕಾರಿ ಎಂ.ಆರ್.ರವಿ ನೇತೃತ್ವದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ 'ಆರ್‌ಆರ್‌ಆರ್ ಮಾದರಿ' ಜಾರಿಗೊಳಿಸಿದೆ.

ಗರ್ಭಿಣಿಯ ಸಮಸ್ಯೆಗಳ ಪುನರ್ ಪರಿಶೀಲನೆ (ಆರ್1–ರಿಅಸೆಸ್ ಮೆಂಟ್ ಆಫ್ ರಿಸ್ಕ್), ವಿಳಂಬ ತಗ್ಗಿಸುವುದು (ಆರ್2–ರೆಡ್ಯೂಸ್ ದಿ ಡಿಲೇ), ತ್ವರಿತಗತಿಯ ಸ್ಪಂದನೆ (ಆರ್3–ರೆಸ್ಪಾಂಡ್ ಸ್ವಿಫ್ಟಿ) ವಿಧಾನದ ಮೂಲಕ ತಾಯಿ ಮರಣ ಪ್ರಮಾಣ ತಗ್ಗಿಸಲು ಪ್ರಯತ್ನ ನಡೆಯುತ್ತಿದೆ.

2023–24ರಲ್ಲಿ 9 ಹಾಗೂ 2024–25ರಲ್ಲಿ 8 ತಾಯಂದಿರು ಮೃತಪಟ್ಟಿದ್ದರು.


ಆರ್‌ಆರ್‌ಆರ್ ಮಾದರಿ ಜಾರಿಯ ನಂತರ 2025–26ನೇ ಸಾಲಿನಲ್ಲಿ ಕೇವಲ ನಾಲ್ವರು ಮೃತಪಟ್ಟಿದ್ದಾರೆ.

ಈ ಹಿಂದೆ ಹೆರಿಗೆ ವೇಳೆ ಸಂಭವಿಸಿದ ತಾಯಿ ಮರಣ ಪ್ರಕರಣಗಳ 'ಡೆತ್ ಆಡಿಟ್' ಕೂಡ ಮಾಡಲಾಗಿದೆ. ಕೆಲ ಪ್ರಕರಣಗಳಲ್ಲಿ ತಾಯಿಯ ಪ್ರಾಣ ಉಳಿಸಿಕೊಳ್ಳಬಹುದಿತ್ತು ಎಂಬುದು ಗೊತ್ತಾಗಿದೆ.

**ಕಾರ್ಯಾಚರಣೆ ಹೇಗೆ?:** ಮೊದಲ ಹಂತದಲ್ಲಿ (ಆರ್1) ಹೆರಿಗೆಗೆ ಮೂರುತಿಂಗಳಿರುವ ಸಮಸ್ಯಾತ್ಮಕ ಗರ್ಭಿಣಿ ಯರನ್ನು ಗುರುತಿಸಲಾಗುತ್ತದೆ. ವೈದ್ಯಾಧಿಕಾರಿ ಅಂಥವರನ್ನು ನಿಯಮಿತವಾಗಿ ಪರೀಕ್ಷಿಸುವರು. ಹೆರಿಗೆಗೆ ಸಂಬಂಧಿಸಿದ ಸಂಪೂರ್ಣ ಮಾಹಿತಿಯ ಕಡತ ಸಿದ್ಧಪಡಿಸುತ್ತಾರೆ. ಎರಡನೇ ಹಂತದಲ್ಲಿ (ಆರ್2) ಹೆರಿಗೆ ಸಮಯದಲ್ಲಿ ಸಮಸ್ಯೆ ಉಂಟಾಗದಂತೆ ನೋಡಿಕೊಳ್ಳಲು ಕಾಲವಿಳಂಬ ಮಾಡದೆ ತಕ್ಷಣವೇ ಉನ್ನತ ಮಟ್ಟದ ಆಸ್ಪತ್ರೆಗೆ ಶಿಫಾರಸು ಮಾಡಲಾಗುತ್ತದೆ.

ಮೂರನೇ ಹಂತದಲ್ಲಿ (ಆರ್3) ತಜ್ಞ ವೈದ್ಯರು ಗರ್ಭಿಣಿ ಪರಿಶೀಲಿಸಿ ಅಗತ್ಯವಿರುವ ಚಿಕಿತ್ಸೆ ಬಗ್ಗೆ ತ್ವರಿತಗತಿಯಲ್ಲಿ ನಿರ್ಧಾರ ಕೈಗೊಳ್ಳುತ್ತಾರೆ ಅಗತ್ಯವಿದ್ದರೆ ಮೇಲ್ದರ್ಜೆ ಆಸ್ಪತ್ರೆ ಅಥವಾ ಖಾಸಗಿ ಆಸ್ಪತ್ರೆಗೆ ಶಿಫಾರಸು ಮಾಡುತ್ತಾರೆ.

ಸತಾಯಿ ಮರಣ ಪ್ರಮಾಣ ತಗ್ಗಿಸಲು ಸಿಎಂ ನಿರ್ದೇಶನ ನೀಡಿದ್ದಾರೆ. ಅದರಂತೆ ನಾವು ಆರ್ ಆರ್‌ಆರ್ ಪ್ರಯೋಗದಿಂದ ಪ್ರಮಾಣ ತಗ್ಗಿಸುವ ಪ್ರಯತ್ನ ನಡೆಸಿ, ಯಶಸ್ವಿಯೂ ಆಗಿದ್ದೇವೆ. 24 ತಾಸು ನಿಗಾ, ಪರಸ್ಪರ ಸಂವಹನ, ಗರ್ಭಿಣಿ ಮತ್ತು ಆಕೆಯ ಕುಟುಂಬದ ಜೊತೆ ಸಂಪರ್ಕ, ಹಿಂದಿನ ಹೆರಿಗೆಯ ಮಾಹಿತಿ ಹಾಗೂ ಪ್ರಕರಣದ ಫಾಲೋ ಅಪ್ ಮಾಡುತ್ತಿದ್ದೇವೆ' ಎಂದು ಜಿಲ್ಲಾಧಿಕಾರಿ ಎಂ.ಆರ್.ರವಿ ತಿಳಿಸಿದರು.



### ಡಿಂಕ್ ಸಂಪರ್ಕ ವ್ಯವಸ್ಥೆ

**ಜಿಲ್ಲಾ ಆರೋಗ್ಯಾಧಿಕಾರಿ ಕಚೇರಿಯ ಆವರಣದಲ್ಲಿ ಟಾಟಾ ಸಮೂಹದ ಸಹಯೋಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಡಿಂಕ್ (ಡಿಜಿಟಲ್ ನರ್ವ್ ಸೆಂಟರ್) ಮೂಲಕ ಜಿಲ್ಲೆಯಲ್ಲಿನ ಗರ್ಭಿಣಿಯರ ಗುರುತಿಸುವಿಕೆ ಹಾಗೂ ಸಂಪರ್ಕಿಸುವ ವ್ಯವಸ್ಥೆ ನಡೆಯುತ್ತಿದೆ.**

# ಜನ ಗಣತಿಗೆ ಆರಂಭದಲ್ಲೇ ವಿಘ್ನ: ಆ್ಯಪ್, ಸರ್ವರ್ ಸಮಸ್ಯೆಯಿಂದ ಗಣತಿದಾರರು ಹೈರಾಣು

• ಉದಯವಾಹಿನಿ, ತುಮಕೂರು

ಜನಗಣತಿ ಕಾರ್ಯಕ್ಕೆ ಆರಂಭದಲ್ಲಿಯೇ ವಿಘ್ನ ಎದುರಾಗಿದ್ದು ಮೊಬೈಲ್ ಫೋನ್‌ನಲ್ಲಿ ಹೌಸ್ ಲಿಸ್ಟಿಂಗ್ ಆಪರೇಟಿಂಗ್ ಆ್ಯಪ್ ಇನ್‌ಸ್ಟಾಲ್ ಆಗದೆ ಗಣತಿದಾರರು ಪರದಾಡುತ್ತಿದ್ದಾರೆ. ಏ.16ರಿಂದ ಮನೆ ಗಣತಿ ಕಾರ್ಯ ಆರಂಭವಾಗಿದೆ ಗಣತಿಗೆ ನೇಮಿಸಿದ ಶಿಕ್ಷಕರಲ್ಲಿ ಹಲವರು ಹಳೆಯ ಆವೃತ್ತಿಯ ಮೊಬೈಲ್‌ಬಳಸುತ್ತಿದ್ದಾರೆ. ಇದರಲ್ಲಿ ಎಚ್‌ಎಲ್‌ಒ ಆ್ಯಪ್ ತೆರೆದುಕೊಳ್ಳುತ್ತಿಲ್ಲ. ಕನಿಷ್ಠ ಆಂಡ್ರಾಯ್ಡ್ 10ರ ವರ್ಷನ್ ಇದ್ದರೆ ಮಾತ್ರ ಆ್ಯಪ್ ಡೌನ್‌ಲೋಡ್ ಆಗುತ್ತದೆ.

ಈ ಮಾಹಿತಿ ಇಲ್ಲದ, ಹೊಸ ಮಾದರಿಯ ಮೊಬೈಲ್ ಹೊಂದಿರದ ಸಾಕಷ್ಟು ಶಿಕ್ಷಕರು ಸಮೀಕ್ಷೆಗೆ ಮುಂದಾಗಿಲ್ಲ. ಗಣತಿಗೆ ನಿಯೋಜನೆಗೊಂಡ ಶಿಕ್ಷಕರು ಹಲವೆಡೆ ಸಮೀಕ್ಷೆಯನ್ನೇ ಆರಂಭಿಸಿಲ್ಲ. ತಾಂತ್ರಿಕ ಸಮಸ್ಯೆ ಪರಿಹರಿಸಿಕೊಳ್ಳಲು ಹೆಣಗಾಡುತ್ತಿದ್ದಾರೆ. ಜನ ಗಣತಿ ಸಮೀಕ್ಷೆಗಾಗಿ ಹಲವರು ಸಂಬಂಧಿಕರು, ಸ್ನೇಹಿತರು, ಪತಿಯ ಮೊಬೈಲ್ ಪಡೆದಿದ್ದರೆ, ಆ್ಯಪ್ ಡೌನ್‌ಲೋಡ್‌ಆಗದವರು 15 ಸಾವಿರದಿಂದ 20 ಸಾವಿರ ಕೊಟ್ಟು ಹೊಸ ಮೊಬೈಲ್ ಖರೀದಿಸುತ್ತಿದ್ದಾರೆ. ಆದರೆ ಸಮೀಕ್ಷೆ ಕೆಲಸ ಮುಗಿಸಿದರೆ ಅವರಿಗೆ ಸಿಗುವುದು 25 ಸಾವಿರ.




### ಸಮೀಕ್ಷೆಗೆ ತೆರಳಿದಾಗ ವಾಸ್ತವದ ಅರಿವು

**ಅಪ್‌ಡೇಟ್ ಆವೃತ್ತಿಯ ಮೊಬೈಲ್ ಬಳಕೆ ಕುರಿತು ತರಬೇತಿ ಕಾರ್ಯಾಗಾರದಲ್ಲಿ ಮಾಹಿತಿ ನೀಡಲಾಗಿತ್ತು. ಹಿರಿಯ ಶಿಕ್ಷಕರಿಗೆ ತರಬೇತಿಗೆ ಗೈರಾದವರಿಗೆ ಇದು ತಿಳಿದಿಲ್ಲ. ಸಮೀಕ್ಷೆಗೆ ತೆರಳಿದಾಗ ವಾಸ್ತವ ಅರಿವಾಗಿದೆ. ಪ್ರತಿ ಸಮೀಕ್ಷೆ ಸಮಯದಲ್ಲಿ ಸರ್ವರ್ ಲಾಗಿನ್ ಸಮಸ್ಯೆ ಸಾಮಾನ್ಯವಾಗಿದೆ ಎಂದು ತುಮಕೂರು ತಾಲ್ಲೂಕಿನ ಶಿಕ್ಷಕರೊಬ್ಬರು ಪ್ರತಿಕ್ರಿಯಿಸಿದರು.**

ಸರ್ಕಾರ ಸಮೀಕ್ಷೆಗೆ ಪೂರಕವಾಗಿ ಅಗತ್ಯ ಪರಿಕರ ವಿತರಿಸಿಲ್ಲ, ಈ ಕೆಲಸ ಹೊರೆಯಾಗಿ ಪರಿಣಮಿಸಿದೆ. ಹಿರಿಯ ಶಿಕ್ಷಕರಿಗೆ ಸಮೀಕ್ಷೆ ಪೂರ್ಣಗೊಳಿಸಲು ಆಗುತ್ತಿಲ್ಲ. ಸುಧಾರಿತ ತಂತ್ರಜ್ಞಾನ ಬಳಸಲು ಬಾರದವರು ಪೇಚಿಗೆ ಸಿಲುಕುತ್ತಿದ್ದಾರೆ ಎಂದು ಶಿಕ್ಷಕರೊಬ್ಬರು ಬೇಸರ ವ್ಯಕ್ತಪಡಿಸಿದರು.

ಆ್ಯಪ್ ಸಮಸ್ಯೆ ಒಂದೆಡೆಯಾದರೆ ಮತ್ತೊಂದು ಕಡೆ ಲಾಗಿನ್ ತೊಂದರೆಯಾಗುತ್ತಿದೆ. ಸಮೀಕ್ಷೆ ಆರಂಭದಿಂದ ಇದೇ ರೀತಿಯಾಗುತ್ತಿದೆ. ತರಬೇತಿಗೆ ಹಾಜರಾಗಿ, ಎಲ್ಲಾ ಮಾಹಿತಿ ಪಡೆದು ಲಾಗಿನ್ ಕುರಿತು ಪರಿಶೀಲನೆ ನಡೆಸಿ, ಗಣತಿಗೆ ಹೋದರೆ ಸರ್ವರ್ ಸಮಸ್ಯೆ ಕಾಡುತ್ತಿದೆ. ಲಾಗಿನ್ ಆಗಲು ಗಂಟೆಗಟ್ಟಲೇ ಕಾಯುತ್ತಾ ಕಳೆತುಕೊಳ್ಳಬೇಕಾದ ಸ್ಥಿತಿ ಇದೆ. ಕೆಲವರಿಗೆ ಲಾಗಿನ್ ಆದ ನಂತರ ಮೊಬೈಲ್‌ಗೆ ಒಟಿಪಿ ಬರುತ್ತಿಲ್ಲ. ಇಂತಹ ಒಂದಿಲ್ಲೊಂದು ಸಮಸ್ಯೆ ಕಾಡಲಾರಂಭಿಸಿದೆ.

# ಕಾವೇರಿ ನದಿಯಲ್ಲಿ ಈಜಲು ತೆರಳಿದ್ದ 6 ಮಂದಿ ನೀರು ಪಾಲು

## ಉರೂಸ್ ಹಿನ್ನೆಲೆಯಲ್ಲಿ ದರ್ಗಾಕ್ಕೆ ಭೇಟಿ ನೀಡಲು ಬಂದಿದ್ದ ಪ್ರವಾಸಿಗರು ಈ ದುರಂತಕ್ಕೆ ಬಲಿ

• ಉದಯವಾಹಿನಿ, ಮೈಸೂರು

ಜಿಲ್ಲೆಯ ಕೆ.ಆರ್ ನಗರ ತಾಲ್ಲೂಕಿನ ಅರ್ಕೇಶ್ವರ ದೇವಸ್ಥಾನದ ಸಮೀಪವಿರುವ ಕಾವೇರಿ ನದಿಯಲ್ಲಿ ಈಜಲು ತೆರಳಿದ್ದ ಆರು ಮಂದಿ ನೀರಿನಲ್ಲಿ ಮುಳುಗಿ ದಾರುಣವಾಗಿ ಮೃತಪಟ್ಟಿದ್ದಾರೆ. ಉರೂಸ್ ಹಿನ್ನೆಲೆಯಲ್ಲಿ ದರ್ಗಾಕ್ಕೆ ಭೇಟಿ ನೀಡಲು ಬಂದಿದ್ದ ಪ್ರವಾಸಿಗರು ಈ ದುರಂತಕ್ಕೆ ಬಲಿಯಾಗಿದ್ದಾರೆ.

**ಘಟನೆಯ ವಿವರ:** ಮೈಸೂರು ಜಿಲ್ಲೆಯ ಕೆ.ಆರ್.ನಗರದಲ್ಲಿ ಭಾನುವಾರ ಉರೂಸ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಈ ಸಂಭ್ರಮದಲ್ಲಿ ಭಾಗಿಯಾಗಲು ಬೆಂಗಳೂರು, ತಮಿಳುನಾಡಿನ ಊಟಿಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಮತ್ತು ಪ್ರವಾಸಿಗರು ಆಗಮಿಸಿದ್ದರು. ಈ ಸಂದರ್ಭದಲ್ಲಿ ಎಂಟು ಜನರ ತಂಡವೊಂದು ಅರ್ಕೇಶ್ವರ ದೇಗುಲದ ಬಳಿ ಹರಿಯುವ ಕಾವೇರಿ ನದಿಯಲ್ಲಿ ಸ್ನಾನ ಮಾಡಲು ಹಾಗೂ ಈಜಲು ಇಳಿದಿದ್ದಾರೆ. ನದಿಯ ನೀರಿನ ಸೆಳೆತಕ್ಕೆ ಸಿಲುಕಿ ಎಂಟು ಮಂದಿಯೂ ಮುಳುಗಲಾರಂಭಿಸಿದರು. ಈ ವೇಳೆ ಅಲ್ಲೇ ಇದ್ದ ಸ್ಥಳೀಯರು ತಕ್ಷಣ ಕಾರ್ಯಪ್ರವೃತ್ತರಾಗಿ ಇಬ್ಬರನ್ನು ರಕ್ಷಿಸುವಲ್ಲಿ ಯಶಸ್ವಿಯಾದರು. ಆದರೆ, ಉಳಿದ ಆರು ಮಂದಿ ನೀರಿನ ಆಳಕ್ಕೆ ಸಿಲುಕಿ ಜಲಸಮಾಧಿಯಾಗಿದ್ದಾರೆ.




ಬೆಂಗಳೂರಿನ ಐಮನ್(13), ಯಾಸಿನ್(23), ನೇಹಾ(22), ತಮಿಳುನಾಡು ಊಟಿಯ ಫಾತಿಮಾ(30), ಉಮೆರ್(5), ಕೆ.ಆರ್.ನಗರದ ಕೆ.ಆಫೀ (13) ಮೃತರು. ಇನ್ನಿಬ್ಬರನ್ನ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆ ರವಾನಿಸಲಾಗಿದೆ.

ವಿಷಯ ತಿಳಿದ ಶಾಸಕ ಡಿ.ರವಿಶಂಕರ್, ಆಸ್ಪತ್ರೆಗೆ ಭೇಟಿ ನೀಡಿ, ವೈದ್ಯರಿಂದ ಮೃತರ ಮಾಹಿತಿ ಪಡೆದರು. ಸಾವಿನ ವಿಷಯ ತಿಳಿದು ಸ್ಥಳೀಯರು ಆಸ್ಪತ್ರೆ ಮುಂಭಾಗ ಜಮಾಯಿಸಿದರು. ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ, ಎಎಸ್ಪಿಗಳಾದ ನಾಗೇಶ್, ಮಲ್ಲಿಕ್, ಕೆ.ರ್‌ಆ.ನಗರ ಪೊಲೀಸ್ ಠಾಣೆ ಸಿಬ್ಬಂದಿ ಜನರನ್ನು ನಿಯಂತ್ರಿಸಿದರು.


ದುರ್ಘಟನೆಯಲ್ಲಿ ರಕ್ಷಿಸಲ್ಪಟ್ಟು, ಸದ್ಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವವರು ಆದಷ್ಟು ಬೇಗ ಗುಣಮುಖರಾಗಿ ತಮ್ಮವರನ್ನು ಕೂಡಿಕೊಳ್ಳಲಿ ಎಂದು ಹಾರೈಸುತ್ತೇನೆ ಎಂದಿದ್ದಾರೆ.

### ಸ್ಥಳಕ್ಕೆ ಪೊಲೀಸರ ಭೇಟಿ

**ಘಟನೆ ನಡೆದ ತಕ್ಷಣ ಕೆ.ಆರ್.ನಗರ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಅಗ್ನಿಶಾಮಕ ದಳ ಮತ್ತು ಸ್ಥಳೀಯ ಈಜುಗಾರರ ಸಹಾಯದಿಂದ ಮೃತದೇಹಗಳನ್ನು ಹೊರತೆಗೆಯುವ ಕಾರ್ಯ ನಡೆದಿದೆ. ಹಬ್ಬದ ಸಂಭ್ರಮಕ್ಕಾಗಿ ಬಂದವರು ಹೀಗೆ ನದಿ ಪಾಲಾಗಿರುವುದು ಇಡೀ ಕೆ.ಆರ್.ನಗರ ಪ್ರದೇಶದಲ್ಲಿ ಶೋಕದ ಛಾಯೆ ಮೂಡಿಸಿದೆ. ಕೆ.ಆರ್.ನಗರ ಪೊಲೀಸ್ ಠಾಣೆಯಲ್ಲಿ ಈ ಕುರಿತು ಪ್ರಕರಣ ದಾಖಲಾಗುವ ಸಾಧ್ಯತೆ ಇದೆ.**

### ಸಿಎಂ ಪರಿಹಾರ

**ನದಿಯಲ್ಲಿ ಈಜಲು ತೆರಳಿದ್ದ 6 ಮಂದಿ ನೀರುಪಾಲಾದ ವಿಚಾರ ತಿಳಿದು ದುಃಖ ಆಯಿತು. ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲಿ, ಅವರ ಕುಟುಂಬ ಸದಸ್ಯರಿಗೆ ಅಗಲಿಕೆಯ ದುಃಖ ಭರಿಸುವ ಶಕ್ತಿ ಸಿಗಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ. ಕುಟುಂಬ ಸದಸ್ಯರನ್ನು ಕಳೆದುಕೊಂಡು ನೊಂದಿರುವ ಜೀವಗಳಿಗೆ ಆರ್ಥಿಕ ಸವಾಲುಗಳು ಮತ್ತಷ್ಟು ಬಾಧಿಸದಿರಲಿ ಎಂಬ ಮಾನವೀಯ ಕಾಳಜಿಯೊಂದಿಗೆ ಮೃತರ ಕುಟುಂಬಕ್ಕೆ ತಲಾ 5 ಲಕ್ಷ ರೂ. ಪರಿಹಾರ ನೀಡಲಾಗುವುದು ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದ್ದಾರೆ.**



## ಮಿನಿ ನ್ಯೂಸ್

### ಬಂಡೀಪುರದಲ್ಲಿ ತರಕಾರಿ ಶೋಧಕ ಆನೆ : ಕ್ಯಾಪ್ಟನ್ ಸಲಗದ ದೃಶ್ಯ ವೈರಲ್

• ಉದಯವಾಹಿನಿ, ಗುಂಡ್ಲುಪೇಟೆ

ಭಾನುವಾರ ಬೆಳ್ಳಂಬೆಳಗ್ಗೆ ರಸ್ತೆಗಿಳಿದ ಬಂಡೀಪುರದ ಕ್ಯಾಪ್ಟನ್ ಎಂದೇ ಖ್ಯಾತಿಯಾದ ಒಂಟಿ ಸಲಗ ಸರ್ಚಿಂಗ್ ಅಪರೇಷನ್ ನಡೆಸಿದೆ, ರಸ್ತೆಗೆ ಅಡ್ಡಲಾಗಿ ನಿಂತ ಸಲಗ ತರಕಾರಿ ಹೊತ್ತು ಸಾಗುವ ವಾಹನಗಳ ಶೋಧನೆಯಲ್ಲಿ ತೊಡಗಿದ್ದ ದೃಶ್ಯ ಸಾಮಾಜಿಕ ಜಾಲತಾಣದಲ್ಲಿ ನೋಡುಗರ ಕಣ್ಮನ ಸೆಳೆದಿದೆ. ಯಾರಿಗೂ ತೊಂದರೆ ನೀಡದೆ ತರಕಾರಿ ಸಾಗಿಸುವ ವಾಹನಗಳನ್ನ ಮಾತ್ರ ಅಡ್ಡಗಟ್ಟುವ ಸಲಗ ಎಲ್ಲರ ನೆಚ್ಚಿನ ಕ್ಯಾಪ್ಟನ್ ಆಗಿದ್ದಾನೆ. ಪ್ರತಿಷ್ಠಿತ ಹುಲಿ ರಕ್ಷಿತಾರಣ್ಯ ಬಂಡೀಪುರದಲ್ಲಿ, ಮುಂಜಾನೆಯೇ ರಸ್ತೆಗಿಳಿಯುವ ನೀಲದಂತದ ಒಂಟಿ ಸಲಗ ಪ್ರವಾಸಿಗ ಅಭಿಮಾನಿಗಳನ್ನ ಹೊಂದಿದ್ದಾನೆ, ಸಂಜೆ ವೇಳೆ ಈತನನ್ನ ಕಾಣಲೆಂದೆ ತೆರಳುವವರುಂಟು.

**ಹಾನಿಯುಂಟುಮಾಡದ ಸಲಗ :** ಪ್ರತಿನಿತ್ಯ ನೂರಾರು ವಾಹನಗಳು ಸಂಚಾರ ಮಾಡುತ್ತಿದ್ದರೂ ಸಹ ಯಾರಿಗೂ ಹಾನಿಯುಂಟುಮಾಡಿಲ್ಲ, ವಾಹನಗಳ ಪಕ್ಕದಲ್ಲೇ ಸರಿದು ಹೋದರು ತನ್ನಷ್ಟಕ್ಕೆ ತಾನು ಮುಂದೆ ಸಾಗುವ ಕ್ಯಾಪ್ಟನ್ ತನ್ನ ಸೌಮ್ಯ ಸ್ವಭಾವದಿಂದಲೇ ಆ ಮಾರ್ಗದಲ್ಲಿ ದಿನನಿತ್ಯ ಸರಕು ಸಾಮಾಗ್ರಿ, ತರಕಾರಿಗಳನ್ನ ಹೊತ್ತು ಸಾಗುವ ಟೆಂಪೋ, ಲಾರಿ ಚಾಲಕರ ಪ್ರೀತಿಗೆ ಪಾತ್ರನಾಗಿದ್ದಾನೆ, ಒಟ್ಟಾರೆಯಾಗಿ ದೈತ್ಯ ಗಾತ್ರದ ಒಂಟಿ ಸಲಗ ರಸ್ತೆಗೆ ಅಡ್ಡಲಾಗಿ ನಿಂತರೂ ಯಾವುದೇ ಅಹಿತಕರ ಘಟನೆಗಳು ಸಂಭವಿಸಿಲ್ಲವಾದರೂ ಪ್ರವಾಸಿಗರು ಎಚ್ಚರಿಕೆಯಿಂದರುವುದು ಒಳಿತು.

### ಪಂಪ್ ಮೋಟಾರ್ ವಿತರಣೆ

• ಉದಯವಾಹಿನಿ, ಕುಣಿಗಲ್

ಗಂಗಾ ಕಲ್ಯಾಣ ಯೋಜನೆಯಲ್ಲಿ ಬೋರ್‌ವೆಲ್‌ಗಳನ್ನು ಕೊರೆಸಲಾಗಿದ್ದು, ಅಗತ್ಯ ಪೈಪ್ ನೀಡುವಂತೆ ಫಲಾನುಭವಿಗಳು ಶಾಸಕರು, ಸಣ್ಣ ನೀರಾವರಿ ಇಲಾಖೆ ಅಧಿಕಾರಿಗಳಿಗೆ ಆಗ್ರಹಿಸಿದರು. ಪಟ್ಟಣದ ಜಿಕೆಬಿಎಂಎಸ್ ಮೈದಾನದಲ್ಲಿ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯಿಂದ ಪರಿಶಿಷ್ಟ ಜಾತಿಯ 76 ಫಲಾನುಭವಿಗಳಿಗೆ ಪಂಪ್ ಮೋಟಾರ್, ಸಂಪರ್ಕ ಸಲಕರಣೆಗಳನ್ನು ಶಾಸಕ ಡಾ.ರಂಗನಾಥ್ ವಿತರಿಸಿದರು. ಫಲಾನುಭವಿಗಳು, ಬೋರ್‌ವೆಲ್‌ನ್ನು 650 ರಿಂದ 700 ಅಡಿಗಳಿಗೆ ಕೊರೆಸಲಾಗಿದೆ. ಇಲಾಖೆಯಿಂದ 380 ಅಡಿಗಳಿಗೆ ಮಾತ್ರವೇ ಪೈಪ್ ವಿತರಣೆ ಮಾಡಲಾಗುತ್ತಿದೆ. ಉಳಿದ ಭಾಗಕ್ಕೆ ಪೈಪ್ ಖರೀದಿಸುವ ಶಕ್ತಿ ಇಲ್ಲದೆ ಮತ್ತೆ ಸಾಲ ಮಾಡಿ ಪೈಪ್ ಹಾಕಬೇಕಾದ ಸ್ಥಿತಿ ನಿರ್ಮಾಣವಾಗಿದೆ ಎಂದು ದೂರಿದರು. ಶಾಸಕ ಡಾ.ರಂಗನಾಥ್, ಅಧಿಕಾರಿಗಳಿಂದ ವಿವರ ಪಡೆದು ಸರಿದೂಗಿಸುವ ಭರವಸೆ ನೀಡಿ, ತಾಲ್ಲೂಕಿನಲ್ಲಿ ಪ್ರಥಮ ಬಾರಿಗೆ ಅತಿ ಹೆಚ್ಚು ಫಲಾನುಭವಿಗಳಿಗೆ ಪಂಪ್ ಮೋಟಾರ್ ವಿತರಣೆ ಮಾಡಲಾಗಿದೆ. ಗ್ರಾಮೀಣ ಪ್ರದೇಶದ ಫಲಾನುಭವಿಗಳು ಸದುಪಯೋಗ ಪಡೆದು ಕೃಷಿ ಚಟುವಟಿಕೆಯಲ್ಲಿ ಪ್ರಗತಿ ಸಾಧಿಸಿ ಆರ್ಥಿಕ ಪ್ರಗತಿ ಹೊಂದಲು ಸಲಹೆ ನೀಡಿದರು.

### ಕರಿನಾಯಕನಹಳ್ಳಿ ಗ್ರಾಮದಲ್ಲಿ ಗಾಂಜಾ ವಶ

• ಉದಯವಾಹಿನಿ, ಮಾಲೂರು

ತಾಲ್ಲೂಕಿನ ಕರಿನಾಯಕನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಮನೆಗಳ ಮೇಲೆ ದಾಳಿ ನಡೆಸಿ ಮೂವರನ್ನು ಬಂಧಿಸಿ, 3 ಕೆ.ಜಿ 578 ಗ್ರಾಂ ಮತ್ತು 976 ಗ್ರಾಂ ಒಣಗಾಂಜಾ ವಶಕ್ಕೆ ಪಡೆಯಲಾಗಿದೆ.

ಆರೋಪಿಗಳಾದ ಬಿಹಾರದ ಶ್ಯಾಮಾನಂದ ಕುಮಾರ್, ಪ್ರೀತಮ್ ಕುಮಾರ್, ಗೌತಮ್ ಕುಮಾರ್ ವಿರುದ್ಧ ಎನ್‌ಡಿಪಿಎಸ್ ಕಾಯ್ದೆ–1985ರ ಪ್ರಕರಣ ದಾಖಲಿಸಲಾಗಿದೆ. ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

### ಮಂಡ್ಯ ತಾಲ್ಲೂಕಿನ ಕೆ.ಗೌಡಗೆರೆ ಬಳಿ ಬೋನಿಗೆ ಬಿದ್ದ ಚಿರತೆ

• ಉದಯವಾಹಿನಿ, ಮಂಡ್ಯ

ತಾಲ್ಲೂಕಿನ ಕೆರಗೋಡು ಹೋಬಳಿಯ ಕೆ.ಗೌಡಗೆರೆ ಗ್ರಾಮದ ಕಬ್ಬಿನ ಗದ್ದೆಯಲ್ಲಿ ಇಟ್ಟಿದ್ದ ಬೋನಿನಲ್ಲಿ ಭಾನುವಾರ ಮುಂಜಾನೆ ಗಂಡು ಚಿರತೆ ಸೆರೆಯಾಗಿದೆ. ಕೆ.ಗೌಡಗೆರೆ ಗ್ರಾಮದ ಪ್ರಕಾಶ್ ಎಂಬುವವರು ಕಬ್ಬಿನ ಗದ್ದೆಯಲ್ಲಿ ಚಿರತೆ ಸಂಚಾರ ಕಂಡುಬಂದಿದೆ ಎಂದು ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದರು. ಅರಣ್ಯ ಇಲಾಖೆ ಅಧಿಕಾರಿಗಳು ಕಬ್ಬಿನ ಗದ್ದೆಯಲ್ಲಿ ಬೋನು ಇಟ್ಟು ನಾಯಿಯನ್ನು ಕಟ್ಟಿದ್ದರು. ನಾಯಿ ತಿನ್ನುವ ಆಸೆಯಿಂದ ಬಂದ ಚಿರತೆ ಬೋನಿನಲ್ಲಿ ಸೆರೆಯಾಗಿದೆ.

ಚಿರತೆಗೆ ವೈದ್ಯಕೀಯ ತಪಾಸಣೆ ಮಾಡಿಸಿ, ಹಿರಿಯ ಅಧಿಕಾರಿಗಳ ನಿರ್ದೇಶನದಂತೆ ಬಂಡೀಪುರ ಅಥವಾ ನಾಗರಹೊಳೆ ಅರಣ್ಯ ಪ್ರದೇಶದಲ್ಲಿ ಚಿರತೆಯನ್ನು ಬಿಡಲಾಗುವುದು ಎಂದು ಇಲಾಖೆ ಸಿಬ್ಬಂದಿ ಮಾಹಿತಿ ನೀಡಿದ್ದಾರೆ. ಮಂಡ್ಯ ತಾಲ್ಲೂಕಿನ ಕಬ್ಬಿನ ಗದ್ದೆಗಳಲ್ಲಿ ಚಿರತೆಗಳು ಮರಿಗಳನ್ನು ಹಾಕುವುದು ಹಾಗೂ ನಾಯಿ, ಜಾನುವಾರುಗಳ ಮೇಲೆ ದಾಳಿ ನಡೆಸುವ ಪ್ರಕರಣಗಳು ಜಾಸ್ತಿಯಾಗಿವೆ. ರಾತ್ರಿ ವೇಳೆ ರೈತರು ಹೊಲ, ಗದ್ದೆ, ತೋಟಗಳ ಕಡೆ ಹೋಗಲು ಭಯಪಡುತ್ತಿದ್ದಾರೆ.

ಚಿರತೆ ಹಾವಳಿಯನ್ನು ನಿಯಂತ್ರಿಸಲು ಅರಣ್ಯ ಇಲಾಖೆ ಶಾಶ್ವತ ಪರಿಹಾರವನ್ನು ಕಂಡುಕೊಳ್ಳಬೇಕು. ಮಾನವ–ವನ್ಯಜೀವಿ ಸಂಘರ್ಷ ಪ್ರಕರಣಗಳನ್ನು ನಿಯಂತ್ರಿಸಬೇಕು ಎಂದು ಕೆ.ಗೌಡಗೆರೆ ಗ್ರಾಮಸ್ಥರು ಮತ್ತು ರೈತ ಮುಖಂಡರು ಆಗ್ರಹಿಸಿದ್ದಾರೆ.

ಅಂತರಾಳದಿಂದ... EDITORIAL

# ಕ್ಷೇತ್ರ ಪುನರ್‌ವಿಂಗಡಣೆ ಮಸೂದೆ: ಒಕ್ಕೂಟ ವ್ಯವಸ್ಥೆಯ ಬೆನ್ನಿಗೆ ಚೂರಿ

ಕ್ಷೇತ್ರ ಪುನರ್‌ವಿಂಗಡಣೆಯ ವಿರುದ್ಧ ತಮಿಳುನಾಡು ಅಂದೋಲನವನ್ನು ರೂಪಿಸುವ ಎಚ್ಚರಿಕೆಯನ್ನು ನೀಡಿದೆ ಮಾತ್ರವಲ್ಲ ಮುಖ್ಯಮಂತ್ರಿ ಸ್ಟಾಲಿನ್ ಅವರು ಮಸೂದೆಯ ಪ್ರತಿಯನ್ನು ಸುಟ್ಟು ಹಾಕಿದ್ದಾರೆ. ಕೇರಳ, ಕರ್ನಾಟಕ ಸೇರಿದಂತೆ ಈಗಾಗಲೇ ಹತ್ತು ಹಲವು ರಾಜ್ಯಗಳು ಇದರ ವಿರುದ್ಧ ತಮ್ಮ ವಿರೋಧವನ್ನು ವ್ಯಕ್ತಪಡಿಸುತ್ತಿವೆಯಾದರೂ, ಕೇಂದ್ರ ಸರಕಾರ ಅವುಗಳನ್ನು ಗಂಭೀರವಾಗಿ ತೆಗೆದುಕೊಂಡಿರಲಿಲ್ಲ. ಬದಲಿಗೆ, ಮಹಿಳಾ ಮೀಸಲಾತಿಯ ಹೆಗಲಿಗೆ ಕ್ಷೇತ್ರ ಪುನರ್‌ವಿಂಗಡಣೆಯ ಕೋವಿಯನ್ನಿಟ್ಟು ವಿರೋಧಿಗಳ ಮೇಲೆ ದಾಳಿ ನಡೆಸಲು ಹೊರಟಿತ್ತು.



ವಾಸ್ತವದಲ್ಲಿ ಮಹಿಳಾ ಮೀಸಲಾತಿಯ ಬಗ್ಗೆಯೂ ಅದು ಗಂಭೀರವಾಗಿಲ್ಲ ಎನ್ನುವುದು ಮೇಲ್ನೋಟಕ್ಕೆ ಗೊತ್ತಾಗಿ ಬಿಡುತ್ತದೆ. 2026–27ರ ಜನಗಣತಿಯ ಆಧಾರದಲ್ಲಿ ನಾರಿಶಕ್ತಿ ವಂದನ ಅಧಿನಿಯಮ ಜಾರಿಗೊಳಿಸುವುದಾಗಿ ಈ ಹಿಂದೆ ಹೇಳಿದ್ದ ಸರಕಾರ ಇದೀಗ ಕ್ಷೇತ್ರ ವಿಂಗಡಣೆಯ ಜೊತೆಗೆ ಅದನ್ನು ತಳುಕು ಹಾಕಿ, ಕ್ಷೇತ್ರ ಪುನರ್‌ವಿಂಗಡಣೆಯ ಉದ್ದೇಶವೇ ಮಹಿಳೆಯರ ಮೀಸಲಾತಿಯನ್ನು ಹೆಚ್ಚಿಸುವುದು ಎನ್ನುವ ಭ್ರಮೆಯನ್ನು ಹುಟ್ಟಿಸಿಹಾಕಿದೆ. ಸ್ವಾತಂತ್ರ್ಯೋತ್ತರ ಭಾರತ ಹೆಚ್ಚುತ್ತಿರುವ ಜನಸಂಖ್ಯೆಯನ್ನು ಅತಿದೊಡ್ಡ ಸವಾಲಾಗಿ ತೆಗೆದುಕೊಂಡಿತು. ಅನಕ್ಷರತೆ, ಬಡತನ ಈ ದೇಶದ ಜನಸಂಖ್ಯೆಯನ್ನು ಒಂದು ಸಮಸ್ಯೆಯಾಗಿ ಪರಿವರ್ತಿಸಿತ್ತು. ಈ ಸಂದರ್ಭದಲ್ಲಿ ಜನಸಂಖ್ಯೆಯನ್ನು ನಿಯಂತ್ರಿಸುವುದು ಮತ್ತು ಇರುವ ಜನಸಂಖ್ಯೆಗೆ ಶಿಕ್ಷಣವನ್ನು ನೀಡಿ ದೇಶದ ಸಂಪನ್ಮೂಲವಾಗಿ ಪರಿವರ್ತಿಸಲು ಹಲವು ಯೋಜನೆಗಳನ್ನು ನಮ್ಮ ಸರಕಾರ ರೂಪಿಸಿತು. ಅಂತಹ ಯೋಜನೆಗಳಲ್ಲಿ ಸಾಕ್ಷರತಾ ಆಂದೋಲನ, ಕುಟುಂಬ ಯೋಜನೆಗಳು ಸೇರಿವೆ. ಇವುಗಳಿಗೆ ದಕ್ಷಿಣ ರಾಜ್ಯಗಳು ಹೆಚ್ಚು ಸ್ಪಂದಿಸಿದವು. ಪರಿಣಾಮವಾಗಿ ಉತ್ತರ ಭಾರತಕ್ಕೆ ಹೋಲಿಸಿದರೆ ದಕ್ಷಿಣ ಭಾರತದಲ್ಲಿ ಜನಸಂಖ್ಯೆ ಭಾರೀ ಇಳಿಕೆಯಾಯಿತು ಮಾತ್ರವಲ್ಲ ಶೈಕ್ಷಣಿಕವಾಗಿ ಈ ರಾಜ್ಯಗಳು ಬಹಳಷ್ಟು ಸಾಧನೆಗಳನ್ನು ಮಾಡಿದವು. ಇಂದು ದಕ್ಷಿಣ ಭಾರತದ ರಾಜ್ಯಗಳು ಶಿಕ್ಷಣ, ಆರೋಗ್ಯ ಕೈಗಾರಿಕೆ, ಐಟಿ–ಬಿಟಿ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲೂ ಉತ್ತರ ಭಾರತಕ್ಕೆ ಮಾದರಿಯಾಗಿವೆ. ವಿಪರ್ಯಾಸವೆಂದರೆ ಬಿಹಾರ, ಉತ್ತರ ಪ್ರದೇಶದಂತಹ ಬೃಹತ್ ರಾಜ್ಯಗಳು ಭಾವನಾತ್ಮಕ ರಾಜಕೀಯಕ್ಕೆ ಬಲಿಯಾದವು. ಜಾತಿ, ಧರ್ಮಗಳೇ ಅಲ್ಲಿನ ರಾಜಕೀಯವನ್ನು ನಿಯಂತ್ರಿಸತೊಡಗಿದವು. ಕುಟುಂಬ ಯೋಜನೆ, ಶಿಕ್ಷಣ, ಆರೋಗ್ಯಕ್ಕೆ ಸಂಬಂಧಿಸಿದ ಬಹುತೇಕ ಯೋಜನೆಗಳು ಅಲ್ಲಿ ವಿಫಲವಾದವು. ಇಷ್ಟಾದರೂ ರಾಜಕೀಯವಾಗಿ ಉತ್ತರ ಭಾರತವೇ ಅತಿ ಹೆಚ್ಚು ಪ್ರಾತಿನಿಧ್ಯವನ್ನು ಪಡೆದಿವೆ. ದಕ್ಷಿಣ ಭಾರತೀಯರು ಅತಿ ಹೆಚ್ಚು ತೆರಿಗೆಯನ್ನು ಪಾವತಿಸಿದರೂ, ಅನುದಾನ ಬಿಡುಗಡೆಯ ಸಂದರ್ಭದಲ್ಲಿ ಉತ್ತರ ಭಾರತ ಹೆಚ್ಚು ಪಾಲನ್ನು ತನ್ನದಾಗಿಸಿಕೊಳ್ಳುತ್ತಿವೆ. ಉತ್ತರ ಭಾರತೀಯರಲ್ಲಿ ದಕ್ಷಿಣದ ಭಾಷೆ ಮತ್ತು ಸಂಸ್ಕೃತಿಯ ಬಗ್ಗೆ ಪೂರ್ವಾಗ್ರಹಗಳಿವೆ ಎಂಬ ಆತಂಕ ಮೊದಲಿನಿಂದಲೂ ಇದೆ. ಕ್ಷೇತ್ರ ಪುನರ್ ವಿಂಗಡಣೆಯ ಮೂಲಕ ದೇಶದ ಆಡಳಿತವನ್ನು ಸಂಪೂರ್ಣವಾಗಿ ಉತ್ತರ ಭಾರತದ ನಿಯಂತ್ರಣಕ್ಕೆ ಒಪ್ಪಿಸಲು ಕೇಂದ್ರ ಸರಕಾರ ನಡೆಸಿದ ಪ್ರಯತ್ನ ಸದ್ಯಕ್ಕಂತೂ ವಿಫಲವಾಗಿದೆ. ಒಂದು ವೇಳೆ ಈ ಮಸೂದೆ ಅಂಗೀಕಾರವಾಗಿದ್ದರೆ ದಕ್ಷಿಣದ ರಾಜಕೀಯ ಧ್ವನಿ ಅಡಗಿಹೋಗುತ್ತಿತ್ತು ಎಂಬ ವಿರೋಧ ಪಕ್ಷಗಳ ಆರೋಪಕ್ಕೆ ಈಗ ಲೋಕಸಭೆಯಲ್ಲಿ ಮಸೂದೆಗೆ ಎದುರಾದ ಸೋಲು ಹೊಸ ಆಯಾಮ ನೀಡಿದೆ. ಒಂದು ವೇಳೆ ಜಾರಿಗೊಂಡಿರುತ್ತಿದ್ದರೆ ದುರ್ಬಲಗೊಳ್ಳುತ್ತಿರುವ ಒಕ್ಕೂಟ ವ್ಯವಸ್ಥೆಯ ಮೇಲೆ ಇದು ಇನ್ನಷ್ಟು ಆಘಾತಗಳನ್ನು ನೀಡುವ ಅಪಾಯವಿತ್ತು. ಎಸ್‌ಐಆರ್ ಹೆಸರಿನಲ್ಲಿ ಕೋಟ್ಯಂತರ ಅರ್ಹ ಮತದಾರರನ್ನು ಪಟ್ಟಿಯಿಂದ ಹೊರಹಾಕಲಾಗಿದೆ ಎನ್ನುವ ಆರೋಪ ಕೇಳಿ ಬರುತ್ತಿದೆ. ಆದರೆ ಕ್ಷೇತ್ರ ಪುನರ್‌ವಿಂಗಡಣೆಯ ಪ್ರಕ್ರಿಯೆಯನ್ನು ಎಸ್‌ಐಆರ್ ಬಳಿಕದ ಮತದಾರರ ಪಟ್ಟಿಯ ಆಧಾರದಲ್ಲಿ ಮಾಡುವ ಬದಲಿಗೆ, ದಶಕದಷ್ಟು ಹಳೆಯದಾದ 2011ರ ಜನಗಣತಿಯ ಆಧಾರದಲ್ಲಿ ನಡೆಸಲು ಕೇಂದ್ರ ಮುಂದಾಗಿತ್ತು. ಹಳೇ ದತ್ತಾಂಶ ಬಳಸಿ ಹೊಸ ಕ್ಷೇತ್ರಗಳನ್ನು ಸೃಷ್ಟಿಸುವ ಸರಕಾರದ ಈ ಅವೈಜ್ಞಾನಿಕ ತರ್ಕವನ್ನು ಪ್ರತಿಪಕ್ಷಗಳು ಲೋಕಸಭೆಯಲ್ಲಿ ತೀವ್ರವಾಗಿ ಖಂಡಿಸಿದವು. ಈ ವಿಪರ್ಯಾಸಗಳ ನಡುವೆಯೇ, ಕುಟುಂಬ ಯೋಜನೆಯಲ್ಲಿ ವಿಫಲವಾದ ರಾಜ್ಯಗಳಿಗೆ 'ಉಡುಗೊರೆ' ನೀಡುವಂತೆ ಉತ್ತರ ಭಾರತದ ಕ್ಷೇತ್ರಗಳನ್ನು ಹೆಚ್ಚಿಸಲು ಕೇಂದ್ರ ಸರಕಾರ ಹವಣಿಸಿತ್ತು.

ಆ ಮೂಲಕ ದಕ್ಷಿಣದ ರಾಜ್ಯಗಳ ರಾಜಕೀಯ ಪ್ರಾತಿನಿಧ್ಯವನ್ನು ಕುಂದಿಸಿ, ಉತ್ತರ ಭಾರತದ ಹಿಡಿತವನ್ನು ಬಲಪಡಿಸುವ ಸರಕಾರದ ಈ ತಂತ್ರಕ್ಕೆ ಲೋಕಸಭೆಯಲ್ಲಿ ಈಗ ತಾತ್ಕಾಲಿಕ ತಡೆ ಬಿದ್ದಿದೆ. ದಕ್ಷಿಣ ಭಾರತಕ್ಕೆ ಅನ್ಯಾಯವಾಗುವುದಿಲ್ಲ ಎಂದು ಅಮಿತ್ ಶಾ ಅವರು ಭರವಸೆ ನೀಡಿದ್ದರಾದರೂ, ತಜ್ಞರ ಅಭಿಪ್ರಾಯದಂತೆ ಮರುಹಂಚಿಕೆಯ ನಂತರದ ಸ್ಥಾನಗಳನ್ನು ಗಮನಿಸಿದಾಗ ಕರ್ನಾಟಕ ಸೇರಿದಂತೆ ದಕ್ಷಿಣದ ರಾಜ್ಯಗಳಿಗೆ ಭಾರೀ ಅನ್ಯಾಯವಾಗುತ್ತಿರುವುದು ಸ್ಪಷ್ಟವಾಗಿತ್ತು. ಉತ್ತರ ಪ್ರದೇಶದಂತಹ ರಾಜ್ಯಗಳ ಕ್ಷೇತ್ರಗಳು ಗಣನೀಯವಾಗಿ ಹೆಚ್ಚಳವಾಗುವ ಮೂಲಕ ದಕ್ಷಿಣದ ರಾಜಕೀಯ ಪ್ರಭಾವ ಕುಸಿಯುವ ಭೀತಿಯೇ ಈ ಮಸೂದೆಯ ಸೋಲಿಗೆ ಪ್ರಮುಖ ಕಾರಣವಾಯಿತು.

ಸರಕಾರ ದುರುದ್ದೇಶಪೂರ್ವಕವಾಗಿ ಮಹಿಳಾ ಮೀಸಲಾತಿಯನ್ನು ಕ್ಷೇತ್ರ ಪುನರ್‌ವಿಂಗಡಣೆಗೆ ತಳುಕು ಹಾಕಿದೆ. ಇದೇ ಹೊತ್ತಿಗೆ ಮಹಿಳಾ ಮೀಸಲಾತಿಯಲ್ಲಿ ಹಿಂದುಳಿದ ವರ್ಗ, ಅಲ್ಪಸಂಖ್ಯಾತ ಮಹಿಳೆಯರಿಗೆ ಮೀಸಲಾತಿ ನೀಡುವ ವಿಷಯದಲ್ಲಿ ಸರಕಾರ ಮೌನವಾಗಿದೆ. ಮಹಿಳಾ ಮೀಸಲಾತಿಯಿಂದ ಸಂಸತ್‌ನಲ್ಲಿ ಮಹಿಳೆಯರ ಪ್ರಾಬಲ್ಯ ಹೆಚ್ಚುತ್ತದೆ ಎನ್ನುವುದಕ್ಕಿಂತಲೂ ಮೇಲ್ಜಾತಿಯ ಜನರ ಪ್ರಾಬಲ್ಯ ಇನ್ನಷ್ಟು ಹೆಚ್ಚುತ್ತದೆ ಎನ್ನುವುದು ದುರ್ಬಲವರ್ಗದ ಜನರ ಆತಂಕವಾಗಿದೆ. ದಲಿತರು, ಹಿಂದುಳಿದವರ್ಗ, ಅಲ್ಪಸಂಖ್ಯಾತರಲ್ಲಿ ಲೋಕಸಭಾಚುನಾವಣೆಗೆ ಸ್ಪರ್ಧಿಸುವ ಅರ್ಹ ಮಹಿಳಾ ಅಭ್ಯರ್ಥಿಗಳ ಸಂಖ್ಯೆಯನ್ನು ನೋಡಿದರೆ ನಿರಾಶೆ ಕಾಡುತ್ತದೆ. ಅತಿ ಹೆಚ್ಚು ಸಾಕ್ಷರರು, ರಾಜಕೀಯವಾಗಿ, ಆರ್ಥಿಕವಾಗಿ ಸಬಲರಾಗಿರುವ ಮಹಿಳೆಯರು ಮೇಲ್ವರ್ಗಕ್ಕೆ ಸೇರಿದವರೇ ಆಗಿದ್ದಾರೆ. ಪರಿಣಾಮವಾಗಿ ಈ ಮೀಸಲಾತಿಯ ಸಕಲ ಲಾಭವನ್ನು ಮೇಲ್ವರ್ಗದ ಮಹಿಳೆಯರು ತನ್ನದಾಗಿಸಿಕೊಳ್ಳುತ್ತಾರೆ.

## ರಾಮಾಯಣ



ಅಡ್ಡಿಗಳನ್ನು ಪರಿಹರಿಸಿಕೊಂಡು ಹನುಮಂತನು ಲಂಕೆಯನ್ನು ಪ್ರವೇಶಿಸಿದುದು

• ಹಿಂದಿನ ಸಂಚಿಕೆಯಿಂದ

### ಸುಂದರಕಾಂಡ

ಯಾವಾವ ಪ್ರದೇಶದಲ್ಲಿ ಇವನ ದೇಹದ ನೆರಳು ಬೀಳುವುದೋ ಅಲ್ಲೆಲ್ಲ ಸಮುದ್ರವು ಬಿರುಗಾಳಿಯ ಶಬ್ದದಿಂದ ಕೂಡಿ ಕ್ಷೋಭೆಗೊಂಡು ತಲ್ಲಣಭಾವನನ್ನು ತೋರ್ಪಡಿಸುತ್ತಿತ್ತು ಮೇರುಮಂದರಗಳಂತೆ ಏಳುವ ಹೆದ್ದೆರೆಗಳನ್ನು ಅಡಗಿಸಿ ಸಮುದ್ರವನ್ನು ಹೀರಲು ಬರುವ ಮಾರುತಿಯನ್ನು ನೋಡಿದ ಮೊಸಳೆಗಳು ಆಮೆಗಳು ವೇಗದಿಂದ ತಳವನ್ನು ಸೇರುತ್ತಿರಲು, ಕಪಿವೀರನು ನಿಶ್ಶಂಕೆಯಿಂದ ಹಾರುತ್ತಿದ್ದ. ಹೀಗೆ, ಸಮುದ್ರದಲ್ಲಿ ಹತ್ತು ಯೋಜನ ಅಗಲ ಮೂವತ್ತು ಯೋಜನ ಉದ್ದ ನೆರಳು ಬೀಳಲು ತತ್ತರಗೊಂಡ ನೀರಾನೆಗಳೂ ಮೊಸಳೆಗಳೂ ಒಂದನ್ನೊಂದು ತುಳಿಯುತ್ತ ಪಾತಾಳದತ್ತ ನುಗ್ಗಿ, ಸಮುದ್ರದ ಮೇಲುಭಾಗವು ನಿರ್ಜಂತುಕವಾಗಿ ತಲೆಯೆತ್ತಲಾರದ ದೋಣಿಯಂತೆ ಕಾಣಿಸಿತು. ತನ್ನ ಪಾದಾಘಾತದಿಂದ ಮಹೇಂದ್ರಶೈಲವನ್ನು ಭೂಮಿಯಲ್ಲಿ ಹುದುಗಿಸಿ, ಆಗಸದಲ್ಲಿನ ಗ್ರಹಗಳೆಲ್ಲವೂ ಚೆದುರಿ ಗದಬದಗೊಳ್ಳುವಂತೆ ಮಾಡಿ, ಸೂರ್ಯಚಂದ್ರರು ಮರೆಯಾಗುವಂತೆಗೈದು, ರಾಮಕಾರ್ಯಾರ್ಥವಾಗಿ ಹೋಗುವ ಕಪಿಯನ್ನು ದೇವಗಂಧರ್ವಸಂದೋಹವು ಮುದದಿಂದ ನೋಡುತ್ತ ಹೂಮಳೆ ಕರೆದು ಮರುತ್ತುತನ ಕೀರ್ತಿಯನ್ನು ಹಾಡಿಹೊಗಳಿದರು.

ಹೀಗೆ ಗಗನಮಾರ್ಗವನ್ನು ಹಿಡಿದು ಹೋಗುತ್ತಿದ್ದ ಪ್ಲವಗಶ್ರೇಷ್ಠನನ್ನು ಸಮುದರಾಜನು ಸಂತಸಪಟ್ಟು, ಹಿಂದಿನ ಸೂರ್ಯಕುಲದ ರಾಜರುಗಳ ಬಾಹುಬಲದಿಂದ ನಾನು ವೃದ್ಧಿಹೊಂದಿದೆ, ಈಗ ರಘುಕುಲಕಾಂತನ ದೂತನು ಬರುತ್ತಿದ್ದಾನೆ, ಅವನಿಗೆ ಸಂತಸವಾಗುವಂತೆ ಸಹಾಯ ಮಾಡುತ್ತೇನೆ'ಂದು ಮೈನಾಕನನ್ನು ಕರೆದು, ''ಗಿರಿರಾಜನೇ ಕೇಳು, ಸಗರವಂಶಸಂಭೂತನಾದ ಶ್ರೀರಾಮನ ಕಾರ್ಯಕ್ಕೋಸುಗ ಮರುತ್ತುತನು ಬರುತ್ತಿದ್ದಾನೆ; ಈತನಿಗೆ ಸಹಾಯ ಮಾಡಿ ಕೃತಕೃತ್ಯನಾಗುತ್ತೇನೆ ಎಂದು ಯೋಚಿಸಿದ ಮೇಲೆ, ಸೂರ್ಯಮಂಡಲದೆಡೆಗೆ ಹೋಗಲು ನೀನು ಸಮರ್ಥ, ಹಾಗಾಗಿ ನಿನ್ನ ಸ್ನೇಹದಿಂದ ನನ್ನ ಮನೋರಥ ನೆರವೇರುವುದು ಖಂಡಿತ, ಕೃಪೆ ಮಾಡಬೇಕು. ರುಚಿಕರವಾದ ಕಂದಮೂಲಪುಷ್ಪಗಳನ್ನೂ ಜೇನನ್ನೂ ಮರಗಳ ತಂಗಾಳಿಯನ್ನೂ ಸುಂದರ ಬಳ್ಳಿವನೆಗಳನ್ನೂ ದಿವ್ಯವಾದ ಸರೋವರಗಳನ್ನೂ ಹೊತ್ತು ನಿಂತುಕೊಂಡು ಕಪಿವೀರನು ಸ್ವಲ್ಪಕಾಲ ವಿಶ್ರಮಿಸಿಕೊಂಡು ಮುದದಿಂದ ಮುಂದುವರಿಯುವಂತೆ ನೀನು ಮಾಡಬೇಕು'' ಎಂದು ಕೇಳಿಕೊಂಡ. ಆಗ ಮೈನಾಕನು, ''ರಾಮಕಾರ್ಯಕ್ಕೆ ಹೋಗುತ್ತಿರುವ ಕಪಿವರನನ್ನು ಸತ್ಕರಿಸಲು ಹಿಂದೆಮುಂದೇಕೆ ನೋಡಬೇಕು? ಆಂಜನೇಯನು ನನಗೂ ತುಂಬ ಪ್ರಿಯಕರನಾದವನು, ಅವನಿಗೆ ಒಂದಿಷ್ಟು ಉಪಕಾರ ಮಾಡಿ ನಾನೂ ಧನ್ಯನಾಗುತ್ತೇನೆ'' ಎಂದ. ಆನಂತರ ಸೂರ್ಯನನ್ನು ಕಾಣಲು ಹೊರಟನೋ ಎಂಬಂತೆ ಮಹಾದೇಹದಿಂದ ಅಂಬರವನ್ನು ಚುಂಬಿಸುವಂತೆ ಸಮುದ್ರದ ಮಧ್ಯೆ ಬೆಳೆದು, ಊಹಾತೀತ ವೇಗದಿಂದ ಹಾರಿ ಬರುತ್ತಿರುವ ಮರುತಸುತನ ಮುಂದುಗಡೆ ಮೇನಕೆಯ ಮಗನು ನಿಂತು ವಿನಯಪೂರ್ವಕವಾಗಿ, ''ವೀರಾಗ್ರೇಸರನೇ, ನೀನು ದಶರಥಾತ್ಮಜನ ಕೆಲಸಕ್ಕೆಂದು ಹೋಗುತ್ತಿರುವೆ,

ಮುಂದುವರಿಯುವುದು...



ಅಂತರಂಗದ ಮಾತು

ಡಾ.ಸುಧಾಕರ.ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು

**ನಾಗರಿಕತೆಯ ವಿಕಾಸದ ಹಾದಿಯಲ್ಲಿ ಮನುಷ್ಯ ತಂತ್ರಜ್ಞಾನದ ಶಿಖರಕ್ಕೇರಿದ್ದಾನೆ. ಬೆರಳ ತುದಿಯ ಸ್ಪರ್ಶಕ್ಕೆ ನೀರನ್ನು ಮಂಜುಗಡ್ಡೆಯಾಗಿಸುವ ಸ್ಮಾರ್ಟ್ ಫ್ರಿಜ್‌ಗಳು ಇಂದು ಅಡುಗೆಮನೆಯ ಅವಿಭಾಜ್ಯ ಅಂಗ. ಆದರೆ, ಸುಡು ಬೇಸಿಗೆಯ ದಣಿವಾರಿಸಲು ಇಂದಿಗೂ ಜನಸಾಮಾನ್ಯರ ಆಪ್ತಮಿತ್ರನಾಗಿರುವುದು ಮಣ್ಣಿನ ಮಡಿಕೆ. ಇದು ಕೇವಲ ಭಾವನಾತ್ಮಕ ಆಯ್ಕೆಯಲ್ಲ; ಬದಲಾಗಿ ಮಣ್ಣಿನ ಕಣಕಣದಲ್ಲೂ ಅಡಗಿರುವ ಅದ್ಭುತ ವೈಜ್ಞಾನಿಕ ಸತ್ಯ ಮತ್ತು ಸಾಂಪ್ರದಾಯಿಕ ವೈಭವದ ಸಂಗಮ.**

# ಸ್ಮಾರ್ಟ್ ಫ್ರಿಜ್‌ಗಳ ಕಾಲದಲ್ಲೂ ಸೋಲದ ಮಣ್ಣಿನ ಮಡಿಕೆ..!

ಮಣ್ಣಿನ ಮಡಿಕೆಯು ನೀರನ್ನು ತಂಪಾಗಿಸುವ ಪ್ರಕ್ರಿಯೆಯು ಪ್ರಕೃತಿಯ ಒಂದು ಅನುಪಮ ಇಂಜಿನಿಯರಿಂಗ್. ಮಡಿಕೆಯ ಗೋಡೆಗಳಲ್ಲಿರುವ ಅಸಂಖ್ಯಾತ ಸೂಕ್ಷ್ಮ ರಂಧ್ರಗಳ ಮೂಲಕ ನೀರು ನಿರಂತರವಾಗಿ ಜಿನುಗುತ್ತಿರುತ್ತದೆ. ಹೊರಗಿನ ಉಷ್ಣತೆಯ ಪ್ರಭಾವದಿಂದ ಈ ಜಿನುಗಿದ ನೀರು ಆವಿಯಾದಾಗ, ಆ ಕ್ರಿಯೆಗೆ ಬೇಕಾದ ಶಾಖವನ್ನು ಮಡಿಕೆಯ ಒಳಗಿರುವ ನೀರು ಬಿಟ್ಟುಕೊಡುತ್ತದೆ. ಈ ಭೌತಿಕ ಪ್ರಕ್ರಿಯೆಯನ್ನು ವಿಜ್ಞಾನವು ಬಾಷ್ಪೀಕರಣದ ತಂಪು ಎಂದು ಕರೆಯುತ್ತದೆ. ಇದರಿಂದ ನೀರು ಅತಿಯಾಗಿ ಅಲ್ಲದಿದ್ದರೂ, ದೇಹದ ತಾಪಮಾನಕ್ಕೆ ಪೂರಕವಾಗುವಷ್ಟು ಹಿತವಾಗಿ ತಂಪಾಗುತ್ತದೆ.

ಆಧುನಿಕ ಆಹಾರ ಪದ್ಧತಿಯಿಂದಾಗಿ ನಮ್ಮ ದೇಹದಲ್ಲಿ ಆಮ್ಲೀಯತೆ ಹೆಚ್ಚುತ್ತಿರುತ್ತದೆ. ಮಣ್ಣು ಮೂಲತಃ ಕ್ಷಾರೀಯ ಸ್ವಭಾವವನ್ನು ಹೊಂದಿದೆ.

ಮಡಿಕೆಯಲ್ಲಿ ಇಟ್ಟ ನೀರು ಮಣ್ಣಿನ ಗುಣವನ್ನು ಹೀರಿಕೊಳ್ಳುವುದರಿಂದ, ಅದು ದೇಹದ ಪಿ.ಎಚ್ ಮಟ್ಟವನ್ನು ಸಮತೋಲನದಲ್ಲಿಡಲು ಸಹಕರಿಸುತ್ತದೆ. ಗ್ಯಾಸ್ಟ್ರಿಕ್ ಅಥವಾ ಎದೆಯುರಿಯಂತಹ ಸಮಸ್ಯೆಗಳಿಗೆ ಈ ಮಡಿಕೆಯ ನೀರು ನೈಸರ್ಗಿಕ ಔಷಧಿಯಂತೆ ಕೆಲಸ ಮಾಡುತ್ತದೆ. ಪ್ಲಾಸ್ಟಿಕ್ ಬಾಟಲಿಗಳ ರಾಸಾಯನಿಕಯುಕ್ತ ನೀರಿಗಿಂತ ಇದು ಸಹಸ್ರ ಪಟ್ಟು ಮಿಗಿಲು.

ರೆಫ್ರಿಜರೇಟರ್‌ನ ಅತಿ ತಂಪಾದ ನೀರು ಗಂಟಲಿನ ಕೋಶಗಳ ಮೇಲೆ ನಕಾರಾತ್ಮಕ ಪರಿಣಾಮ ಬೀರಿ ಕೆಮ್ಮು, ನೆಗಡಿ ಅಥವಾ ಸೈನಸ್ ಸಮಸ್ಯೆಯನ್ನು ಉಲ್ಬಣಗೊಳಿಸಬಹುದು. ಆದರೆ ಮಣ್ಣಿನ ಮಡಿಕೆಯ ನೀರು ಗಂಟಲಿಗೆ ಹಿತಕರವಾದ ತಾಪಮಾನವನ್ನು ಕಾಯ್ದುಕೊಳ್ಳುತ್ತದೆ. ಅಲ್ಲದೆ, ಇದು ಯಾವುದೇ ಹಾನಿಕಾರಕ ಅನಿಲಗಳ ಸಂಪರ್ಕವಿಲ್ಲದೆ ಶುದ್ಧವಾಗಿರುವುದರಿಂದ ದೇಹದ ಚಯಾಪಚಯ ಕ್ರಿಯೆಯನ್ನು ವೃದ್ಧಿಸುತ್ತದೆ.

ಮಡಿಕೆಯು ಅಮೃತದಂತಹ ನೀರನ್ನು ನೀಡಿದರೂ, ಅದರ ನಿರ್ವಹಣೆಯಲ್ಲಿ ಎಚ್ಚರ ಅಗತ್ಯ. ಮಡಿಕೆಯ ಸೂಕ್ಷ್ಮ ರಂಧ್ರಗಳು ಗಾಳಿಯಲ್ಲಿನ ಧೂಳಿನಿಂದ ಮುಚ್ಚಿಹೋದರೆ ತಂಪಾಗಿಸುವ ಪ್ರಕ್ರಿಯೆ ಕುಂಠಿತಗೊಳ್ಳುತ್ತದೆ. ಅಲ್ಲದೆ, ಸರಿಯಾಗಿ ತೊಳೆಯದಿದ್ದರೆ ಬ್ಯಾಕ್ಟೀರಿಯಾಗಳು ಅಥವಾ ಪಾಚಿಗಳು ಬೆಳೆಯುವ ಸಂಭವವಿರುತ್ತದೆ. ಮಣ್ಣಿನ ಮಡಿಕೆಗೆ ನೀರು ಹಾಕುವ ಮುನ್ನ ನೀರು ಕಲ್ಮಶರಹಿತವಾಗಿದೆಯೇ ಎಂದು ಖಚಿತಪಡಿಸಿಕೊಳ್ಳುವುದು ಅನಿವಾರ್ಯ, ಏಕೆಂದರೆ ಮಣ್ಣು ಕೇವಲ ತಂಪು ಮಾಡಬಲ್ಲದೇ ಹೊರತು ರಾಸಾಯನಿಕಗಳನ್ನು ಶೋಧಿಸಲಾರದು.

ಪ್ರಕೃತಿಯ ಮಡಿಲಲ್ಲಿ ಅಡಗಿರುವ ಮಣ್ಣಿನ ಮಡಿಕೆ ಕೇವಲ ಬಡವರ ಫ್ರಿಜ್ ಅಲ್ಲ; ಅದು ನಮ್ಮ ಆರೋಗ್ಯದ ಸಂರಕ್ಷಕ. ಆಧುನಿಕ ಸ್ಮಾರ್ಟ್ ಸಾಧನಗಳ ಮಧ್ಯೆಯೂ ಈ ಮಣ್ಣಿನ ಮಡಿಲು ಅಜೇಯವಾಗಿ ಉಳಿದಿರುವುದು ಅದರ ವೈಜ್ಞಾನಿಕ ಶ್ರೇಷ್ಠತೆಯಿಂದಲೇ. ಈ ಬೇಸಿಗೆಯಲ್ಲಿ ಕೃತಕತೆಯ ಮೊರೆ ಹೋಗುವ ಮುನ್ನ, ನಮ್ಮ ಮಣ್ಣಿನ ಗುಣಕ್ಕೆ ಶರಣಾಗುವುದು ಶ್ರೇಯಸ್ಕರ.





# ಕಾಯಕವೇ ಕೈಲಾಸವೆಂದು ಸಾರಿದ ವಿಶ್ವ ಗುರು ಬಸವಣ್ಣ

ಬಸವಣ್ಣನವರನ್ನು (1131-1196) ಬಸವೇಶ್ವರ ಮತ್ತು ಬಸವ ಎಂದೂ ಕರೆಯುತ್ತಾರೆ, ಒಬ್ಬ ಭಾರತೀಯ ತತ್ವಜ್ಞಾನಿ, ಕವಿ, ಶಿವ-ಕೇಂದ್ರಿತ ಭಕ್ತಿ ಚಳುವಳಿಯಲ್ಲಿ ಲಿಂಗಾಯತ ಸಮಾಜ ಸುಧಾರಕ ಮತ್ತು ಕಲ್ಯಾಣಿ ಚಾಲುಕ್/ಕಲಚೂರಿ ಸಾಮ್ರಾಜ್ಯದ ಆಳ್ವಿಕೆಯಲ್ಲಿ ಹಿಂದೂ ಶೈವ ಸಮಾಜ ಸುಧಾರಕ. ಬಸವಣ್ಣನವರು ತಮ್ಮ ಕಾವ್ಯದ ಮೂಲಕ ಸಾಮಾಜಿಕ ಜಾಗೃತಿಯನ್ನು ಹರಡಿದರು, ಇದನ್ನು ವಚನಗಳು ಎಂದು ಕರೆಯಲಾಗುತ್ತದೆ. ಅವರು ಲಿಂಗ, ಸಾಮಾಜಿಕ ತಾರತಮ್ಯ, ಮೂಢನಂಬಿಕೆಯ ಆಚರಣೆಗಳನ್ನು ತಿರಸ್ಕರಿಸಿದರು. ಆದರೆ ಲಿಂಗದ ಚಿತ್ರವಿರುವ ಇಷ್ಟಲಿಂಗ ಹಾರವನ್ನು ಪರಿಚಯಿಸಿದರು, ಪ್ರತಿಯೊಬ್ಬ ವ್ಯಕ್ತಿಗೆ ಅವರ ಜನ್ಮವನ್ನು ಲೆಕ್ಕಿಸದೆ, ಒಬ್ಬರ ಭಕ್ತಿ ಶಿವನಿಗೆ ನಿರಂತರ ಜ್ಞಾಪನೆಯಾಗಲು ಅಹಿಂಸೆಯು ಪ್ರಬಲ ಪ್ರವರ್ತಕವಾಗಿದೆ. ಅವರು ಮಾನವ ಮತ್ತು ಪ್ರಾಣಿ ಬಲಿಗಳನ್ನು ಖಂಡಿಸಿದರು, ಅವರ ರಾಜ್ಯ ಮಂತ್ರಿಯಾಗಿ ಅನುಭವ ಮಂಟಪದಂತಹ ಹೊಸ ಸಾರ್ವಜನಿಕ ಸಂಸ್ಥೆಗಳನ್ನು ಪರಿಚಯಿಸಿದರು, (ಆಧ್ಯಾತ್ಮಿಕ ಅನುಭವದ ಸಭಾಂಗಣ) ಇದು ಆಧ್ಯಾತ್ಮಿಕ ಮತ್ತು ಪ್ರಾಪಂಚಿಕ ಪ್ರಶ್ನೆಗಳನ್ನು ಚರ್ಚಿಸಲು ಎಲ್ಲಾ ಸಾಮಾಜಿಕ-ಆರ್ಥಿಕ ಹಿನ್ನೆಲೆಯ ಪುರುಷರು ಮತ್ತು ಮಹಿಳೆಯರನ್ನು ಸ್ವಾಗತಿಸಿತು.

ಹಲವು ಸಾಂಪ್ರದಾಯಿಕ ದಂತಕಥೆಗಳು ಮತ್ತು ಹಗಿಯೋಗ್ರಾಫಿಕ್ ಪಠ್ಯಗಳು ಬಸವಣ್ಣನನ್ನು ಲಿಂಗಾಯತ ಸ್ಥಾಪಕ ಎಂದು ಹೇಳುತ್ತವೆ. ಆದಾಗ್ಯೂ ಕಲಚೂರಿ ಶಾಸನಗಳಂತಹ ಐತಿಹಾಸಿಕ ಪುರಾವೆಗಳನ್ನು ಅವಲಂಬಿಸಿರುವ ಆಧುನಿಕ ಪಾಂಡಿತ್ಯವು ಈಗಾಗಲೇ ಅಸ್ತಿತ್ವದಲ್ಲಿರುವ ಸಂಪ್ರದಾಯವನ್ನು ಪುನರುಜ್ಜೀವನಗೊಳಿಸಿ ಪರಿಷ್ಕರಿಸಿದ ಮತ್ತು ಶಕ್ತಿ ತುಂಬಿದ ಕವಿ ತತ್ವಜ್ಞಾನಿ ಬಸವಣ್ಣ ಎಂದು ಹೇಳುತ್ತದೆ.

ಕನ್ನಡ ಕವಿ ಹರಿಹರ (1180) ರ ಬಸವರಾಜದೇವರ ರಗಳೆ ಸಮಾಜ ಸುಧಾರಕನ ಜೀವನದ ಬಗ್ಗೆ ಲಭ್ಯವಿರುವ ಆರಂಭಿಕ ದಾಖಲೆಯಾಗಿದೆ, ಮತ್ತು ಲೇಖಕರ ಕಾರಣದಿಂದಾಗಿ ಇದನ್ನು ಪ್ರಮುಖವೆಂದು ಪರಿಗಣಿಸಲಾಗಿದೆ. ಬಸವಣ್ಣನ ಜೀವನ ಮತ್ತು ವಿಚಾರಗಳ ಸಂಪೂರ್ಣ ಖಾತೆಯನ್ನು 13 ನೇ ಶತಮಾನದ ಪವಿತ್ರ ತೆಲುಗು ಪಠ್ಯದಲ್ಲಿ ವಿವರಿಸಲಾಗಿದೆ. ಬಸವಣ್ಣನ ಸಾಹಿತ್ಯ ಕೃತಿಗಳು ಕನ್ನಡ ಭಾಷೆಯಲ್ಲಿ ವಚನ ಸಾಹಿತ್ಯವನ್ನು ಒಳಗೊಂಡಿವೆ. ಅವರನ್ನು ಭಕ್ತಿಭಂಡಾರಿ ಮತ್ತು ಬಸವಣ್ಣ ಎಂದೂ ಕರೆಯಲಾಗುತ್ತದೆ.

## ಬಸವಣ್ಣನವರ ಬಗೆಗೆ ಕೆಲವು ಆಸಕ್ತಿದಾಯಕ ಸಂಗತಿಗಳು

- ಅನುಭವ ಮಂಟಪದ ಮೂಲಕ ಈಗಿನ ಸಂಸತ್ತಿನ ಕಲ್ಪನೆಯನ್ನು 12ನೇ ಶತಮಾನದಲ್ಲೇ ನೀಡಿದ ಮಹಾಪುರುಷ.
- ಬಸವಣ್ಣನವರು ಸ್ಥಳೀಯ ಭಾಷೆಯಲ್ಲಿ ಕವನ ರಚಿಸಿದರು ಮತ್ತು ಜನಸಾಮಾನ್ಯರಿಗೆ ತಮ್ಮ ಸಂದೇಶವನ್ನು ಹರಡಿದರು. ಅವರ ಬೋಧನೆಗಳು ಮತ್ತು ಶ್ಲೋಕಗಳಾದ ಕಾಯಕವೇ ಕೈಲಾಸ (ಕೆಲಸವು ಕೈಲಾಸಕ್ಕೆ ಮಾರ್ಗವಾಗಿದೆ, ಅಥವಾ ಕೆಲಸವೇ ಪೂಜೆ) ಜನಪ್ರಿಯವಾಯಿತು.
- ಬಸವಣ್ಣನವರ ತತ್ತ್ವಶಾಸ್ತ್ರವು ಒಬ್ಬರ ಸ್ವಂತ ದೇಹ ಮತ್ತು ಆತ್ಮವನ್ನು ದೇವಾಲಯವಾಗಿ ಪರಿಗಣಿಸುವುದರ ಸುತ್ತ ಸುತ್ತುತ್ತದೆ, ದೇವಾಲಯವನ್ನು ಮಾಡುವ ಬದಲು, ನಮ್ಮ ದೇಹವೇ ದೇವಾಲಯ ಎಂದು ಸೂಚಿಸುತ್ತಾರೆ.
- ಜಾತಿ ಬೇಧವಿಲ್ಲದೆ ಪ್ರತಿಯೊಬ್ಬ ಮನುಷ್ಯನೂ ಸಮಾನ ಎಂದು ಬಸವ ಬೋಧಿಸಿದ್ದು, ಎಲ್ಲ ರೀತಿಯ ದುಡಿಮೆಯೂ ಅಷ್ಟೇ ಮುಖ್ಯ ಎಂದು ತಿಳಿಸಿಕೊಟ್ಟರು.
- ಬಸವಣ್ಣನವರ ಲಿಂಗಾಯತ ಧರ್ಮವು ಶೈವ ಧರ್ಮವನ್ನು ಆಧರಿಸಿದ ಹಿಂದೂ ಪಂಗಡವಾಗಿದೆ ಲಿಂಗಾಯತವಾದವು ಇಷ್ಟಲಿಂಗ ಪೂಜೆಯ ವಿಶಿಷ್ಟ ಆಚರಣೆಗೆ ಹೆಸರುವಾಸಿಯಾಗಿದೆ.

### ಸ್ಮಾರಕಗಳು ಮತ್ತು ಗುರುತಿಸುವಿಕೆ:-

- ಅಂದಿನ ಭಾರತದ ರಾಷ್ಟ್ರಪತಿ ಅಬ್ದುಲ್ ಕಲಾಂ ಅವರು 28 ಏಪ್ರಿಲ್ 2003 ರಂದು ಭಾರತದ ಸಂಸತ್ತಿನಲ್ಲಿ ಬಸವೇಶ್ವರರ ಪ್ರತಿಮೆಯನ್ನು ಉದ್ಘಾಟಿಸಿದರು.
- ಬಸವೇಶ್ವರರ ಗೌರವಾರ್ಥವಾಗಿ ಅವರ ಸಮಾಜ ಸುಧಾರಣೆಗಳನ್ನು ಗುರುತಿಸಿ ಸ್ಮರಣಾರ್ಥ ನಾಣ್ಯವನ್ನು ಮುದ್ರಿಸಿದ ಮೊದಲ ಕನ್ನಡಿಗ. ಭಾರತದ ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಅವರು ನಾಣ್ಯಗಳನ್ನು ಬಿಡುಗಡೆ ಮಾಡಲು ಕರ್ನಾಟಕದ ರಾಜಧಾನಿ ಬೆಂಗಳೂರಿಗೆ ಬಂದಿದ್ದರು.
- 14 ನವೆಂಬರ್ 2015 ರಂದು ಭಾರತದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಲಂಡನ್‌ನ ಲ್ಯಾಂಬೆತ್‌ನಲ್ಲಿ ಥೇಮ್ಸ್ ನದಿಯ ದಂಡೆಯ ಉದ್ದಕ್ಕೂ ಬಸವೇಶ್ವರ ಪ್ರತಿಮೆಯನ್ನು ಉದ್ಘಾಟಿಸಿದರು.
- ಬಸವ ಧರ್ಮ ಪೀಠವು ಬಸವಕಲ್ಯಾಣದಲ್ಲಿ 108 ಅಡಿ (33 ಮೀ) ಎತ್ತರದ ಬಸವನ ಪ್ರತಿಮೆಯನ್ನು ನಿರ್ಮಿಸಿದೆ.

### ಅಂಚೆ ಚೀಟಿ ಮತ್ತು ನಾಣ್ಯ

- 11ನೇ ಮೇ 1967 ರಂದು ಗುರು ಬಸವಣ್ಣವರ 800 ನೇಯ ಲಿಂಗೈಕ್ಯ ದಿನಾಚರಣೆ ನಿಮಿತ್ತ ಭಾರತ ಸರಕಾರದ ಅಂಚೆ ಇಲಾಖೆಯು 15 ಪೈಸೆ ಮುಖ ಬೆಲೆಯುಳ್ಳ ಅಂಚೆ ಚೀಟಿಯನ್ನು ಮುದ್ರಿಸಿತು.
- 1997 ರಲ್ಲಿ 2 ರೂಪಾಯಿ ಮುಖ ಬೆಲೆಯುಳ್ಳ ಅಂಚೆ ಚೀಟಿಯನ್ನು ಅಂಚೆ ಇಲಾಖೆಯು ಮತ್ತೆ ಮುದ್ರಿಸಿತು.
- ಗುರು ಬಸವಣ್ಣವರ ಭಾವಚಿತ್ರವುಳ್ಳ 5 ರೂಪಾಯಿ ಮತ್ತು 100 ರೂಪಾಯಿ ನಾಣ್ಯಗಳನ್ನು ಡಾ. ಮನಮೋಹನ ಸಿಂಗ್ ಅವರು ಬೆಂಗಳೂರಿನಲ್ಲಿ ಬಿಡುಗಡೆಗೊಳಿಸಿದರು.
- ಬಸವಣ್ಣನವರು ನಾಣ್ಯದ ಮೇಲೆ ಪ್ರಕಟಿಸಲ್ಪಟ್ಟವರಲ್ಲಿ ಪ್ರಥಮ ಕನ್ನಡಿಗರಾಗಿದ್ದಾರೆ.
- ಗುರು ಬಸವಣ್ಣವರ ಅಶ್ವಾರೂಢ ಮೂರ್ತಿಯನ್ನು ದೆಹಲಿಯಲ್ಲಿರುವ ಪಾರ್ಲಿಮೆಂಟ್ ನಲ್ಲಿ 28 ನೇ ಎಪ್ರಿಲ್ 2003 ರಲ್ಲಿ ಅನಾವರಣಗೊಳಿಸಲಾಯತು.

**ಕೊನೆಯ ಮಾತು:-** ಹೀಗೆ ಕಾಯಕವೇ ಕೈಲಾಸವೆಂದು ಸಾರಿದ ವಿಶ್ವ ಗುರು ಬಸವಣ್ಣನವರು 12 ನೇ ಶತಮಾನದಲ್ಲೇ ಅನುಭವ ಮಂಟಪದ ಮೂಲಕ ಸಂಸತ್ತಿನ ಕಲ್ಪನೆ ಮೂಡಿಸಿ, ಸಾಮಾಜಿಕ ಪಿಡುಗುಗಳನ್ನು ಹೊಡೆದೊಡಿಸಲು ಪ್ರಯತ್ನಪಟ್ಟರು, ಇವರ ತತ್ವಶಾಸ್ತ್ರ ಮತ್ತು ವಚನಗಳು ಇಂದಿಗೂ ಪ್ರಸ್ತುತವಾಗಿವೆ, ಇಂತಹ ಸಂದೇಶ ಮತ್ತು ನೀತಿ ಮಾರ್ಗಗಳನ್ನು ನಾವು ನೀವೆಲ್ಲ ಉಳಿಸಿ ಬೆಳೆಸಬೇಕಾಗಿದೆ, ಜೊತೆಜೊತೆಗೆ ಅನುಸರಣೆ ಮಾಡಬೇಕಾಗಿದೆ.

ಎನ್.ಎನ್.ಕಬ್ಬೂರ
ಶಿಕ್ಷಕರು ಮತ್ತು ಬರಹಗಾರರು. ತಾ-ಸವದತ್ತಿ
ಜಿ-ಬೆಳಗಾವಿ, ಮೊಬೈಲ್-9740043452
mutturaj.kabbur@gmail.com





ನೀನಾರಿಗಲ್ಲದವನು ಬಸವ
ಸಕಲ ಚರಾಚರಕೆ ಬೆಳಗುವ ಜ್ಯೋತಿ
ಕತ್ತಲೆಯ ಗರ್ಭ ಸೀಳಿ ಬಂದ
ಮಹಾನ್ ಉಷಾಕಿರಣದಂತೆ!

ಕ್ರಾಂತಿಯ ಶಂಖವನೂದಿ, ಮನುಜಕುಲದ
ಸಮಾನತೆಯ ಬಿತ್ತಿದ ನೇಗಿಲ ಯೋಗಿ ನೀನು;
ಅಸಮಾನತೆಯೆಂಬ ಹಾಲಾಹಲವ ಹೀರಿದ
ಆ ಜಗಜ್ಯೋತಿ ಪರಮೇಶ್ವರನಂತೆ.

ಶತಮಾನದ ಜಾತಿ ವಿಷಕೀಟಕೆ ನೀನು
ಜಾತ್ಯಾತೀತದ ಮಧುರ ದುಂಬಿ;
ಬರಿಯ ಜೇನಲ್ಲ, ದೀನ-ದಲಿತರ ಹಸಿವ ನೀಗುವ
ಅಕ್ಷಯ ಪಾತ್ರೆಯಂತೆ.
ಸ್ಪೃಶ್ಯ-ಅಸ್ಪೃಶ್ಯತೆಯ ಸಂಕೋಲೆ ಸಡಿಲಿಸಿ
ಸಕಲ ಜೀವಾತ್ಮರಿಗೆ ನೆರಳಾಗಿ ನಿಂದೆ;
ಅಗಣಿತ ಕೊಂಬೆಗಳ ಪಸರಿಸಿ ಹರಡಿದ
ಆಲದ ಮರದ ದಿವ್ಯ ಆಶ್ರಯದಂತೆ.

'ಕರ್ಮ'ದ ಭ್ರಾಂತಿಯ ಕತ್ತಲನು ಅಳಿಸಿ
'ಕಾಯಕವೇ ಕೈಲಾಸ'ವೆಂಬ ಪಥವ ತೋರಿದೆ;
ಸ್ವಾವಲಂಬನೆಯ ದಾರಿಯಲಿ ಮುನ್ನಡೆಸುವ
ಕಾಯಕಯೋಗದ ಧ್ರುವತಾರೆಯಂತೆ.

ಬಸವಣ್ಣನಿಲ್ಲದ ಕನ್ನಡದ ಕವಿ ಕುಲವಿಲ್ಲ
ಬಸವನಿಲ್ಲದ ನಾಡು ಕಗ್ಗತ್ತಲ ಕಾಡು;
ಕೇಳಿದ ವರವನು ಕರುಣಿಸಿ ಕಾಯುವ
ಜನಪದದ ಕಾಮಧೇನು ಬಸವ!

ಹರಿಹರನ ರಗಳೆಯಲಿ ನಲಿದ ನಂದೀಶನು
ಧರೆಯ ಕತ್ತಲೆ ಸೀಳ ಬಂದವನು;
ಅವತಾರ ಪುರುಷನಾಗಿ, ಲೋಕದೇವನಾಗಿ
ಕೈಲಾಸವನು ಭೂಮಿಗಿಳಿಸಿದವನು!

ಬ್ರಹ್ಮ ವಿಷ್ಣು ಮಹೇಶ್ವರರ ಪುರಾಣವಿರಲು
ನಮಗೆ ಭೀಮಕವಿಯ ಬಸವಪುರಾಣವೊಂದೇ ಸಾಕು;
ಅದು ಅಕ್ಷಯ ಪಾತ್ರೆಯಂತೆ ಅಕ್ಷರ ಅಕ್ಷರದಿ
ಬಡವರ ಬದುಕಿಗೆ ಅಮೃತವನು ಹರಿಸುವಂತೆ

ವಿಜಯ ಸಾಧಿಸಿದ ಷಡಕ್ಷರ ಕವಿಯ ಲೇಖನಿಯಲಿ
ವೃಷಭೇಂದ್ರ ವಿಜಯದ ಪತಾಕೆಯು ನೀನು;
ಕಾವ್ಯದ ಕಿರೀಟದಲಿ ಮಿಂಚುವ ಮಣಿ ನೀನು

ಕನ್ನಡದ ಕವಿಗಳ ಪಾಲಿನ ಆರಾಧ್ಯ ದೈವ ನೀನು!
ಬಸವಣ್ಣನಿಲ್ಲದ ಕನ್ನಡದ ಕವಿ ಕುಲವಿದೆಯೇ
ಅವನಿಲ್ಲದ ಈ ನಾಡು ಕಗ್ಗತ್ತಲ ಕಾರ್ಮೋಡ;
ಜಾತಿ-ಮತಗಳ ಬೇಲಿಯನು ಅಳಿಸಿ
ಬಸವ ತತ್ವ ಬೆಳಗಲಿ ನಮ್ಮೆದೆಯ ನಂದಾದೀಪದಂತೆ .

ಡಾ.ಕೃಷ್ಣಮೂರ್ತಿ. ಆರ್
ಸಹಾಯಕ ಪ್ರಾಧ್ಯಾಪಕ
ಸಿ.ಜಿ ಬೆಲ್ಲದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಅಕ್ಕಿಆಲೂರು
ಮೊಬೈಲ್:9611184944

# ಬಸವಣ್ಣರವರ 895ನೇ ವರ್ಷದ ಜನ್ಮ ಜಯಂತಿ



ಕಲಾ ಸಾಹಿತ್ಯ

ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

ಬಸವಣ್ಣನವರು ಕ್ರಿಸ್ತಶಕ 1131 ರಲ್ಲಿ ಬಿಜಾಪುರ ಜಿಲ್ಲೆಯ ಬಾಗೇವಾಡಿ ಎಂಬ ಅಗ್ರಹಾರದಲ್ಲಿ ಜನಿಸಿದರು. ತಂದೆ ಮಾದರಸ,ತಾಯಿ ಮಾದಲಾಂಬಿಕೆ. ತಂದೆತಾಯಿಗಳು ಮಗುವಿಗೆ ಜಾತಕರ್ಮವನ್ನು ಆಚರಿಸಿ ಬಸವ ಎಂದು ನಾಮಕರಣ ಮಾಡಿದರು. ಮುಂದೆ ಬಸವಣ್ಣನವರು ಶಿವಭಕ್ತರಾದರು. ಬಸವಣ್ಣನವರು ಶುದ್ಧ- ಪರಿಶುದ್ಧ ಮನುಷ್ಯರಾಗಿ ಹುಟ್ಟಿ, ಮನುಷ್ಯತ್ವ ಗುಣಗಳ ಜೊತೆಗೆ ದೈವತ್ವ ಗುಣಗಳನ್ನು ಮೈಗೂಡಿಸಿಕೊಂಡು ದೇವರಾದರು. ಅವರ ಸಾಧನೆ ಅದ್ಬುತ- ಅತ್ಯದ್ಬುತ ಹಾಗೂ ಅಪರೂಪ.ಇವರ ಸಾಮಾಜಿಕ ಕ್ರಾಂತಿಯ ಸ್ವರೂಪ ವಿಸ್ಮಯ,ಪವಾಡ ಹಾಗೂ ಅಗೋಚರ. 12ನೇ ಶತಮಾನದಲ್ಲಿ ನಡೆದ ಸಾಮಾಜಿಕ ಕ್ರಾಂತಿ ಮತ್ತು ಧಾರ್ಮಿಕ ಕ್ರಾಂತಿಗೆ ಕ್ರಾಂತಿಕಾರ ನೇತಾರರಾಗಿ ಸಮಾಜದಲ್ಲಿ ಬಲವಾಗಿ ನಾಟಿದ್ದ ಜಾತೀಯತೆ, ಗೊಡ್ಡು ಸಂಪ್ರದಾಯ, ಮೂಢನಂಬಿಕೆ ಹಾಗೂ ಧರ್ಮಾಂಧತೆಯನ್ನು ಹೋಗಲಾಡಿಸಿ ಪರಸ್ಪರ ಪ್ರೀತಿ,ಸ್ನೇಹ,ಸಹಕಾರ ಮನೋಭಾವನೆಗಳಿಂದ ಕೂಡಿದ ಸರ್ವಸಮಾನತೆಯ ಸಮಾಜ ರಚನೆಗೆ ಶ್ರಮಿಸಿದ ಕಾರಣ ಮನುಕುಲದ ಉದ್ಧಾರಕರಾದರು.

ಬಸವಣ್ಣನವರು ಜಾತಿ, ಧರ್ಮ,ಕಾಲ-ದೇಶ ಮೀರಿ ಬದುಕಿದ ಜೀವ. ವಿಶ್ವಗುರು ಬಸವಣ್ಣರವರ ಸಾಧನೆ ವರ್ಣಿಸಲು ಸಾಧ್ಯವಿಲ್ಲ. ಅವರ ಐದು ಸಾವಿರ ವಚನಗಳು ಸಮಾಜವನ್ನು ಬಡಿದೆಬ್ಬಿಸಿ ಎಚ್ಚರಿಸುವ ವಚನಗಳಾಗಿವೆ. ಅವುಗಳಲ್ಲಿ ಕೆಲವೊಂದು ವಚನಗಳ ಬಗ್ಗೆ ತಿಳಿಯುವುದಾದರೆ;

ದಯವಿಲ್ಲದ ಧರ್ಮವು ಅದಾವುದಯ್ಯ?
ಆಚಾರವೇ ಸ್ವರ್ಗ ಅನಾಚಾರವೇ ನರಕ
ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ
ನುಡಿದರೆ ಸ್ಪಟಿಕದ ಸಲಾಕೆಯಂತಿರಬೇಕು
ತನುವಿನ ಕೋಪ ತನ್ನ ಹಿರಿತನದ ಕೇಡು
ಮನದ ಕೋಪ ತನ್ನರುಹಿನ ಕೇಡು
ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ
ನೆರೆಮನೆಯ ಸುಡದು ಕೂಡಲಸಂಗಮದೇವ.
ಕಲ್ಲನಾಗರ ಕಂಡರೆ ಹಾಲನೆರೆಯೆಂಬರು,
ದಿಟದ ನಾಗರ ಕಂಡರೆ ಕೊಲ್ಲೆಂಬರು,
ಉಂಬ ಜಂಗಮ ಬಂದರೆ ನಡೆಯೆಂಬರು,
ಉಣ್ಣದ ಲಿಂಗಕ್ಕೆ ಬೋನವ ಹಿಡಿ ಎಂಬರು.

ಹೀಗೆ ಬಸವಣ್ಣನವರ ವಚನಗಳಲ್ಲಿ ನಿರ್ಮಲ ಭಕ್ತಿಭಾವ,ತತ್ವಚಿಂತನೆಯ ದರ್ಶನ,ಲೋಕಹಿತ ದೃಷ್ಟಿ, ಸತ್ಯಾನುಭವ ಇವೆಲ್ಲವೂ ಕೂಡಿ ಮಾನವನ ಆತ್ಮೋನ್ನತಿಗೆ ಪರಿಶುದ್ಧ ಬಾಳಿಗೆ ಬೆಳಕಾಗಿವೆ. 06 ನೇ ಶತಮಾನದಲ್ಲಿ ಬುದ್ಧ, 12 ನೇ ಶತಮಾನದಲ್ಲಿ ಬಸವಣ್ಣ, 18 ನೇ ಶತಮಾನದಲ್ಲಿ ಸ್ವಾಮಿ ವಿವೇಕಾನಂದರವರು ಜನ್ಮತಾಳಿದ್ದು ಈ ಪುಣ್ಯ ಭೂಮಿಯಲ್ಲಿ, ಆದರೆ ಬೆಳಕಾಗಿದ್ದು ವಿದೇಶದಲ್ಲಿ ಇದೆಂತಹ ವಿಪರ್ಯಾಸ.

ಎಲ್ಲಾ ಜನಾಂಗದವರನ್ನು ಒಟ್ಟಿಗೆ ಒಂದೇ ವೇದಿಕೆಯಲ್ಲಿ ಎಲ್ಲವನ್ನೂ ಹಂಚಿಕೊಳ್ಳಲು ಅನುಭವ ಮಂಟಪವನ್ನು ಸ್ಥಾಪಿಸಿ ಎಲ್ಲಾ ವರ್ಗದ ಜನರ ಬಾಳಿಗೆ ಆಶಾಕಿರಣರಾದರು.

ಇಂದು ಬಸವಣ್ಣನವರ 895 ನೇ ವರ್ಷದ ಜನ್ಮ ಜಯಂತಿಯನ್ನು ರಾಷ್ಟ್ರ ಸೇರಿ ಇಡೀ ಜಗತ್ತಿನಾದ್ಯಂತ ಆಚರಿಸುತ್ತಾ ಅವರ ಆದರ್ಶಗಳನ್ನು ಹಾಗೂ ಮೂಲ ತತ್ವಸಿದ್ಧಾಂತಗಳನ್ನು ನಾವುಗಳೆಲ್ಲರೂ ಶ್ರದ್ಧಾಭಕ್ತಿಯಿಂದ ಅನುಸರಿಸಿ,ಜೀವನದ ಬದುಕಿನಲ್ಲಿ ಶಾಶ್ವತವಾಗಿ ಅಳವಡಿಸಿಕೊಂಡರೆ ನಾವು ಈ ಪುಣ್ಯಭೂಮಿಯಲ್ಲಿ ಜನಿಸಿದ್ದಕ್ಕೂ ಸಾರ್ಥಕದ ಬದುಕು ಆ ಬದುಕೇ ನಮ್ಮೆಲ್ಲರಿಗೂ ಶ್ರೀರಕ್ಷೆ.

ಈ ಯೋಜನೆಯಡಿ ರಾಜ್ಯಗಳು ಕೂಡ ಅನುದಾನದ ಪಾಲು ನೀಡಬೇಕಿರುವ ಕಾರಣ ಕಾರ್ಯರೂಪಕ್ಕೆ ರಾಜ್ಯ ಸರ್ಕಾರ ಹಿಂದೇಟು

# ಕೇಂದ್ರ-ರಾಜ್ಯ ಸರ್ಕಾರಗಳ ಹಗ್ಗಜಗ್ಗಾಟ: ಉದ್ಯೋಗಕ್ಕಿಲ್ಲ ಖಾತ್ರಿ

• ಉದಯವಾಹಿನಿ ಕೊಪ್ಪಳ

ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ (ಮನರೇಗಾ) ಯೋಜನೆ ಹೆಸರು ಮತ್ತು ಸ್ವರೂಪ ಬದಲಾವಣೆ ಮಾಡಿರುವ ಕೇಂದ್ರ ಸರ್ಕಾರ ವಿಬಿ -ಜಿ- ರಾಮ್ ಜೀ ಹೆಸರಿನಲ್ಲಿ ಹೊಸ ಮಾದರಿಯಲ್ಲಿ ಯೋಜನೆ ಅನುಷ್ಠಾನ ಮಾಡಲು ಮುಂದಾಗಿದೆ. ಈ ಯೋಜನೆಯಡಿ ರಾಜ್ಯಗಳು ಕೂಡ ಅನುದಾನದ ಪಾಲು ನೀಡಬೇಕಿರುವ ಕಾರಣ ಕಾರ್ಯರೂಪಕ್ಕೆ ರಾಜ್ಯ ಸರ್ಕಾರ ಹಿಂದೇಟು ಹಾಕಿದ್ದು. ಕೇಂದ್ರ-ರಾಜ್ಯ ನಡುವಿನ ತಿಕ್ಕಾಟ ಕೂಲಿ ಕಾರ್ಮಿಕರಿಗೆ ಸಂಕಷ್ಟ ತಂದೊಡ್ಡಿದೆ.

ಮನರೇಗಾ ಯೋಜನೆಯಡಿ ವೈಯಕ್ತಿಕ ಕಾಮಗಾರಿ, ಕೆರೆ ನಿರ್ಮಾಣ, ಬದು ನಿರ್ಮಾಣ ಹೀಗೆ ವಿವಿಧ ಕೆಲಸಗಳನ್ನು ಮಾಡಿಕೊಳ್ಳಲು ಜನರಿಗೆ ಅವಕಾಶವಿತ್ತು. ಒಬ್ಬ ಕೂಲಿ ಕಾರ್ಮಿಕನಿಗೆ ವಾರ್ಷಿಕ ನೂರು ದಿನ ಸ್ಥಳೀಯವಾಗಿಯೇ ಕೆಲಸ ಸಿಕ್ಕು ಉಪಜೀವನಕ್ಕೂ ಅನುಕೂಲವಾಗುತ್ತಿತ್ತು. ಈ ವರ್ಷ ಕ್ರಿಯಾ ಯೋಜನೆಯೇ ಸಿದ್ಧವಾಗದ ಕಾರಣ ಕೆಲಸವೂ ಇಲ್ಲ, ಕೂಲಿಯೂ ಇಲ್ಲ ಎನ್ನುವ ಸ್ಥಿತಿ ಕಾರ್ಮಿಕರದ್ದಾಗಿದೆ.

ಹೊಸ ಹಾಗೂ ಹಳೆ ಯೋಜನೆಗಳ ನಡುವಿನ ಸರ್ಕಾರಗಳ ತಿಕ್ಕಾಟದ ಪರಿಣಾಮ ನರೇಗಾ ಕೂಲಿ ಕಾರ್ಮಿಕರ ಮೇಲಾಗಿದ್ದು, ಜಿಲ್ಲೆಯಲ್ಲಿ ಬಾಕಿ ಉಳಿದಿರುವ ಹಳೆ ಕೆಲಸಗಳನ್ನೇ ಹೊಸ ಆರ್ಥಿಕ ವರ್ಷದಲ್ಲಿ ಮುಂದುವರಿಸಲಾಗಿದೆ. ಆರು ತಿಂಗಳದ ಹೊಂದಾಣಿಕೆ ಅವಧಿಯಲ್ಲಿ ಈ ಕೆಲಸಗಳನ್ನು ಮುಗಿಸಿಕೊಳ್ಳಬೇಕಿದ್ದು, ಐದಾರು ತಿಂಗಳ ಹಿಂದೆ ಕೂಲಿ ಮಾಡಿದವರಿಗೆ ಇತ್ತೀಚೆಗೆ ಹಣ ಪಾವತಿಯಾಗಿದೆ.


ಉದಯವಾಹಿನಿ ಚಿತ್ರ

**ವೇತನ ಪಾವತಿ ವಿಳಂಬ**

ಜಿಲ್ಲೆಯಲ್ಲಿ ಕಳೆದ ಆರ್ಥಿಕ ವರ್ಷದಲ್ಲಿ 60,13,739 ಮಾನವ ದಿನಗಳನ್ನು ಸೃಜನೆ ಮಾಡಲಾಗಿದ್ದು, 9,959 ಕಾಮಗಾರಿಗಳು ಆರಂಭಗೊಂಡಿವೆ. ಇದರಲ್ಲಿ 2,271 ಕಾಮಗಾರಿಗಳು ಮಾತ್ರ ಪೂರ್ಣಗೊಂಡು ಕೂಲಿ ಕಾರ್ಮಿಕರಿಗೆ ವೇತನ ಪಾವತಿಸಲಾಗಿದೆ. ಅನುದಾನದ ಕೊರತೆ, ಅರೆಬರೆ ಕಾಮಗಾರಿ ಹಾಗೂ ಎರಡು ಸರ್ಕಾರಗಳ ನಡುವಿನ ತಿಕ್ಕಾಟದಿಂದಾಗಿ 7,688 ಕಾಮಗಾರಿಗಳಿಗೆ ಹಣವೇ ಪಾವತಿಯಾಗಿಲ್ಲ. ಹೀಗಾಗಿ ಜಿಲ್ಲೆಯಲ್ಲಿ ಕಳೆದೊಂದು ವರ್ಷದಿಂದ ಮನರೇಗಾ ಕೂಲಿ ಕಾರ್ಮಿಕರಿಗೆ ಸತ್ವರಹಿತ ಯೋಜನೆಯಂತಾಗಿದೆ. ಜಿಲ್ಲೆಗೆ ರೂ.38 ಕೋಟಿಗೂ ಹೆಚ್ಚು ಮೊತ್ತ ಬಾಕಿ ಬರಬೇಕಿದ್ದು ಅಂದಾಜು ವಾರ್ಷಿಕ ಕೆಲಸ ಮಾಡುತ್ತಿದ್ದ 1,03,669 ಕೂಲಿಕಾರರು ನಿರುದ್ಯೋಗಿಗಳಾಗಿದ್ದಾರೆ. ಇದರ ಪರಿಣಾಮ ಗ್ರಾಮೀಣ ಜನರ ಬದುಕಿನ ಮೇಲೂ ಆಗಿದ್ದು ಜನ ಗುಳೆ ಹೋಗುತ್ತಿದ್ದಾರೆ. ಕುಷ್ಟಗಿ, ಕೊಪ್ಪಳ ತಾಲ್ಲೂಕಿನ ಅಳವಂಡಿ, ಕನಕಗಿರಿ ಭಾಗದಲ್ಲಿ ಬದುಕಿನ ಬಂಡಿ ಎಳೆಯಲು ಜನ ದಕ್ಷಿಣ ಕನ್ನಡ, ಧರ್ಮಸ್ಥಳ, ಉಡುಪಿ, ಗೋವಾ ಹಾಗೂ ಬೆಂಗಳೂರಿನಂಥ ಮಹಾನಗರಗಳಿಗೆ ವಲಸೆ ಹೋಗುತ್ತಿದ್ದಾರೆ. ಒಂದೆಡೆ ಬಿರುಬಿಸಿಲು ದಿನದಿಂದ ದಿನಕ್ಕೆ ಹೆಚ್ಚಾಗುತ್ತಲೇ ಇದ್ದು ಮನೆಬಿಟ್ಟೂ ಬರಲಾಗದ ಸ್ಥಿತಿ ನಿರ್ಮಾಣವಾಗುತ್ತಿದ್ದರೆ, ಕೆಲವರಿಗಾದರೂ ಸ್ಥಳೀಯವಾಗಿ ಕೆಲಸ ಸಿಗುತ್ತಿತ್ತು. ಉಳಿದ ಯೋಜನೆಗಳನ್ನು ಮುಂದು ವರಿಸಲು ಆರು ತಿಂಗಳ ಹೊಂದಾಣಿಕೆ ಅವಧಿಯಲ್ಲಿ ಕೆಲಸಗಳು ಮನರೇಗಾ ಹೆಸರಿನಲ್ಲಿ ನಡೆಯುತ್ತಿದ್ದರೂ ವೇತನ ಪಾವತಿ ವಿಳಂಬ, ಸರಿಯಾಗಿ ಕೆಲಸ ಸಿಗುವುದಿಲ್ಲ ಎನ್ನುವ ಕಾರಣಕ್ಕೆ ಕೂಲಿಕಾರರು ಕೂಡ ಆಸಕ್ತಿ ತೋರಿಸುತ್ತಿಲ್ಲ. ಒಂದೆಡೆ ಬಿಸಿಲಿನ ಜೊತೆಗೆ ಕೂಲಿ ಕೆಲಸ ಇಲ್ಲ ಎನ್ನುವ ಬೇಗೆಯೂ ಕಾಡುತ್ತಿದೆ.

## ತೂಗುಯ್ಯಾಲೆಯಲ್ಲಿ ನರೇಗಾ ಸಿಬ್ಬಂದಿ ನೌಕರಿ

ನರೇಗಾ ಯೋಜನೆಗೆ ಸಂಬಂಧಿಸಿದಂತೆ ವಿವಿಧ ಹಂತಗಳಲ್ಲಿ ರಾಜ್ಯದಾದ್ಯಂತ ಅಂದಾಜು ಎಂಟು ಸಾವಿರಕ್ಕೂ ಹೆಚ್ಚು ಜನ ಕೆಲಸ ಮಾಡುತ್ತಿದ್ದು ಅವರ ನೌಕರಿಯ ಮೇಲೂ ಕರಿನೆರಳು ಬಿದ್ದಿದೆ. ಸಹಾಯಕ ಜಿಲ್ಲಾ ಕಾರ್ಯಕ್ರಮ ಸಂಯೋಜಕರು, ಐಇಸಿ ಸಂಯೋಜಕರು, ಡಿಎಂಐಎಸ್, ಜಿಲ್ಲಾಲೆಕ್ಕದ ವ್ಯವಸ್ಥಾಪಕರು, ಡಿಇಒ, ತಾಲ್ಲೂಕು ಹಂತದಲ್ಲಿ ತಾಂತ್ರಿಕ ಸಂಯೋಜಕರು, ಆಡಳಿತ ಸಹಾಯಕರು, ಸಿವಿಲ್, ತೋಟಗಾರಿಕೆ. ರೇಷ್ಮೆ, ಅರಣ್ಯ ಹಾಗೂ ಕೃಷಿ ಹೀಗೆ ವಿವಿಧ ವಿಭಾಗಗಳಲ್ಲಿ ಕೆಲಸ ಮಾಡುತ್ತಿರುವ ನೌಕರಿಗೆ ಭವಿಷ್ಯದ ಗತಿಯೇನು ಎನ್ನುವ ಆತಂಕ ಮನೆ ಮಾಡಿದೆ.

> ನರೇಗಾ ಕೆಲಸ ಉಪಜೀವನಕ್ಕೆ ಆಸರೆಯಾಗಿತ್ತು. ಸ್ಥಳೀಯವಾಗಿಯೂ ಕೆಲಸ ಸಿಗುತ್ತಿದ್ದರಿಂದ ಕುಟುಂಬ ನಿರ್ವಹಣೆಗೆ ಅನುಕೂಲವಾಗುತ್ತಿತ್ತು. ಈಗ ಕೂಲಿ ಕೆಲಸ ಸಿಗುತ್ತಿಲ್ಲ, ಹೋದವರ್ಷ ಕೊಟ್ಟ ಕೆಲಸದ ವೇತನವೇ ತಡವಾಗಿ ಬಂದಿದೆ. ಗುಳೆ ಹೋಗುವುದು ಅನಿವಾರ್ಯವಾಗಿದೆ.
> – ಚಂದ್ರಕಲಾ ದಾಸರ, ಅಳವಂಡಿ

> ಸರ್ಕಾರಿಂದ ಹಣ ಬರಬೇಕಿದೆ. ಪ್ರಸ್ತುತ ನಡೆಯುತ್ತಿರುವ ಕೆಲಸಗಳನ್ನು ಪೂರ್ಣಗೊಳಿಸಲು ಹೇಳಿದ್ದಾರೆ. ಪ್ರತಿ ವರ್ಷ ಏಪ್ರಿಲ್‌ನಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಕೂಲಿ ಕಾರ್ಮಿಕರು ಬರುತ್ತಿದ್ದರು. ಈಗ ಜನ ಕೂಡ ಬರುತ್ತಿಲ್ಲ. - ಟಿ. ಕೃಷ್ಣಮೂರ್ತಿ,
> ಜಿಲ್ಲಾ ಪಂಚಾಯಿತಿ ಉಪಕಾರ್ಯದರ್ಶಿ

## ಮಿನಿ ನ್ಯೂಸ್

### ಬಾರದ ಗಣತಿ ಕಿಟ್: ಪರದಾಟ

• ಉದಯವಾಹಿನಿ ಮುಳಗುಂದ

ಮೊದಲ ಹಂತದ ಮನೆ ಪಟ್ಟಿ ಮತ್ತು ವಸತಿ ಗಣತಿ ಪ್ರಕ್ರಿಯೆಗೆ ಪಟ್ಟಣದಲ್ಲಿ ಗಣತಿಗೆ ಬೇಕಾದ ಕಿಟ್ ಲಭ್ಯವಾಗದೇ ಶಿಕ್ಷಕರು ಅಸಮಾಧಾನಗೊಂಡಿದ್ದಾರೆ.

ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಒಟ್ಟು 32 ಮಂದಿ ಗಣತಿ ಸಿಬ್ಬಂದಿ, ಐವರು ಕಾಯ್ದಿರಿಸಿದ ಸಿಬ್ಬಂದಿ, ಆರು ಮಂದಿ ಗಣತಿ ಮೇಲ್ವಿಚಾರಕರ ನೇಮಕವಾಗಿದೆ. ಆದರೆ, ಮನೆ ಪಟ್ಟಿಗೆ ಬೇಕಾದ ಚಕ್‌ಬಂದಿ ನಕ್ಷೆ, ಮಾರ್ಕರ್ ಪೆನ್, ಟೋಪಿ, ಬ್ಯಾಗ್ ನೀಡಿಲ್ಲ ಎಂದು ಕೆಲ ಶಿಕ್ಷಕರು ತಿಳಿಸಿದರು. ಕೆಲ ಶಿಕ್ಷಕರಿಗೆ 200 ಮನೆ, ಕೆಲವರಿಗೆ 250 ಮನೆ, ಇನ್ನೂ ಕೆಲವರಿಗೆ 50ರಿಂದ 60 ಮನೆಗಳನ್ನು ಗಣತಿಗೆ ಹಂಚಿಕೆ ಮಾಡಲಾಗಿದೆ. ಸಕಾಲಕ್ಕೆ ಕಿಟ್. ಮಾಹಿತಿನೀದೆ ನಿರ್ಲಕ್ಷಿಸುತ್ತಾರೆ. ಗಣತಿ ಕಾರ್ಯದಲ್ಲಿ ಒಂದು ದಿನ ವಿಳಂಬವಾದರೂ ಮೇಲಧಿಕಾರಿಗಳು ಒತ್ತಡ ಹೇರುತ್ತಾರೆ ಎಂದೂ ಆರೋಪಿಸಿದರು.

### ವಿದ್ಯುತ್ ದರ ಏರಿಕೆ ಸರ್ಕಾರ ವಾಪಸ್ ಪಡೆಯಲಿ : ಯಡಿಯೂರಪ್ಪ ಆಗ್ರಹ

• ಉದಯವಾಹಿನಿ ಚಿಕ್ಕಮಗಳೂರು

ರಾಜ್ಯದಲ್ಲಿ ವಿದ್ಯುತ್ ದರವನ್ನು ಹುಚ್ಚಂಬಟ್ಟೆ ಏರಿಕೆ ಮಾಡಿದ್ದಾರೆ. ಇದು ಖಂಡಿತವಾಗಿಯೂ ಸರಿಯಲ್ಲ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು. ವೀರಶೈವ ಸಮುದಾಯ ಭವನ ಉದ್ಘಾಟನೆಗೆ ಆಗಮಿಸಿದ್ದ ಅವರು ಮಾಜಿ ಸಚಿವ ಸಿ.ಟಿ.ರವಿ ಅವರ ಮನೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ಕಾರದ ಆಡಳಿತ ವೈಫಲ್ಯವನ್ನೂ ಉಲ್ಲೇಖಿಸಿ ಸರಿಯಾಗಿ ಆಡಳಿತ ಮಾಡಲು ಬಾರದೆ, ಹಣಕಾಸಿನ ವ್ಯವಸ್ಥೆಯನ್ನು ಸರಿಪಡಿಸಲು ವಿಫಲವಾಗಿರುವ ಸರ್ಕಾರ ಈಗ ಬೇಕಾಬಿಟ್ಟಿಯಾಗಿ ವಿದ್ಯುತ್ ದರ ಹೆಚ್ಚಿಸಿದೆ ಎಂದು ಆರೋಪಿಸಿದರು. ಈ ರೀತಿಯಾಗಿ ಏರಿಕೆಯಾದರೆ ಸಾಮಾನ್ಯ ಜನರು ಬದುಕೋದು ಕಷ್ಟವಾಗುತ್ತದೆ. ಸರ್ಕಾರ ಕೂಡಲೇ ಈ ನಿರ್ಧಾರವನ್ನು ವಾಪಸ್ ಪಡೆಯಬೇಕು. ಜನರಿಗೆ ನೆಮದಿಯಿಂದ ಬದುಕಲು ಅವಕಾಶ ಕಲ್ಪಿಸುವಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದರು.

### ವರ್ತಮಾನವನ್ನು ನಿರ್ವಹಣೆ ಮಾಡುವುದೇ ಭವಿಷ್ಯ : ಬಸವಲಿಂಗ ಸ್ವಾಮಿಗಳು

• ಉದಯವಾಹಿನಿ ಬಳ್ಳಾರಿ

ವರ್ತಮಾನವನ್ನು ಸರಿಯಾಗಿ ನಿರ್ವಹಣೆ ಮಾಡುವುದೇ ಉತ್ತಮವಾದ ಭವಿಷ್ಯ ನಿರ್ಮಾಣಕ್ಕೆ ಅನುಕೂಲವಾಗಲಿದೆಂದು ಕೊಟ್ಟೂರು ಸಂಸ್ಥಾನ ಮಠದ ಬಸವಲಿಂಗ ಸ್ವಾಮಿಗಳು ಹೇಳಿದ್ದಾರೆ. ನಗರದಲ್ಲಿನ ಶ್ರೀ ಜಗದ್ಗುರು ಕೊಟ್ಟೂರು ಸ್ವಾಮಿ ಮಠದಲ್ಲಿ ಅಕ್ಕನ ಬಳಗದ ಸಹಯೋಗದಲ್ಲಿ ನಿನ್ನೆ ನಡೆದ ಶಿವಾನುಭವ ಸಂಪದದಲ್ಲಿ ಆಶೀರ್ವಾದ ಮಾಡಿದ ಶ್ರೀಗಳು, ವರ್ತಮಾನವನ್ನು ಆಧರಿಸಿ ಭವಿಷ್ಯ ನಿರ್ಮಾಣ ಆಗಲಿದೆ. ಅಂದರೆ, ವರ್ತಮಾನದಲ್ಲಿ ಸತ್ಯ, ಧರ್ಮ, ಅಹಿಂಸೆ, ನೀತಿ ಮತ್ತು ಆಚಾರ ವಿಚಾರಗಳನ್ನು ಪಾಲಿಸಿದಲ್ಲಿ ಉತ್ತಮವಾದ ಭವಿಷ್ಯ ಸಹಜವಾಗಿಯೇ ರೂಪುಗೊಳ್ಳಲಿದೆ ಎಂದರು.

### ಅಕ್ರಮ ಗಣಿಗಾರಿಕೆ ವಿರುದ್ಧ ಆಕ್ರೋಶ

• ಉದಯವಾಹಿನಿ ಸೊರಬ

ನಮಗೆ ದೂಳು ಉಣಿಸಿ ತಮ್ಮ ಹೊಟ್ಟೆ ತುಂಬಿಸಿಕೊಳ್ಳುತ್ತಿರುವ ಗಣಿ ಧಣಿಗಳಿಂದ ನಮ್ಮ ಬದುಕು ಮೂರಾಬಟ್ಟೆಯಾಗಿದೆ. ಗಣಿ ಗುತ್ತಿಗೆ ಅವಧಿ ಪರಿಶೀಲಿಸಿ ಅವರನ್ನು ಹೊರಗಟ್ಟಬೇಕು. ಇಲ್ಲವಾದರೆ ನಮಗೆ ಉಳಿಗಾಲವಿಲ್ಲ ಎಂದು ತಾಲ್ಲೂಕಿನ ಚಂದ್ರಗುತ್ತಿ ಬತ್ತಿಕೊಪ್ಪ ಗ್ರಾಮಸ್ಥರು ಉಪವಿಭಾಗಾಧಿಕಾರಿ, ಅರಣ್ಯಾಧಿಕಾರಿ ಎದುರು ಸಂಕಷ್ಟ ತೋಡಿಕೊಂಡರು. ಸಾಗರದ ಎ.ಸಿ. ಕಚೇರಿ ಹಾಗೂ ಡಿಎಫ್ ಒ ಕಚೇರಿಗೆ ಭೇಟಿ ನೀಡಿ. ಗ್ರಾಮದಲ್ಲಿ ನಡೆಯುತ್ತಿರುವ ಗಣಿಗಾರಿಕೆ ಸ್ಥಗಿತಗೊಳಿಸುವಂತೆ ಮನವಿ ಸಲ್ಲಿಸಿದರು.

ನಿಯಮಗಳನ್ನು ಉಲ್ಲಂಘಿಸಿ ಗಣಿಗಾರಿಕೆ ಕೆಲಸ ನಡೆಯುತ್ತಿದ್ದು, ಗ್ರಾಮಸ್ಥರು ಅದರ ಅರ್ಭಟ ಸಹಿಸಿಕೊಳ್ಳುವ ಜೊತೆಗೆ ಮೂಲ ಸೌಕರ್ಯಗಳಾದ ರಸ್ತೆ, ಚರಂಡಿ, ವಿದ್ಯುತ್, ನೀರು ಕೊನೆಗೆ ಶುದ್ಧ ಗಾಳಿಯಿಂದಲೂ ವಂಚಿತರಾಗಿದ್ದಾರೆ. ನಿರಂತರವಾಗಿ ನಿಯಮಗಳನ್ನು ಮೀರಿ ಸ್ಫೋಟಕ ಬಳಕೆ, ಅನಿಯಮಿತವಾಗಿ ಭಾರಿ ವಾಹನಗಳ ಓಡಾಟ, ಶಬ್ದ ಮಾಲಿನ್ಯ, ವಾಯುಮಾಲಿನ್ಯ ಎಲ್ಲವನ್ನು ಸಹಿಸಿಕೊಂಡು ಬಂದ ಫಲವಾಗಿ ಉಸಿರಾಟದ ಸಮಸ್ಯೆ ನಮಗೆ ಬಳುವಳಿಯಾಗಿ ಸಿಕ್ಕಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

### ಜೈಲಿನಿಂದ ತಪ್ಪಿಸಿಕೊಂಡಿದ್ದ ಕೈದಿ 15 ವರ್ಷಗಳ ಬಳಿಕ ಸಿಕ್ಕಿಬಿದ್ದ

• ಉದಯವಾಹಿನಿ ಹಾಸನ

ಸಕಲೇಶಪುರ ಜೈಲಿನಿಂದ ತಪ್ಪಿಸಿಕೊಂಡಿದ್ದ ವಿಚಾರಣಾಧೀನ ಕೈದಿಯನ್ನು 15 ವರ್ಷಗಳ ಬಳಿಕ ಹಾಸನ ಪೊಲೀಸರು ಬಂಧಿಸಿದ್ದಾರೆ. ಸಕಲೇಶಪುರ ತಾಲ್ಲೂಕಿನ ನಲ್ಲುಳ್ಳಿ ಗ್ರಾಮದ ನಿವಾಸಿ ಚನ್ನಕೇಶವ ಅಲಿಯಾಸ್ ಕೇಶವ ಅಲಿಯಾಸ್ ಸುರೇಶ್‌ನನ್ನು, 2011ರಲ್ಲಿ ಜೈಲಿನಲ್ಲಿ ಇರಿಸಲಾಗಿತ್ತು. ಅದೇ ವರ್ಷ ಆತ ಪರಾರಿಯಾಗಿದ್ದ.

ಗೋವಾದ ರೆಸ್ಟೋರೆಂಟ್‌ನಲ್ಲಿ ಕೆಲಸ ಮಾಡುತ್ತಿದ್ದ. ಆರೋಪಿಯನ್ನು ಇದೀಗ ಬಂಧಿಸಿದ್ದು, ಮತ್ತೆ ಜೈಲಿಗೆ ಕಳುಹಿಸಿದ್ದಾರೆ. ಮುಂಬೈ ಸೇರಿದಂತೆ ವಿವಿಧ ನಗರಗಳ ಹೋಟೆಲ್‌ಗಳಲ್ಲಿ ಕೆಲಸ ಮಾಡಿಕೊಂಡು ಬದುಕು ಸಾಗಿಸುತ್ತಿದ್ದ ಎಂದು ತಿಳಿದು ಬಂದಿದೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತಾ ಮಾರ್ಗದರ್ಶನದಲ್ಲಿ ಎಎಸ್ಪಿಗಳಾದ ತಮ್ಮಯ್ಯ, ಶ್ರೀನಿಧಿ ನೇತೃತ್ವದಲ್ಲಿ, ಸಿಬ್ಬಂದಿ ರವಿ ಕಬ್ಬತ್ತಿ, ಸೋಮಶೇಖರ ಮತ್ತು ಬಸವರಾಜು ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

### 56 ಸಾವಿರ ಹುದ್ದೆಗಳ ಭರ್ತಿ ಮಾಡಿ

• ಉದಯವಾಹಿನಿ ಹೊನ್ನಾಳಿ

ರಾಜ್ಯ ಸರ್ಕಾರ ಈ ಹಿಂದೆ ಅಕ್ಸಾ ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷ ಕಾಂತಕುಮಾರ್ ಅವರಿಗೆ ಭರವಸೆ ನೀಡಿದಂತೆ ಕೂಡಲೇ 56 ಸಾವಿರ ಹುದ್ದೆಗಳನ್ನು ಭರ್ತಿ ಮಾಡಬೇಕು ಎಂದು ಆಲ್ ಕರ್ನಾಟಕ ಸ್ಟೇಟ್ ಸ್ಟೂಡೆಂಟ್ಸ್ ಅಸೋಸಿಯೇಷನ್ (ಅಕ್ಸಾ) ಜಿಲ್ಲಾ ಘಟಕದ ಅಧ್ಯಕ್ಷ ಮಿಥುನ್ ಚಕ್ರವರ್ತಿ ಆಗ್ರಹಿಸಿದರು. ಏಳೆಂಟು ವರ್ಷಗಳಿಂದ ಖಾಲಿ ಇರುವ 2.84 ಲಕ್ಷ ಹಾಗೂ ನಿಗಮ ಮಂಡಳಿಗಳಲ್ಲಿ ಖಾಲಿ ಇರುವ 1 ಲಕ್ಷ ಹುದ್ದೆಗಳನ್ನು ಭರ್ತಿ ಮಾಡಬೇಕು ಎಂದು ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

ರಾಜ್ಯ ಸರ್ಕಾರ ಭರವಸೆ ನೀಡಿದಂತೆ ಪ್ರತಿವರ್ಷ ಒಂದು ಲಕ್ಷ ಹುದ್ದೆಗಳನ್ನು ಭರ್ತಿ ಮಾಡಬೇಕು. ನೇಮಕಾತಿಗೆ 5 ವರ್ಷ ವಯೋಮಿತಿ ಸಡಿಲಿಕೆ ಮಾಡಿದ್ದು, ಅದರಲ್ಲಿ ಈಗಾಗಲೇ 6 ತಿಂಗಳು ಕಳೆದು ಹೋಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ರಾಜ್ಯ ಸರ್ಕಾರ ತನ್ನ ಹೇಳಿಕೆಯಿಂದ ಜಾರಿಕೊಳ್ಳದ ಜವಾಬ್ದಾರಿ ನಿರ್ವಹಿಸಬೇಕು. ಈಚೆಗೆ ನಡೆದ ಕೆಪಿಎಸ್ಸಿ ಪರೀಕ್ಷೆಯಲ್ಲಿ ಒಂದೇ ಕೊಠಡಿಯಲ್ಲಿದ್ದ 16 ವಿದ್ಯಾರ್ಥಿಗಳು ಪಾಸಾಗಿದ್ದು, ಇವರೆಲ್ಲ ಪ್ರಭಾವಿ ವ್ಯಕ್ತಿಗಳ ಮಕ್ಕಳು ಎಂಬ ಆರೋಪ ಕೇಳಿಬಂದಿದೆ. ಆದ್ದರಿಂದ ಇನ್ನು ಮುಂದೆ ಕೆಪಿಎಸ್‌ಸಿ ಬದಲು ಕೆಇಎ (ಕರ್ನಾಟಕ ಪರೀಕ್ಷಾ ಮಂಡಳಿಯ) ಮೂಲಕ ಹುದ್ದೆಗಳನ್ನು ಭರ್ತಿ ಮಾಡಬೇಕು ಎಂದು ಆಗ್ರಹಿಸಿದರು.


## ಸ್ವಯಂ ಗಣತಿ ಪ್ರಕ್ರಿಯೆಗೆ ನಿರಾಸಕ್ತಿ, ರಾಜ್ಯ ಮಟ್ಟದಲ್ಲಿ 12ನೇ ಸ್ಥಾನ: ಜನಗಣತಿಗೂ ಮುನ್ನ ನಡೆಯಲಿದೆ ಮನೆ ಗಣತಿ

• ಉದಯವಾಹಿನಿ ಹುಬ್ಬಳ್ಳಿ

ಜನಗಣತಿ-2027ರ ಮೊದಲ ಹಂತವಾದ ಸ್ವಯಂ (ಮನೆ) ಗಣತಿ ಪ್ರಕ್ರಿಯೆ ಕೊನೆಗೊಂಡಿದ್ದು, ಮನೆಗಳ ಅಂದಾಜು ಸಂಖ್ಯೆಗೆ ಹೋಲಿಸಿದರೆ ಧಾರವಾಡ ಜಿಲ್ಲೆ ಕೇವಲ ಶೇ.5.83ರಷ್ಟು ಪ್ರಗತಿ ಸಾಧಿಸಿದೆ.

ಗಣತಿ ಪ್ರಕ್ರಿಯೆಯ ಬಗ್ಗೆ ಬಹುತೇಕರು ನಿರಾಸಕ್ತಿ ತೋರಿರುವುದು ಕಂಡು ಬರುತ್ತಿದೆ. ಆದರೆ, ರಾಜ್ಯ ಮಟ್ಟಕ್ಕೆ ತುಲನೆ ಮಾಡಿದರೆ, ಧಾರವಾಡ ಜಿಲ್ಲೆ 12ನೇ ಸ್ಥಾನದಲ್ಲಿದೆ. ಶೇ.19.03 ಸಾಧನೆಯೊಂದಿಗೆ ಬಳ್ಳಾರಿ ಜಿಲ್ಲೆ(56807 ಜನರು)ಮೊದಲು, ಶೇ.17.52(99366 ಜನರು) ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಶೇ.16.53(72837 ಜನರು) ಬಾಗಲಕೋಟೆ ಜಿಲ್ಲೆ ಸ್ವಯಂ ಗಣತಿಯಲ್ಲಿ ಪಾಲ್ಗೊಳ್ಳುವ ಮೂಲಕ ತೃತೀಯ ಸ್ಥಾನ ಪಡೆದಿದೆ.

2026ಕ್ಕೆ ಅಂದಾಜಿಸಿರುವಂತೆ ಜಿಲ್ಲೆಯಲ್ಲಿ 478,375 ಮನೆಗಳಿವೆ. ಇದರಲ್ಲಿ 27,877 ಜನರು ಮಾತ್ರ ಸ್ವಯಂ ಗಣತಿ ಪೂರ್ಣಗೊಳಿಸಿದ್ದಾರೆ. ಆನ್ ಲೈನ್ ಮೂಲಕ ವಿವರಗಳನ್ನು ಸಲ್ಲಿಸುವ ಸ್ವಯಂ ಗಣತಿ ಪ್ರಕ್ರಿಯೆ ಏ.1ರಿಂದ ಆರಂಭಗೊಂಡಿತ್ತು. ಮೊದಲ ವಾರ ಕೇವಲ 7 ಸಾವಿರ ಜನರು ಪೂರ್ಣಗೊಳಿಸಿದ್ದರು. ಬಳಿಕ 8 ದಿನಗಳಲ್ಲಿ 20 ಸಾವಿರ ಜನರು ಸ್ವಯಂ ಗಣತಿ ದಾಖಲಿಸಿದರು. ಹು-ಧಾ ಪಾಲಿಕೆ ವ್ಯಾಪ್ತಿಯಲ್ಲಿ 20 ಸಾವಿರ ಜನರು ಸ್ವಯಂ ಗಣತಿ ದಾಖಲಿಸಿದ್ದಾರೆ ಎಂದು ಪ್ರಧಾನ ಗಣತಿ ಅಧಿಕಾರಿ, ಪಾಲಿಕೆ ಆಯುಕ್ತ ಡಾ.ರುದ್ರೇಶ ಘಾಳಿ ತಿಳಿಸಿದ್ದಾರೆ.



ಉದಯವಾಹಿನಿ ಚಿತ್ರ

- ಹೆಚ್ಚೆಚ್ಚು ಜನರು ಸ್ವಯಂ ಗಣತಿ ಕೈಗೊಂಡರೆ ಮುಂದಿನ ಹಂತವಾದ ಮನೆ ಮನೆ ಭೇಟಿ ವೇಳೆ ಗಣತಿದಾರರ ಕೆಲಸ ಸುಲಭವಾಗುತ್ತದೆ
- ಜಿಲ್ಲೆ ಪ್ರಗತಿ ಶೇ.5.83: ವಸತಿ ಗಣತಿ ಪ್ರಕ್ರಿಯೆ ಏ.16ರಿಂದ ಮೇ 15ರವರೆಗೆ
- 27,877 ಜನರಿಂದ ಸ್ವಯಂ ಗಣತಿ ಪೂರ್ಣ

ಹೆಚ್ಚೆಚ್ಚು ಜನರು ಸ್ವಯಂ ಗಣತಿ ಕೈಗೊಂಡರೆ ಮುಂದಿನ ಹಂತವಾದ ಮನೆ ಮನೆ ಭೇಟಿ ವೇಳೆ ಗಣತಿದಾರರ ಕೆಲಸ ಸುಲಭವಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದರು. ಅಲ್ಲದೇ ತಮ್ಮ ವಾಟ್ಸಪ್ಯಾಪ್ ಸ್ಟೇಟಸ್‌ನಲ್ಲಿ ಸ್ವಯಂ ಗಣತಿ ಬಗ್ಗೆ ಮಾಹಿತಿ ಹಂಚಿಕೊಳ್ಳುವ ಮೂಲಕ ಅರಿವು ಮೂಡಿಸುವ ಪ್ರಯತ್ನ ಮಾಡಿದ್ದರು.

**ಮನೆ ಮನೆ ಗಣತಿ ಮ್ಯಾಪಿಂಗ್:** ಮನೆಗಳ ಪಟ್ಟಿ ತಯಾರಿ ಹಾಗೂ ವಸತಿ ಗಣತಿ ಪ್ರಕ್ರಿಯೆ ಏ.16ರಿಂದ ಆರಂಭಗೊಂಡಿದ್ದು, ಮೇ 15ರವರೆಗೆ ನಡೆಯಲಿದೆ. 2-3 ದಿನಗಳಿಂದ ಮನೆ ಮನೆ ಗಣತಿಗೆ ಸಂಬಂಧಿಸಿ ಮ್ಯಾಪಿಂಗ್ ಮಾಡಲಾಗುತ್ತಿದೆ. ಈ ಪ್ರಕ್ರಿಯೆ ಮುಗಿದ ಬಳಿಕ ಮನೆ ಮನೆಗೆ ಭೇಟಿ ನೀಡುವ ಗಣತಿದಾರರು ಸ್ವಯಂ ಗಣತಿಯ ವಿವರಗಳನ್ನು ದಾಖಲಿಸಿಕೊಳ್ಳುವರು. ಇದಕ್ಕಾಗಿ ಹು-ಧಾ ಪಾಲಿಕೆ ವ್ಯಾಪ್ತಿಯಲ್ಲಿ ಗಣತಿದಾರರು -ಮೇಲ್ವಿಚಾರಕರು ಸೇರಿ 2628 ಸಿಬ್ಬಂದಿ ಹಾಗೂ ಧಾರವಾಡ ಜಿಲ್ಲೆಯ ಉಳಿದ ತಾಲ್ಲೂಕುಗಳಿಗೆ 1755 ಸಿಬ್ಬಂದಿ ನಿಯೋಜಿಸಲಾಗಿದೆ.

**ಜನಗಣತಿಗೂ ಮುನ್ನ ಮನೆ ಗಣತಿ:** 2027ರ ಫೆಬ್ರವರಿಯಲ್ಲಿ ಜನಗಣತಿ ನಡೆಯಲಿದ್ದು, ಅದಕ್ಕೂ ಮುನ್ನ ಸದ್ಯ ಮನೆಗಳ ಸ್ಥಿತಿಗತಿ ಗಣತಿ ಪ್ರಕ್ರಿಯೆ ಆರಂಭವಾಗಿದೆ. ಸ್ವಯಂ ಗಣತಿಯಲ್ಲಿ ಮನೆಯ ಸ್ಥಿತಿಗತಿ, ಕುಟುಂಬದ ಸದಸ್ಯರ ವಿವರ, ಜಾತಿ, ಇತ್ಯಾದಿ ವಿವರಗಳಿಗೆ ಸಂಬಂಧಿಸಿದಂತೆ 33 ಪ್ರಶ್ನೆ ಕೇಳಲಾಗಿದೆ. ಇದೇ ಪ್ರಶ್ನೆಗಳನ್ನು ಗಣತಿದಾರರು ಸಹ ಕೇಳಲಿದ್ದು, ಪೂರಕ ಮಾಹಿತಿ ನೀಡುವಂತೆ ಜಿಲ್ಲಾಡಳಿತ ಮನವಿ ಮಾಡಿದೆ.

## ನೈರ್ಮಲ್ಯ ವ್ಯವಸ್ಥೆ ಸುಧಾರಣೆಗೆ ಸೂಚನೆ


ಉದಯವಾಹಿನಿ ಚಿತ್ರ

• ಉದಯವಾಹಿನಿ ಕುಷ್ಟಗಿ

ತಾಲ್ಲೂಕಿನ ಕನಕೊಪ್ಪ ಗ್ರಾಮದಲ್ಲಿ ಸ್ವಚ್ಛತೆ ಮತ್ತು ನೈರ್ಮಲ್ಯ ವ್ಯವಸ್ಥೆ ಸುಧಾರಿಸುವ ಕೆಲಸ ಕಾಮಗಾರಿಯನ್ನು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಪಂಪಾಪತಿ ಹಿರೇಮಠ ಪರಿಶೀಲಿಸಿದರು.

ಗ್ರಾಮದಲ್ಲಿ ನೀರು ಮತ್ತು ನೈರ್ಮಲ್ಯ ವ್ಯವಸ್ಥೆ ಹದಗೆಟ್ಟಿರುವ ಮಾಲಿನ್ಯ ಸಮಸ್ಯೆ ಹೆಚ್ಚಿರುವುದಕ್ಕೆ ಸಂಬಂಧಿಸಿದಂತೆ ಕನಕೊಪ್ಪ ರಸ್ತೆ ಮಧ್ಯೆ ಕೊಳಚೆ ಹೊಂಡ ಶೀರ್ಷಿಕೆಯಡಿ ವರದಿ ಪ್ರಕಟಿಸಿತ್ತು. ಕಾರಣಕ್ಕೆ ತಾಪಂ ಇಒ ಅವರು ಗ್ರಾಮಕ್ಕೆ ಅಧಿಕಾರಿಗಳೊಂದಿಗೆ ಭೇಟಿ ನೀಡಿದ್ದರು.

ನೀರು ಪೂರೈಕೆ ವ್ಯವಸ್ಥೆಯನ್ನು ಸಮರ್ಪಕವಾಗಿ ನಿರ್ವಹಿಸದ ಕಾರಣ ರಸ್ತೆಯಲ್ಲಿ ನೀರು ನಿಂತು ಗುಂಡಿಗಳು ನಿರ್ಮಾಣವಾಗುತ್ತವೆ. ಅದರಿಂದ ಕೊಳಚೆ ಹೆಚ್ಚಿ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಈ ವಿಷಯದಲ್ಲಿ ಹೆಚ್ಚಿನ ಮುತುವರ್ಜಿ ವಹಿಸುವಂತೆ ಸಿಬ್ಬಂದಿಗೆ ಸೂಚಿಸಿದರು. ನಂತರ ಈ ಕುರಿತು ವಿವರಿಸಿದ ಪಿಡಿಒ ಶರಣಮ್ಮ ಕುರ್ನಾಳ, ಜೆಜೆಎಂ ನೀರು ಪೂರೈಕೆ ಯೋಜನೆ ಅನುಷ್ಠಾನಗೊಳಿಸುವ ಸಂದರ್ಭದಲ್ಲಿ ಗ್ರಾಮದಲ್ಲಿ ಅಲ್ಲಲ್ಲಿ ಗುಂಡಿಗಳು ಉಂಟಾಗಿವೆ. ರಸ್ತೆಯಲ್ಲಿ ನೀರು ನಿಂತಿರುವುದು, ಜನರಲ್ಲಿ ಅದರಲ್ಲೇ ತ್ಯಾಜ್ಯ ಎಸೆಯುತ್ತಿರುವುದರಿಂದ ಮಾಲಿನ್ಯ ಉಂಟಾಗಿತ್ತು. ಈಗ ಗುಂಡಿ ಮುಚ್ಚಲಾಗಿದೆ. ನೀರು ನಿಲ್ಲದಂತೆ ಕ್ರಮ ಕೈಗೊಳ್ಳಲಾಗಿದ್ದು ಸ್ವಚ್ಛತೆಗೆ ಆದ್ಯತೆ ನೀಡಲಾಗಿದೆ ಎಂದು ಹೇಳಿದರು.

## ಬಸವಣ್ಣನವರ ತತ್ವಗಳು ಸರ್ವಕಾಲಕ್ಕೂ ಸತ್ಯ

• ಉದಯವಾಹಿನಿ ಬೀದರ್

ಬಸವಣ್ಣನವರ ತತ್ವಗಳು ಸರ್ವಕಾಲಕ್ಕೂ ಸತ್ಯವಾಗಿದ್ದು, ಅವರ ಸಂಸದಿಯ ಪದ್ಧತಿ ಇಡೀ ಜಗತ್ತೆ ಆರಾಧಿಸುತ್ತಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ ಗುಂಟಿ ತಿಳಿಸಿದರು.

ನಗರದ ಗುಂಪಾ ರಸ್ತೆಯ ಸಿದ್ದಾರೂಢ ಮಠದ ಎದುರು ಬಸವ ಜಯಂತಿ ಉತ್ಸವ ಸಮಿತಿ ಹಮ್ಮಿಕೊಂಡ ಬೃಹತ್ ಕಾರು ರ್‍ಯಾಲಿಗೆ ಚಾಲನೆ ನೀಡಿ ಮಾತನಾಡಿರುವ ಅವರು, ಧರ್ಮ ರಹಿತ, ಜಾತಿ ರಹಿತ, ಸಮಾಜ ಹಿತ, ಶೋಷಿತ ಸಮುದಾಯವನ್ನು ಮೇಲೆತ್ತಿ ಅಂತರ್ ಜಾತಿ ವಿವಾಹಕ್ಕೆ ಉತ್ತೇಜನ ನೀಡುವ ಮೂಲಕ ಮೇಲು, ಕೀಳು ಎಂಬ ಭೇದ ಸಂಪೂರ್ಣ ನಿರ್ನಾಮ ಮಾಡಿದ ಮಹಾನ ಕ್ರಾಂತಿಯೋಗಿಯಾಗಿರುವರು ಎಂದರು. ಉತ್ಸವ ಸಮಿತಿಯ ಅಧ್ಯಕ್ಷರಾದ ಡಾ.ರಜನೀಶ ವಾಲಿ ಮಾತನಾಡಿ, ಬೃಹತ್ತಾದ ಈ ಕಾರು ರ್‍ಯಾಲಿ ಹಮ್ಮಿಕೊಂಡು ಬಸವಣ್ಣನವರು ಕೇವಲ ಲಿಂಗಾಯತರ ಸ್ವತ್ತಲ್ಲ ಎಲ್ಲಾ ಸಮುದಾಯದ ಆಸ್ತಿ ಎಂಬ ವಿಶಾಲ ಸಂದೇಶ ರವಾನಿಸುವ ಉದ್ದೇಶ ಹೊಂದಿದ್ದು, ಮೂರು ದಿವಸಗಳ ಕಾಲ ನಡೆಯಲಿರುವ ಜಯಂತಿ ಉತ್ಸವದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಸಾಂಸ್ಕೃತಿಕ ನಾಯಕನಿಗೆ ಗೌರವ ಸಲ್ಲಲಿಸಬೇಕಾಗಿದೆ ಎಂದರು.


ಉದಯವಾಹಿನಿ ಚಿತ್ರ

ಈ ಕಾರು ರ್‍ಯಾಲಿ ಸಿದ್ದಾರೂಢ ಮಠದ ಮುಂಭಾಗದಿಂದ ಮೈಲೂರ ಕ್ರಾಸ್, ಬೊಮ್ಮಗೊಂಡೇಶ್ವರ್ ವೃತ್ತ, ಬಸವೇಶ್ವರ ವೃತ್ತ, ಮಹಾವೀರ ಚೌಕ್, ಭಗತಸಿಂಗ್ ವೃತ್ತ, ಅಂಬೇಡ್ಕರ್ ವೃತ್ತ, ಹರಳಯ್ಯ ಚೌಕ್, ಮೋಹನ್ ಮಾರ್ಕೆಟ್ ಮೂಲಕ ರೋಟ್ರಿ ಸರ್ಕಲ್, ಮಡಿವಾಳ ಚೌಕ್, ಕೇಂದ್ರ ಬಸ್ ನಿಲ್ದಾಣ ಮುಂಭಾಗದಿಂದ ಪಾಪನಾಶ ದೇವಸ್ಥಾನ ವರೆಗೆ ಸಾಗಿತು.

## ಅಧಿಕಾರಿಗಳು ಅಲೆಮಾರಿ ಸಮುದಾಯಗಳಿಗೆ ನಿಗದಿಪಡಿಸಿದ ಯೋಜನೆಗಳು ಸರಿಯಾದ ಸಮಯಕ್ಕೆ ತಲುಪಿಸಿ: ಪಲ್ಲವಿ ಜಿ.

• ಉದಯವಾಹಿನಿ ಬೀದರ

ಅಲೆಮಾರಿ ಸಮುದಾಯಗಳಿಗೆ ನಿಗದಿಪಡಿಸಿದ ಯೋಜನೆಗಳು ಸರಿಯಾದ ಸಮಯಕ್ಕೆ ಹಾಗು ಕಾಲಮಿತಿಯೊಳಗಾಗಿ ಫಲಾನುಭವಿಗಳಿಗೆ ತಲುಪಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಪ್ರಾಮಾಣಿಕವಾಗಿ ಪ್ರಯತ್ನಿಸುವಂತೆ ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವರದ್ಧಿ ನಿಗಮದ ಅಧ್ಯಕ್ಷರಾದ ಪಲ್ಲವಿ ಜಿ. ಅವರು ಅಧಿಕಾರಿಗಳಿಗೆ ಸೂಚಿಸಿದರು.

ಅವರು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ವಿವಿಧ ಯೋಜನೆಗಳ ಕುರಿತು ಜಿಲ್ಲಾ ಅನುಷ್ಠಾನ ಸಮಿತಿ ಸದಸ್ಯರು ಹಾಗೂ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಮತ್ತು ಸಮಾಲೋಚನೆ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಈಗಾಗಲೇ ಸ್ಥಗಿತಗೊಂಡ ಅಲೆಮಾರಿ ಸಮುದಾಯ ಭವನಗಳು ನಿಗಮದಿಂದ ಅನುದಾನ ನೀಡಿ ಪೂರ್ಣಗೊಳಿಸಲು ಪ್ರಯತ್ನಿಸಲಾಗುವುದು ಎಂದು ಭರವಸೆ ನೀಡಿದರು. ಹೋದ ವರ್ಷ ಕೂಡ ಏ. 18ರಂದು ನಾನು ಬೀದರ್ ಜಿಲ್ಲಾ ಪ್ರವಾಸ ಕೈಗೊಂಡಿದ್ದೆ. ಆ ಸಂದರ್ಭದಲ್ಲಿ ಬೀದರ್ ಜಿಲ್ಲೆ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಪ್ರವಾಸ ಮಾಡಿ ಅಲೆಮಾರಿ ಸಮುದಾಯದವರ ವಾಸಸ್ಥಳಕ್ಕೆ ಭೇಟಿ ನೀಡಿದ್ದೇನೆ. ಅವರ ಸಮಸ್ಯೆಗಳನ್ನು ತಿಳಿದುಕೊಂಡಿದ್ದೆ. ಇವಾಗ ಕೂಡ ಅಧಿಕಾರಗಳ ಜೊತೆಗೆ ಹೋಗಿ ಪರಿಶೀಲನೆ ಮಾಡಿದ್ದೇನೆ ಎಂದರು.


ಉದಯವಾಹಿನಿ ಚಿತ್ರ

ನಾವು ಭೇಟಿ ನೀಡಿದ ಸ್ಥಳಗಳಲ್ಲಿ ಯಾವ ಯಾವ ರೀತಿಯ ಕಾರ್ಯಕಾರಿಗಳನ್ನು ಕೈಗೊಂಡಿದ್ದಾರೆ, ಯಾವ ರೀತಿಯಲ್ಲಿ ಸಮಸ್ಯೆಗಳನ್ನು ಬಗೆಹರಿಸಿದ್ದಾರೆ ಎನ್ನುವುದನ್ನು ಪರಿಶೀಲಿಸಿದ್ದೇನೆ. ಚೌಳಿ ಕಮಾನ್ ಹತ್ತಿರದಲ್ಲಿರುವ ಸಿಂಧೋಳ್ ಮತ್ತು ಮಾಂಗಾರವಾಡಿ 84 ಕುಟುಂಬಗಳಿಗೆ ಅಲಿಯಂಬರ್ ಗ್ರಾಮದಲ್ಲಿ ಎರಡು ಎಕರೆ ಭೂಮಿಯನ್ನು ನಿಗದಿ ಹಾಗೂ ಲೇಔಟ್ ಪ್ಲಾನಿಂಗ್ ಕೂಡ ಮಾಡಿ ಪ್ರಸ್ತಾವನೆ ನಿಗಮಕ್ಕೆ ಕಳಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಈಗಾಗಲೇ 2 ಎಕರೆ ಭೂಮಿಯನ್ನು ನಿಗದಿ ಮಾಡಿದ್ದಾರೆ. ಆದರೆ ಲೇಔಟ್ ಪ್ಲಾನಿಂಗ್ ಮಾಡಿ ಪ್ರಸ್ತಾವನೆ ನಿಗಮಕ್ಕೆ ಕಳಿಸಿರುವುದಿಲ್ಲ. ಇದರ ಬಗ್ಗೆ ಚರ್ಚಿಸಿ ಲೇಔಟ್ ಪ್ಲಾನಿಂಗ್ ಮಾಡಿ ಅದಕ್ಕೆ ಎಷ್ಟು ಅನುದಾನ ಬೇಕು ಅಷ್ಟು ನಮ್ಮ ನಿಗಮದಿಂದ ನೀಡುತ್ತೇವೆ ಎಂದು ಭರವಸೆ ನೀಡಿದ್ದೇನೆ.

> ಅಲೆಮಾರಿ ಸಮುದಾಯದವರಲ್ಲಿ ಇರುವ ಸಮಸ್ಯೆ ಸಮಸ್ಯೆಗಳನ್ನು ಬಗೆಹರಿಸಲು ಕ್ರಮ ತೆಗೆದುಕೊಳ್ಳಲು ಈಗಾಗಲೇ ನಾನು ನಮ್ಮ ಸಮಾಜ ಕಲ್ಯಾಣ ಇಲಾಖೆ ಮತ್ತು ಇದಕ್ಕೆ ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಗೆ ನಿರ್ದೇಶನ ನೀಡಿ, ಕಾಲಮಿತಿಯೊಳಗಾಗಿ ಆ ಸಮಸ್ಯೆಯನ್ನು ಬಗೆಹರಿಸುವುದಾಗಿ ತಿಳಿಸಿದ್ದೇನೆ. -ಪಲ್ಲವಿ ಜಿ.

## ಡಾ. ರಾಜ್ ಜನ್ಮ ದಿನಾಚರಣೆ ಅರ್ಥಪೂರ್ಣಗೊಳಿಸಲು ಸೂಚನೆ

• ಉದಯವಾಹಿನಿ ವಿಜಯಪುರ

ವಿಶೇಷ ನಟನೆ ಮೂಲಕ ಕನ್ನಡಿಗರ ಮನೆ-ಮಾತಾದ ನಟ ಸಾರ್ವಭೌಮ ಡಾ.ರಾಜಕುಮಾರ್ ಅವರ ಜನ್ಮ ದಿನಾಚರಣೆಯ ಕಾರ್ಯಕ್ರಮವನ್ನು ಜಿಲ್ಲೆಯಲ್ಲಿ ವಿಶಿಷ್ಟವಾಗಿ ಆಚರಿಸಲು ಅಧಿಕಾರಿಗಳು ವಿಶೇಷ ಮುತುವರ್ಜಿ ವಹಿಸಿ ಕಾರ್ಯಕ್ರಮಕ್ಕೆ ಸಿದ್ಧತೆ ಕೈಗೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿ ಡಾ. ಔದ್ರಾಮ ಹೇಳಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಡಾ.ರಾಜ್‌ಕುಮಾರ್ ಜನ್ಮ ದಿನಾಚರಣೆಯ ಪೂರ್ವಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಜಿಲ್ಲಾಡಳಿತ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಮೇರುನಟ ಡಾ.ರಾಜ್‌ಕುಮಾರ್ ಅವರ ಜನ್ಮ ದಿನಾಚರಣೆಯ ಕಾರ್ಯಕ್ರಮವನ್ನು ಏ.24ರಂದು ಬೆಳಿಗ್ಗೆ 9 ಗಂಟೆಗೆ ನಗರದ ಕಂದಗಲ್ ಶ್ರೀ ಹನುತರಾಯ ರಂಗಮಂದಿರದಲ್ಲಿ ಆಯೋಜಿಸಲು ನಿರ್ಧರಿಸಲಾಗಿದ್ದು, ಅಗತ್ಯ ಸಿದ್ಧತೆ ಕೈಗೊಳ್ಳುವಂತೆ ಅಪರ ಡಾ.ಔದ್ರಾಮ ಅವರು ತಿಳಿಸಿದರು.


ಉದಯವಾಹಿನಿ ಚಿತ್ರ

ಡಾ. ರಾಜ್ ಕುಮಾರ ಅವರು, ಕನ್ನಡದ ಮೇರು ನಟ, ನಟಸಾರ್ವಭೌಮರಾಗಿ ಈ ನಾಡು ಕಂಡ ನೆಚ್ಚಿನ ನಟರಾಗಿದ್ದಾರೆ. ಕನ್ನಡಪರ ಹೋರಾಟಗಳಲ್ಲಿ ಭಾಗಿಯಾಗಿ ನಾಡು-ನುಡಿಗಾಗಿ ಮಹತ್ತರ ಸೇವೆ ಸಲ್ಲಿಸಿದ್ದಾರೆ. ಇವರ ಜನ್ಮ ದಿನವನ್ನು ಅರ್ಥಪೂರ್ಣವಾಗಿ ಆಚರಿಸಬೇಕು ಎಂದರು. ವಿವಿಧ ಪಾತ್ರಗಳಲ್ಲಿ ಮನಮಿಡಿಯುವಂತೆ ನಟಿಸಿ ಕಲಾರಾಧಕರ ಹೃದಯ ಗೆದ್ದಿದ್ದಾರೆ. ಇವರ ಕಾರ್ಯಕ್ರಮ ಯಶಸ್ಸಿಗೆ ವಿವಿಧ ಇಲಾಖೆಗಳ ಅಧಿಕಾರಿಗಳು ವಹಿಸಿರುವ ಕೆಲಸ ನಿರ್ವಹಿಸಿ, ಈ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಡೆಯುವಂತೆ ವ್ಯವಸ್ಥೆ ಮಾಡಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

## ಡಿ-ಲಿಮಿಟೇಶನ್ ಜೋಡಣೆ ಹಿಂದೆ ರಾಜಕೀಯ ಉದ್ದೇಶ

• ಉದಯವಾಹಿನಿ ಜಮಖಂಡಿ



ಕಾಂಗ್ರೆಸ್ ಪಕ್ಷದ ರೈತ ಮುಖಂಡ ಹಾಗೂ ಡಿಸಿಸಿ ಬ್ಯಾಂಕ್ ಮಾಜಿ ನಿರ್ದೇಶಕ ಬಸವರಾಜ ಸಿಂಧೂರ ತಮ್ಮ ಗೃಹ ಕಚೇರಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿ, ಕೇಂದ್ರ ಸರ್ಕಾರದ ಮಹಿಳಾ ಮೀಸಲಾತಿ ಮಸೂದೆ ಕುರಿತು ತೀವ್ರ ವಾಗ್ದಾಳಿ ನಡೆಸಿದರು. ಮಹಿಳಾ ಮೀಸಲಾತಿ ಮಸೂದೆಗೆ ಡಿ-ಲಿಮಿಟೇಶನ್ ಪ್ರಕ್ರಿಯೆಯನ್ನು ಜೋಡಿಸಿರುವುದು ದಕ್ಷಿಣ ಭಾರತದ ರಾಜ್ಯಗಳಿಗೆ ಅನ್ಯಾಯವಾಗುವಂತದ್ದು ಎಂದು ಆರೋಪಿಸಿದ ಅವರು, ಇದೇ ಕಾರಣದಿಂದ ಕಾಂಗ್ರೆಸ್ ಸೇರಿದಂತೆ ಹಲವು ಪಕ್ಷಗಳಿಗೆ ವಿರೋಧಿಸುವ ಅನಿವಾರ್ಯತೆ ಎದುರಾಗಿದೆ ಎಂದರು. 2019ರಿಂದಲೇ ಬಹುಮತ ಹೊಂದಿದ್ದ ಕೇಂದ್ರ ಸರ್ಕಾರ ಮಸೂದೆಯನ್ನು ಆಗಲೇ ಜಾರಿಗೆ ತರಲಿಲ್ಲ ಯಾಕೆ ಎಂದು ಪ್ರಶ್ನಿಸಿದ ಅವರು, 2023ರಲ್ಲಿ ಸಂಸತ್ತಿನಲ್ಲಿ ಅಂಗೀಕಾರವಾದರೂ ಜಾರಿಗೆ ತರದಿರುವುದು ರಾಜಕೀಯ ಲಾಭಕ್ಕಾಗಿ ಎಂದು ಟೀಕಿಸಿದರು. ಬಿಜೆಪಿ ಸರ್ಕಾರ ಕಳೆದ ವರ್ಷಗಳಲ್ಲಿ ರೈತರು, ಮಹಿಳೆಯರು ಮತ್ತು ಯುವಕರ ಪರ ಗಮನಾರ್ಹ ಸಾಧನೆ ಮಾಡಿಲ್ಲ ಎಂದು ಆರೋಪಿಸಿದ ಅವರು, ಬೆಲೆ ಏರಿಕೆ, ಉದ್ಯೋಗ ಕೊರತೆ ಹಾಗೂ ಖಾಲಿ ಭರವಸೆಗಳ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.

ಕರ್ನಾಟಕದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ಮಹಿಳೆಯರಿಗೆ ಗೃಹಲಕ್ಷ್ಮಿ ಯೋಜನೆ, ಉಚಿತ ಬಸ್ ಪ್ರಯಾಣ, ಉಚಿತ ವಿದ್ಯುತ್ ಮತ್ತು ಅನ್ನಭಾಗ್ಯ ಯೋಜನೆಗಳನ್ನು ನೀಡಿರುವುದಾಗಿ ಅವರು ಹೇಳಿದರು.

# ಬಿಜೆಪಿ ಜೊತೆಗೆ ಮೈತ್ರಿ ಅಷ್ಟೇ, ಸಿದ್ಧಾಂತದಲ್ಲಿ ರಾಜಿ ಇಲ್ಲ: ನಿಖಿಲ್

● ಆನೆ ದಾಳಿ ಸಂಘರ್ಷ; ಶಾಶ್ವತ ಪರಿಹಾರಕ್ಕೆ ಕೇಂದ್ರದ ಅರಣ್ಯ ಸಚಿವರ ಜತೆ ಹೆಚ್ಡಿಕೆ ಮಾತುಕತೆ ನಡೆಸಿದ್ದಾರೆ

• ಉದಯವಾಹಿನಿ ಚಿಕ್ಕಮಗಳೂರು

ಜಾತ್ಯತೀತ ಜನತಾದಳ ಅನ್ನುವುದು ಅದರ ಘೋಷ ವಾಕ್ಯದಲ್ಲೇ ಇದೆ. ನಮ್ಮ ಸಿದ್ಧಾಂತದಲ್ಲಿ ಯಾವುದೇ ಬದಲಾವಣೆ ಇಲ್ಲ. ನಾವು ಯಾವತ್ತಿದ್ರೂ ಜಾತ್ಯತೀತಾನೇ ಜಾತ್ಯಾತೀತವಾಗಿ ಉಳಿಯುತ್ತೇವೆ ಎಂದು ನಿಖಿಲ್ ಕುಮಾರಸ್ವಾಮಿ ಅವರು ಹೇಳಿದರು.

ಈ ಬಗ್ಗೆ ಚಿಕ್ಕಮಗಳೂರಿನಲ್ಲಿ ಮಾತನಾಡಿ ಅವರು, ಬಿಜೆಪಿ ಜೆಡಿಎಸ್ ಜತೆ ಮೈತ್ರಿ ಆಗಿರುವುದಕ್ಕೆ ಕಾರ್ಯಕರ್ತರು ಗೊಂದಲದಲ್ಲಿದ್ದಾರೆ ಎಂಬ ಪ್ರಶ್ನೆಗೆ ಉತ್ತರಿಸಿ ಅವರು ನಾವು ಓಆಂ ಜೊತೆ ಮಿತ್ರ ಪಕ್ಷವಾಗಿ ಕೈ ಜೋಡಿಸಿದ್ದೇವೆ. ಆದರೆ ನಮ್ಮ ಸಿದ್ಧಾಂತವನ್ನ ಯಾರ ಜೊತೆಗೆ ಮರ್ಜ್ ಮಾಡಿಲ್ಲ. ನಮ್ಮದು ಬೇರೆ ರಾಜಕೀಯ ಪಕ್ಷವಾಗಿದೆ ಎಂದು ಹೇಳಿದರು.

**ನಾವು ಯಾವತ್ತಿದ್ರೂ ಜಾತ್ಯತೀತಾನೇ ಜಾತ್ಯಾತೀತವಾಗಿ ಉಳಿಯುತ್ತೇವೆ**

ಜೆಡಿಎಸ್ ಧರ್ಮ ,ಜಾತಿ, ಸಮುದಾಯದ ಆಧಾರದ ಮೇಲೆ ರಾಜಕಾರಣ ಮಾಡಿಲ್ಲ ಜೆಡಿಎಸ್ ಸರ್ವ ಜನಾಂಗದ ಶಾಂತಿಯ ತೋಟದ ಬಗ್ಗೆ ಪರಿಕಲ್ಪನೆ ಇಟ್ಟಿರುವುದನ್ನ ನೋಡಿದ್ದೀರಾ. ಯಾವುದೇ ಧರ್ಮ ,ಜಾತಿ, ಸಮುದಾಯದ ಆಧಾರದ ಮೇಲೆ ರಾಜಕಾರಣ ಮಾಡಿಕೊಂಡು ಬಂದಿಲ್ಲ. ಎಲ್ಲರನ್ನೂ ಸಮಾನವಾಗಿ ನೋಡುವ ಕೆಲಸವನ್ನು ಪಕ್ಷ ಮಾಡಿದೆ ಇದನ್ನ ಮುಂದುವರಿಸುತ್ತೇವೆ ಎಂದು ನಿಖಿಲ್ ಕುಮಾರಸ್ವಾಮಿ ಅವರು ಹೇಳಿದರು.


ಉದಯವಾಹಿನಿ ಚಿತ್ರ

- ಅಲ್ಪಸಂಖ್ಯಾತರನ್ನ ಕಾಂಗ್ರೆಸ್ ಪಕ್ಷ ವೋಟ್ ಬ್ಯಾಂಕ್‌ಗಾಗಿ ಉಪಯೋಗಿಸಿಕೊಳ್ಳುತ್ತಿದೆ -ನಿಖಿಲ್ ಕುಮಾರಸ್ವಾಮಿ
- ಜೆಡಿಎಸ್ ಧರ್ಮ ,ಜಾತಿ, ಸಮುದಾಯದ ಆಧಾರದ ಮೇಲೆ ರಾಜಕಾರಣ ಮಾಡಿಲ್ಲ

### ಜೆಡಿಎಸ್‌ಗೆ ಜಮೀರ್ ಅಹಮದ್ ಖಾನ್?

ಸಚಿವ ಜಮೀರ್ ಅಹಮದ್ ಖಾನ್ ಜೆಡಿಎಸ್ ಸೇರ್ಪಡೆ ವಿಚಾರಕ್ಕೆ ಪ್ರಕ್ರಿಯೆಸಿದ ಅವರು, ಪಕ್ಷವನ್ನ ಯಾವ ಸಂದರ್ಭದಲ್ಲಿ ಯಾವ ರೀತಿ ಬಿಟ್ಟು ಹೋದ್ರು, ಹೋಗುವಾಗ ಸಾರ್ವಜನಿಕ ವಲಯದಲ್ಲಿ ಯಾವ ಯಾವ ರೀತಿ ಚರ್ಚೆ ಮಾಡಿದ್ದಾರೆ, ಎಲ್ಲವನ್ನು ಪರಿಗಣಿಸಿ ಅಲ್ಲಿಂದ ಪಕ್ಷದ ವರಿಷ್ಠರು ಯಾರನ್ನ ಕರೆಸುಕೊಳ್ಳಬೇಕು ಯಾರನ್ನು ದೂರ ಇಡಬೇಕು ಅನ್ನುವುದನ್ನು ತೀರ್ಮಾನಿಸುತ್ತಾರೆ ಎಂದು ಅವರು ಜಿಲ್ಲೆಯ ಪ್ರತಿ ಕ್ಷೇತ್ರ , ಪ್ರತಿ ತಾಲೂಕುಗಳಿಗೂ ತೆರಳಿ ಸಂಘಟನೆ ಮಾಡುತ್ತೇನೆ

ನಿಖಿಲ್ ಕುಮಾರಸ್ವಾಮಿ ಅವರು ಹೇಳಿದರು.

ಚಿಕ್ಕಮಗಳೂರು ಜಿಲ್ಲೆಯ ಪ್ರತಿ ಕ್ಷೇತ್ರ , ಪ್ರತಿ ತಾಲ್ಲೂಕುಗಳಿಗೂ ತೆರಳಿ ಸಂಘಟನೆ ಮಾಡುತ್ತೇನೆ. ಕಡೂರು ಕ್ಷೇತ್ರದಲ್ಲಿ ನಿರಂತರವಾಗಿ ಜೆಡಿಎಸ್ ಗೆಲುವಾಗಿದೆ. ನಮ್ಮ ಪಕ್ಷಕ್ಕೆ ಜಿಲ್ಲೆಯಲ್ಲಿ ಒಂದು ಬಲವಿದೆ. ಪಕ್ಷಕ್ಕೆ ಹೊಸ ವೇಗ ನೀಡಬೇಕು ಎಂದು ಹೋರಾಟ ಮಾಡುತ್ತಿದ್ದೇವೆ ಎಂದು ನಿಖಿಲ್ ಅವರು ತಿಳಿಸಿದರು.

### ಶೀಘ್ರದಲ್ಲಿಯೇ ಶಾಶ್ವತ ಪರಿಹಾರ

ಆನೆ ದಾಳಿಗೆ ಶೀಘ್ರದಲ್ಲಿಯೇ ಶಾಶ್ವತ ಪರಿಹಾರ ಆನೆ ದಾಳಿಯಿಂದ ಆಗುತ್ತಿರುವ ತೀವ್ರ, ಹಾನಿ ಮತ್ತು ಪ್ರಾಣಾಪಾಯದ ಬಗ್ಗೆ ಕುಮಾರಣ್ಣ ಕೇಂದ್ರ ಅರಣ್ಯ ಸಚಿವ ಭೂಪೇಂದ್ರ ಯಾದವ್ ಅವರನ್ನು ಭೇಟಿ ಮಾಡಿ ಶಾಶ್ವತ ಪರಿಹಾರಕ್ಕಾಗಿ ಚರ್ಚಿಸಿದ್ದಾರೆ. ತ್ವರಿತವಾಗಿ ಕ್ರಮ ಕೈಗೊಳ್ಳಲು ಚರ್ಚಿಸುತ್ತಿದ್ದಾರೆ ಎಂದು ನಿಖಿಲ್ ಅವರು ಹೇಳಿದರು.

**ಅಲ್ಪಸಂಖ್ಯಾತರನ್ನ ಕಾಂಗ್ರೆಸ್ ವೋಟ್ ಬ್ಯಾಂಕ್ ಆಗಿಸುತ್ತಿದೆ**

ದಾವಣಗೆರೆ ಉಪಚುನಾವಣೆಯಲ್ಲಿ ಅಲ್ಪಸಂಖ್ಯಾತರ ಕಡೆಗಣನೆ ವಿಚಾರಕ್ಕೆ ಮಾತನಾಡಿದ ಅವರು,ಕಾಂಗ್ರೆಸ್‌ನಲ್ಲಿ ಅಹಿಂದಾ ನಾಯಕರ ರಾಜಕೀಯ ಭವಿಷ್ಯ ಎಲ್ಲಿಗೆ ಹೋಗುತ್ತೆ ಎಂಬ ಆತಂಕ ನನಗಿದೆ. ಅಲ್ಪಸಂಖ್ಯಾತರನ್ನ ಕಾಂಗ್ರೆಸ್ ವೋಟ್ ಬ್ಯಾಂಕ್ ಆಗಿ ಮಾತ್ರ ಉಪಯೋಗಿಸಿಕೊಳ್ಳುತ್ತಿದೆ. ಅಲ್ಪಸಂಖ್ಯಾತರನ್ನ ಕಾಂಗ್ರೆಸ್‌ನ ಯಾವತ್ತೂ ಬೆಳೆಸಿಲ್ಲ ಎಂದು ರಾಜ್ಯ ಸರ್ಕಾರದ ವಿರುದ್ಧ ಕಿಡಿಕಾರಿದರು.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 07:30 ರಿಂದ 09:00 |
| ಗುಳಿಕ ಕಾಲ | ಮಧ್ಯಾಹ್ನ | 01:30 ರಿಂದ 03:00 |
| ಯಮಗಂಡ ಕಾಲ | ಬೆಳಿಗ್ಗೆ | 10:30 ರಿಂದ 12:00 |

**ಮೇಷ** ಇಂದು, ನಿಮ್ಮ ಆರೋಗ್ಯವು ಆರೋಗ್ಯಕರವಾಗಿರುತ್ತದೆ ಎಂದು ನಿರೀಕ್ಷಿಸಲಾಗಿದೆ. ಚಂದ್ರನ ಸ್ಥಾನದಿಂದಾಗಿ, ಇಂದು ನಿಮ್ಮ ಹಣವನ್ನು ಅನಗತ್ಯ ಕೆಲಸಗಳಿಗೆ ಖರ್ಚು ಮಾಡಬಹುದು.

**ವೃಷಭ** ಇಂದು ನಿಮ್ಮ ವ್ಯಕ್ತಿತ್ವ ಒಂದು ಸುಗಂಧದಂತೆ ಕೆಲಸ ಮಾಡುತ್ತದೆ. ಇಂದು ನೀವು ನಿಮ್ಮ ಮಕ್ಕಳ ಕಾರಣದಿಂದ ಆರ್ಥಿಕ ಲಾಭವನ್ನು ಪಡೆಯುವ ಸಾಧ್ಯತೆ ಕಂಡುಬರುತ್ತಿದೆ.

**ಮಿಥುನ** ನಿಮ್ಮ ಕುಟುಂಬಕ್ಕೆ ಸೂಕ್ತ ಸಮಯ ನೀಡಿ. ನೀವು ಅವರ ಸಲುವಾಗಿ ಕಾಳಜಿ ವಹಿಸುತ್ತೀರೆಂದು ಅವರಿಗೆ ಅರ್ಥವಾಗಲಿ. ಅವರೊಂದಿಗೆ ನಿಮ್ಮ ಗುಣಮಟ್ಟದ ಸಮಯ ಕಳೆಯಿರಿ.

**ಕರ್ಕಾಟಕ** ನಿಮ್ಮ ಮಗುವಿನಂಥ ಸ್ವಭಾವ ಕಾಣಿಸಿಕೊಳ್ಳುತ್ತದೆ ಮತ್ತು ನೀವು ಒಂದು ಆಹ್ಲಾದಕಾರಿ ಮನಸ್ಥಿತಿಯಲ್ಲಿರುತ್ತೀರಿ. ಯಾರಾದರೂ ನಿಮ್ಮ ನೆರೆಹೊರೆಯವರು ನಿಮ್ಮ ಹತ್ತಿರ ಹಣ ಸಾಲ ಕೇಳಲು ಬರಬಹುದು.

**ಸಿಂಹ** ಪತ್ನಿ ನೀವು ಹುರಿದುಂಬಿಸಬಹುದು. ಇಂದು ಈ ರಾಶಿಚಕ್ರದ ಕೆಲವು ನಿರುದ್ಯೋಗಿಗಳಿಗೆ ಉದ್ಯೋಗ ಸಿಗಬಹುದು. ಇದು ಅವರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುತ್ತದೆ.

**ಕನ್ಯಾ** ಸಂತೋಷದ ದಿನಕ್ಕಾಗಿ ಮಾನಸಿಕ ಒತ್ತಡವನ್ನು ತಪ್ಪಿಸಿ. ಇತರರ ಮೇಲೆ ಪ್ರಭಾವ ಬೀರಲು ತುಂಬಾ ವೆಚ್ಚ ಮಾಡಬೇಡಿ. ಎಲ್ಲರನ್ನೂ ನಿಮ್ಮ ದೊಡ್ಡ ಪಾರ್ಟಿಗೆ ಕರೆಯಿರಿ.

**ತುಲಾ** ನಗು ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಪರಿಹಾರವಾದ್ದರಿಂದ ನಕ್ಕುಬಿಡಿ. ನಿಮ್ಮ ಜೀವನ ಸಂಗಾತಿಯೊಂದಿಗೆ ಸೇರಿ ಇಂದು ನೀವು ಭವಿಷ್ಯಕ್ಕೆ ಯಾವುದೇ ಆರ್ಥಿಕ ಯೋಜನೆಯನ್ನು ಮಾಡಬಹುದು.

**ವೃಶ್ಚಿಕ** ದೈಹಿಕ ಲಾಭಕ್ಕಾಗಿ ವಿಶೇಷವಾಗಿ ಮಾನಸಿಕ ದೃಢತೆಗಾಗಿ ಧ್ಯಾನ ಮತ್ತು ಯೋಗ ಪ್ರಾರಂಭಿಸಿ. ಲೋನ್ ತೆಗೆದುಕೊಂಡಿರುವ ಜನರಿಗೆ ಲೋನ್ ನ ಮೊತ್ತವನ್ನು ಮರುಪಾವತಿಸುವಲ್ಲಿ ತೊಂದರೆಗಳು ಉಂಟಾಗಬಹುದು.

**ಧನಸ್ಸು** ಆರೋಗ್ಯದ ಆರೈಕೆ ಮಾಡಿಕೊಳ್ಳಿ ಮತ್ತು ಎಲ್ಲವನ್ನೂ ಹೊಂದಿಸಿ. ಬಾಕಿಯಿರುವ ವಿಷಯಗಳು ರಹಸ್ಯಮಯವಾಗುತ್ತವೆ ಮತ್ತು ವೆಚ್ಚಗಳು ನಿಮ್ಮ ಮನಸ್ಸನ್ನು ಆವರಿಸಿಕೊಳ್ಳುತ್ತವೆ.

**ಮಕರ** ನಿಮ್ಮ ಕೆಟ್ಟ ಚಟಗಳು ನಿಮ್ಮನ್ನು ನಾಶಗೊಳಿಸುತ್ತವೆ. ಹಣಕ್ಕೆ ಸಂಬಂಧಿಸಿದ ಯಾವುದೇ ಸಮಸ್ಯೆಯನ್ನು ಇಂದು ಪರಿಹರಿಸಬಹುದು ಮತ್ತು ನೀವು ಹಣದಿಂದ ಲಾಭ ಪಡೆಯಬಹುದು.

**ಕುಂಭ** ನೀವು ಯೋಗ ಧ್ಯಾನದೊಂದಿಗೆ ದಿನವನ್ನು ಪ್ರಾರಂಭಿಸಬಹುದು. ಇದನ್ನು ಮಾಡುವುದರಿಂದ ನಿಮಗೆ ಪ್ರಯೋಜನಕಾರಿಯಾಗುತ್ತದೆ ಮತ್ತು ದಿನವಿಡೀ ನಿಮ್ಮಲ್ಲಿ ಶಕ್ತಿ ಉಳಿದಿರುತ್ತದೆ.

**ಮೀನ** ಬೆಂಬಲ ನೀಡುವ ಸ್ನೇಹಿತರು ನಿಮ್ಮನ್ನು ಸಂತೋಷವಾಗಿರಿಸುತ್ತಾರೆ. ಇಂದು ನಿಮ್ಮ ಕಚೇರಿಯ ಸಹೋದ್ಯೋಗಿ ನಿಮ್ಮ ಅಮೂಲ್ಯವಾದ ವಸ್ತುವನ್ನು ಕದಿಯಬಹುದು.

### ಕೋಳಿ ಸಾಕಣೆದಾರರಿಗೆ ಕೋಳಿ ಶೆಡ್ ತಂಪಾಗಿಸಬೇಕು. ಗಾಳಿ ವ್ಯವಸ್ಥೆ ಮತ್ತು ನೀರು ಸರಬರಾಜು ಇರಬೇಕು.

# ಜಿಲ್ಲೆಯಲ್ಲಿ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಹೀಟ್ ವೇವ್

• ಉದಯವಾಹಿನಿ ಬೀದರ್

ಏಪ್ರಿಲ್-ಮೇ ತಿಂಗಳಲ್ಲಿ ಬಿಸಿಗಾಳಿ ಪರಿಸ್ಥಿತಿ ಹೆಚ್ಚಾಗಿರುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆಯು ಮುನ್ನೆಚ್ಚರಿಕೆ ನೀಡಿದೆ. ಈ ಹಿನ್ನೆಲೆಯಲ್ಲಿ ಹೀಟ್ ವೇವ್ (ಶಾಖದ ಹೊಡೆತ) ಹೀಟ್ ವೇವ್ ಸ್ಟ್ರೋಕ್‌ನಿಂದಾಗಿ ಸಾರ್ವಜನಿಕರು, ಕಾರ್ಮಿಕರು, ರೈತರು, ಪ್ರಾಣಿಗಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆ ಇರುವುದರಿಂದ ಸಾರ್ವಜನಿಕರು ಮುಂಜಾಗ್ರತಾ ಕ್ರಮ ಅನುಸರಿಸಬೇಕು ಎಂದು ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ತಿಳಿಸಿದ್ದಾರೆ.

**ಶಿಕ್ಷಣ ಇಲಾಖೆ:**

- ವಿದ್ಯಾರ್ಥಿಗಳಿಗೆ/ಮಕ್ಕಳಿಗೆ ಹೊರಾಂಗಣ ಚಟುವಟಿಕೆ ತಪ್ಪಿಸಿ.
- ಶಾಲೆ/ಕಾಲೇಜುಗಳ ಆವರಣದಲ್ಲಿ ಕುಡಿಯುವ ನೀರಿನ ನಿರಂತರ ಲಭ್ಯತೆ ಖಚಿತಪಡಿಸಿಕೊಳ್ಳಬೇಕು.
- ವಿದ್ಯಾರ್ಥಿಗಳಿಗೆ/ಮಕ್ಕಳಿಗೆ ವಿಶ್ರಾಂತಿ ಪ್ರದೇಶ ಒದಗಿಸಬೇಕು.
- ಆರಂಭಿಕ ರೋಗ ಲಕ್ಷಣ ಮೇಲ್ವಿಚಾರಣೆ ಮಾಡಿ.
- ಹೆಚ್ಚಿನ ಶಾಖದ ಕಟ್ಟಡಗಳಲ್ಲಿ(ಲೋಹದ ಛಾವಣಿಗಳು) ನಡೆಸುವ ಶಾಲಾ/ಕಾಲೇಜುಗಳ ಕುರಿತು ಮುನ್ನೆಚ್ಚರಿಕೆ ತೆಗೆದುಕೊಳ್ಳಬೇಕು.

**ಆರೋಗ್ಯ ಇಲಾಖೆ:** ಜಿಲ್ಲೆಯ ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ದ್ರವಗಳು ಮತ್ತು ಐಸ್ ಪ್ಯಾಕ್ ದಾಸ್ತಾನುಗಳ ಕುರಿತು ಪರಿಶೀಲಿಸಬೇಕು. ಯಾವುದೇ ಸಮಸ್ಯೆ ಗುರುತಿಸುವಂತೆ ಸಿಬ್ಬಂದಿಯನ್ನು ಸಂವೇದನಾಶೀಲರನ್ನಾಗಿಸಬೇಕು.

ಸಾರ್ವಜನಿಕರಿಗೆ/ರೋಗಿಗಳಿಗೆ ಕಾಯುವ ಮತ್ತು ಚಿಕಿತ್ಸಾ ಪ್ರದೇಶಗಳಲ್ಲಿ ತಂಪಾಗಿಸುವಿಕೆ, ಗಾಳಿ ವ್ಯವಸ್ಥೆ ಮತ್ತು ನೀರು



ಉದಯವಾಹಿನಿ ಚಿತ್ರ

**ಕೃಷಿ- ತೋಟಗಾರಿಕೆ ಇಲಾಖೆ**

- ರೈತರು ಬಿಸಿಲಿನ ಸಮಯದಲ್ಲಿ ಹೊಲದ ಕೆಲಸ ತಪ್ಪಿಸಬೇಕು.
- ರೈತರು ತಮ್ಮ ಜಮೀನಿನಲ್ಲಿರುವ ಮೇವನ್ನು ಯಾವುದೇ ಕಾರಣಕ್ಕೂ ಸುಟ್ಟು ಹಾಕದೇ ಬಣವೇ ಹಾಕಿ ಅಥವಾ ಸುರುಳಿ ಸುತ್ತಿಟ್ಟುಕೊಂಡು (ಬೇಲಿಂಗ್) ಮೇವನ್ನು ಸಂಗ್ರಹಿಸಬೇಕು.
- ಹೊಲದಲ್ಲಿ ಕೆಲಸ ಮಾಡುತ್ತಿದ್ದರೆ ಟೋಪಿ ಅಥವಾ ಛತ್ರಿ ಬಳಸಿ, ತಲೆ, ಕುತ್ತಿಗೆ, ಮುಖ, ಕೈಕಾಲುಗಳ ಮೇಲೆ ಒದ್ದೆಯಾದ ಬಟ್ಟೆ ಬಳಸಿ.

ಸರಬರಾಜು ಬಗ್ಗೆ, ವೈದ್ಯಕೀಯ ಅಧಿಕಾರಿಗಳು ಶಾಖದ ಮಾನದಂಡಗಳನ್ನು ಮತ್ತು ಕೂಲ್ ಫಸ್ಟ್ ಪ್ರೋಟೋಕಾಲ್ ಅನ್ನು ಪಾಲನೆ ಮಾಡುತ್ತಿರುವ ಕುರಿತು ಖಚಿತಪಡಿಸಿಕೊಳ್ಳಬೇಕು.

**ಕಾರ್ಮಿಕ ಇಲಾಖೆ:** ಹೊರಾಂಗಣ ಕೆಲಸದ ಸಮಯ ಮಧ್ಯಾಹ್ನ 12 ರಿಂದ 3ರವರೆಗೆ ಇರಬೇಕು. ಕೆಲಸದ ಸಮಯ ಬೆಳಗ್ಗೆ ಮತ್ತು ಸಂಜೆ ವೇಳೆಗೆ ನಿಗದಿಪಡಿಸಬೇಕು. ಕೆಲಸದ ಸ್ಥಳದಲ್ಲಿ ತಂಪಾದ ಕುಡಿಯುವ ನೀರನ್ನು ಒದಗಿಸಬೇಕು. ಪ್ರತಿ 1 ಗಂಟೆಗೆ 10-15 ನಿಮಿಷ ವಿಶ್ರಾಂತಿ ನೀಡಬೇಕು.

**ಪಶು ಸಂಗೋಪನೆ ಇಲಾಖೆ**

- ಪ್ರಾಣಿಗಳನ್ನು ತಂಪಾಗಿಸುವಿಕೆ ಮತ್ತು ಜಲಸಂಚಯನ ಅಭ್ಯಾಸಗಳ ಕುರಿತು ಸಲಹೆ ನೀಡಬೇಕು. ಪ್ರಾಣಿಗಳಿಗೆ ನೀರು ಚಿಮುಕಿಸುವುದು, ಸ್ನಾನ ಮಾಡಿಸುವುದು.
- ಗಾಳಿಯ ಹರಿವಿನ ಸುಧಾರಣೆ ಉತ್ತೇಜಿಸಬೇಕು. ಪ್ರಾಣಿಗಳ ಶೆಡ್ ತಂಪಾಗಿಸಲು ಒದ್ದೆಯಾದ ಗೋಣಿ ಚೀಲ ಬಳಸಿ. ಗರಿಷ್ಠ ಶಾಖದ ಸಮಯದಲ್ಲಿ(ಬೆಳಗ್ಗೆ 11-4ರವರೆಗೆ) ಪ್ರಾಣಿಗಳ ಚಲನೆ ನಿರ್ಬಂಧಿಸಬೇಕು.
- ಪಶು ವೈದ್ಯಕೀಯ ಸೌಲಭ್ಯಗಳಲ್ಲಿ ಔಷಧಿಗಳು, ದ್ರವ್ಯಗಳು, ಎಲೆಕ್ಟ್ರೋಲೈಟ್‌ಗಳು ಇರುವುದನ್ನು ಖಚಿತಪಡಿಸಿಕೊಳ್ಳಬೇಕು. ಗೋಶಾಲೆಯ ಸಿದ್ಧತೆ ಖಚಿತಪಡಿಸಿಕೊಳ್ಳಬೇಕು.
- ಕೋಳಿ ಸಾಕಣೆದಾರರಿಗೆ ಕೋಳಿ ಶೆಡ್ ತಂಪಾಗಿಸಬೇಕು. ಗಾಳಿ ವ್ಯವಸ್ಥೆ ಮತ್ತು ನೀರು ಸರಬರಾಜು ಇರಬೇಕು.
- ಜಮೀನು ಉಳಿಮೆ ಮಾಡಲು ಎತ್ತುಗಳನ್ನು ಬೆಳಗ್ಗೆ ಅಥವಾ ಸಂಜೆ ವೇಳೆ ಮಾತ್ರ ಕೆಲಸಕ್ಕೆ ಉಪಯೋಗಿಸಬೇಕು.
- ಜಾನುವಾರುಗಳಿಗೆ ಮುಂಜಾಗ್ರತೆಯಾಗಿ ಸಾಂಕ್ರಾಮಿಕ ರೋಗಗಳಿಗೆ ಲಸಿಕೆಗಳನ್ನು ಕಾಲಕಾಲಕ್ಕೆ ನಿಗದಿತ ಸಮಯದಲ್ಲಿ ಹಾಕಿಸಬೇಕು.

ನೆರಳು ಇರುವ ವಿಶ್ರಾಂತಿ ಸ್ಥಳ ಕಲ್ಪಿಸಬೇಕು.

- ಹೊಲದಲ್ಲಿ ಕೆಲಸ ಮಾಡುತ್ತಿದ್ದರೆ ಟೋಪಿ ಅಥವಾ ಛತ್ರಿ ಬಳಸಿ, ತಲೆ, ಕುತ್ತಿಗೆ, ಮುಖ, ಕೈಕಾಲುಗಳ ಮೇಲೆ ಒದ್ದೆಯಾದ ಬಟ್ಟೆ ಬಳಸಿ.
- ಹೀಟ್‌ಸ್ಟ್ರೋಕ್ ಬರುವ ಲಕ್ಷಣಗಳಾದ ತಲೆಸುತ್ತು, ವಾಂತಿ, ಹೆಚ್ಚು ಬೇವರು, ದೇಹದ ತಾಪಮಾನ ಹೆಚ್ಚಳ ಈ ಲಕ್ಷಣಗಳು ಕಂಡುಬಂದರೆ ತಕ್ಷಣ ವೈದ್ಯಕೀಯ ಸಹಾಯ ಪಡೆಯಬೇಕು. ಓಆರ್ ಎಸ್ ದ್ರಾವಣ ಅಥವಾ ನೀರು ನೀಡಬೇಕು.

ಹಗುರವಾದ, ಬಿಳಿ ಅಥವಾ ಬೆಳಕು ಬಣ್ಣದ ಬಟ್ಟೆ ಧರಿಸಲು ಸಲಹೆ ನೀಡಬೇಕು. ಟೋಪಿ, ಗಮ್ಛಾ ಅಥವಾ ಗಾಗಲ್ ಬಳಸಿ. ಸನ್‌ಸ್ಕ್ರೀನ್ ಬಳಕೆಗೆ ಪ್ರೋತ್ಸಾಹಿಸಬೇಕು.

ಹೀಟ್‌ಸ್ಟ್ರೋಕ್ ಬರುವ ಲಕ್ಷಣಗಳಾದ ತಲೆಸುತ್ತು, ವಾಂತಿ, ಹೆಚ್ಚು ಬೇವರು, ದೇಹದ ತಾಪಮಾನ ಹೆಚ್ಚಳ ಈ ಲಕ್ಷಣಗಳು ಕಂಡುಬಂದರೆ ತಕ್ಷಣ ವೈದ್ಯಕೀಯ ಸಹಾಯ ಪಡೆಯಬೇಕು. ಓಆರ್‌ಎಸ್ ದ್ರಾವಣ ಅಥವಾ ನೀರು ನೀಡಬೇಕು.

**ವಿದ್ಯುತ್ ಇಲಾಖೆ:** ಉಷ್ಣತೆಯ ಅಲೆ ಸಮಯದಲ್ಲಿ ವಿದ್ಯುತ್ ಇಲಾಖೆಯ ಸಿಬ್ಬಂದಿ ಮತ್ತು ಸಾರ್ವಜನಿಕರ ಸುರಕ್ಷತೆ, ನಿರಂತರ ವಿದ್ಯುತ್ ಪೂರೈಕೆ ಖಚಿತಪಡಿಸಬೇಕು.

ಟ್ರಾನ್ಸ್‌ಫಾರ್ಮರ್‌ಗಳು, ಲೈನ್‌ಗಳು ಹೆಚ್ಚು ಬಿಸಿಯಾಗದಂತೆ ನಿರಂತರ ಪರಿಶೀಲನೆ ಮಾಡಬೇಕು. ಓವರ್‌ಲೋಡ್ ತಪ್ಪಿಸಲು ಲೋಡ್ ಮ್ಯಾನೇಜ್ ಮೆಂಟ್ ಕ್ರಮ ಕೈಗೊಳ್ಳಬೇಕು. ಅಗತ್ಯವಿದ್ದಲ್ಲಿ ಹೆಚ್ಚುವರಿ ಟ್ರಾನ್ಸ್ ಫಾರ್ಮರ್‌ಗಳನ್ನು ಸಿದ್ಧವಾಗಿಡಬೇಕು.

**ತುರ್ತು ದುರಸ್ತಿ ತಂಡಗಳನ್ನು 24×7 ಸಜ್ಜಾಗಿರಿಸಬೇಕು.** ವಿದ್ಯುತ್ ವ್ಯತ್ಯಯ ಸಂಭವಿಸಿದರೆ ತಕ್ಷಣ ಕ್ರಮ ಕೈಗೊಳ್ಳಬೇಕು. ಪ್ರಮುಖ ಸೇವೆಗಳ (ಆಸ್ಪತ್ರೆ, ನೀರು ಸರಬರಾಜು) ವಿದ್ಯುತ್ ಪೂರೈಕೆ ನಿರಂತರವಾಗಿರಬೇಕು ಎಂದು ಜಿಲ್ಲಾಧಿಕಾರಿಗಳು ಸೂಚಿಸಿದ್ದಾರೆ.

## ಏ.23ರಂದು ಸರಳವಾಗಿ ಭಗೀರಥ ಜಯಂತಿ ಆಚರಣೆಗೆ ಪೂರ್ವ ಭಾವಿಸಭೆ

• ಉದಯವಾಹಿನಿಕಾರಟಗಿ

ಕಾರಟಗಿ ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ಉಪ ತಹಶೀಲ್ದಾರ ಷಣ್ಮುಖಪ್ಪ ಅಧ್ಯಕ್ಷತೆಯಲ್ಲಿ ಭಗೀರಥ ಜಯಂತಿ ಆಚರಣೆಯ ಕುರಿತು ಪೂರ್ವಭಾವಿ ಸಭೆ ನಡೆಯಿತು.

ಸಭೆಯಲ್ಲಿ ಚರ್ಚಿಸಿದಂತೆ, 2026ನೇ ಸಾಲಿನ ಭಗೀರಥ ಜಯಂತಿಯನ್ನು ಏಪ್ರಿಲ್ 23ರಂದು ಅತ್ಯಂತ ಸರಳ ಹಾಗೂ ಅರ್ಥಪೂರ್ಣವಾಗಿ ಆಚರಿಸಲು ಸಮಾಜದ ಮುಖಂಡರು ಒಮ್ಮತದಿಂದ ತೀರ್ಮಾನ ಕೈಗೊಂಡರು. ಕಾರ್ಯಕ್ರಮವನ್ನು ಶಿಸ್ತುಬದ್ಧವಾಗಿ ಹಾಗೂ ಸಮಾಜಕ್ಕೆ ಉಪಯುಕ್ತವಾಗುವ ರೀತಿಯಲ್ಲಿ ನಡೆಸುವ ಕುರಿತು ಸಭೆಯಲ್ಲಿ ಸಾಂಘಿಕವಾಗಿ ಚರ್ಚೆ ನಡೆಯಿತು.

ಈಗಾಗಲೇ ಸರ್ಕಾರ ನೀಡಿರುವ ಆದೇಶವನ್ನು ಮತ್ತೊಮ್ಮೆ ಎಲ್ಲಾ ಇಲಾಖೆಗಳಿಗೂ ಹೊರಡಿಸಿ, ಪ್ರತಿ ಕಚೇರಿಯಲ್ಲಿ ಕಡ್ಡಾಯವಾಗಿ ಜಯಂತಿ ಆಚರಿಸಬೇಕೆಂದು ತಾಲ್ಲೂಕು ಯುವ ಘಟಕದ ಅಧ್ಯಕ್ಷರಾದ ಚಂದ್ರಶೇಖರ ಉಪ್ಪಾರ (ಯರಡೋಣ) ಅವರು ಮನವಿ ಮಾಡಿದರು.


ಉದಯವಾಹಿನಿ ಚಿತ್ರ

**ಸಭೆಯಲ್ಲಿ ಉಪಸ್ಥಿತರಿದ್ದ ಪ್ರಮುಖರು**

ತಾಲ್ಲೂಕು ಘಟಕದ ಗೌರವ ಅಧ್ಯಕ್ಷರಾದ ಅಮರೇಶಪ್ಪ ಉಪ್ಪಾರ, ಅಧ್ಯಕ್ಷರಾದ ಮೂರ್ತೆಪ್ಪ ಉಪ್ಪಾರ, ತಾಲೂಕು ಯುವ ಘಟಕದ ಅಧ್ಯಕ್ಷರಾದ ಚಂದ್ರಶೇಖರ ಉಪ್ಪಾರ (ಯರಡೋಣ), ಪ್ರಧಾನ ಕಾರ್ಯದರ್ಶಿಗಳಾದ ನಾಗರಾಜ ಎಲೆಕೂಡ್ಲಿಗಿ, ಉಪಾಧ್ಯಕ್ಷರಾದ ರಾಜಪ್ಪ ಗುಂಡೂರು ಹಾಗೂ ಸಂಘಟನಾ ಕಾರ್ಯದರ್ಶಿಗಳಾದ ಶರಣಪ್ಪ ತೆಗ್ಗಿನಮನಿ ಉಪಸ್ಥಿತರಿದ್ದರು.

ಸಭೆಯಲ್ಲಿ ಭಗೀರಥ (ಉಪ್ಪಾರ) ಸಮಾಜದ ಹಿರಿಯರು, ತಾಲ್ಲೂಕು ಯುವ ಘಟಕ ಹಾಗೂ ನಗರ ಘಟಕದ ಪದಾಧಿಕಾರಿಗಳು ಭಾಗವಹಿಸಿದ್ದರು.

ಇವರೊಂದಿಗೆ ಕಾರಟಗಿ ನಗರ ಘಟಕದ ಗೌರವ ಅಧ್ಯಕ್ಷರಾದ ಶೇಷಗಿರಿ ಕಟ್ಟಿಮನಿ, ಅಧ್ಯಕ್ಷರಾದ ಚೇತನ್ ಆರ್.ಸಿ.ಸಿ., ಉಪಾಧ್ಯಕ್ಷರಾದ ವೀರೇಶ್ ಮೋಡಿ, ಸಮಾಜದ ಮುಖಂಡರಾದ ಅಯ್ಯಪ್ಪ ಉಪ್ಪಾರ, ಶಂಕ್ರಪ್ಪ (ಬಸವೇಶ್ವರ ನಗರ), ರಮೇಶ ಉಪ್ಪಾರ ಸೇರಿದಂತೆ ಇತರೆ ಮುಖಂಡರು ಹಾಗೂ ಪದಾಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದರು.

## ಸುಸೂತ್ರ ಪರೀಕ್ಷೆ ನಡೆಸಲು ಎಡಿಸಿ ಸೂಚನೆ

• ಉದಯವಾಹಿನಿ ವಿಜಯಪುರ

2026ನೇ ಸಾಲಿನ ಸಿಇಟಿ ಪ್ರವೇಶ ಪರೀಕ್ಷೆಗಳು ಏ. 22 ರಿಂದ 24 ರವರೆಗೆ ಜಿಲ್ಲೆಯ 30 ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿದ್ದು, ಪರೀಕ್ಷಾ ಕಾರ್ಯಗಳಲ್ಲಿ ಯಾವುದೇ ಲೋಪವಾಗದಂತೆ ಸುಸೂತ್ರವಾಗಿ ನಡೆಸುವಂತೆ ಅಪರ ಜಿಲ್ಲಾಧಿಕಾರಿ ಡಾ. ಔದ್ರಾಮ ಅವರು ಸೂಚಿಸಿದರು. ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಸಿಇಟಿ ಪರೀಕ್ಷೆಗೆ ಸಂಬಂಧಿಸಿದ ಪರೀಕ್ಷಾ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪರೀಕ್ಷೆಯು 2 ಅವಧಿಯಲ್ಲಿ ನಡೆಯಲಿದ್ದು, ಜಿಲ್ಲೆಯ ಒಟ್ಟು 30 ಪರೀಕ್ಷಾ ಕೇಂದ್ರಗಳಲ್ಲಿ ಜರುಗಲಿದ್ದು,13,359 ಅಭ್ಯರ್ಥಿಗಳು ಪರೀಕ್ಷೆಗೆ ನೋಂದಣಿ ಮಾಡಿಕೊಂಡಿದ್ದಾರೆ. ಯಾವುದೇ ಸಮಸ್ಯೆ ಬಾರದ ರೀತಿಯಲ್ಲಿ ಪರೀಕ್ಷೆಗೆ ನಿಯೋಜಿತ ಅಧಿಕಾರಿಗಳು ಮುಂಜಾಗ್ರತೆಯಿಂದ ಪರೀಕ್ಷಾ ನಿಯಮಗಳನ್ವಯ ಕಾರ್ಯ ನಿರ್ವಹಿಸುವಂತೆ



ಉದಯವಾಹಿನಿ ಚಿತ್ರ

ಸೂಚನೆ ನೀಡಿದರು. ಪ್ರತಿ ಪರೀಕ್ಷಾ ಕೇಂದ್ರಕ್ಕೆ ಓರ್ವ ವೀಕ್ಷಕರಂತೆ ಒಟ್ಟು 30 ವೀಕ್ಷಕರನ್ನು ನೇಮಿಸಿದೆ. ಪರೀಕ್ಷಾ ಕೇಂದ್ರಕ್ಕೆ ನಿಯೋಜಿಸಲಾದ ವೀಕ್ಷಕರು ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕಿಂತ ಒಂದು ಗಂಟೆ ಮೊದಲು ಪರೀಕ್ಷಾ ಕೇಂದ್ರದಲ್ಲಿ ಹಾಜರಿರಬೇಕು.ಪ್ರತಿ ಪರೀಕ್ಷಾ ಕೇಂದ್ರಕ್ಕೆ ಓರ್ವ ಉಪ ಮುಖ್ಯ ಅಧೀಕ್ಷಕರು,ಓರ್ವ ಪ್ರಶ್ನೆಪತ್ರಿಕೆ ಪಾಲಕರು ಹಾಗೂ ಓರ್ವ ವಿಶೇಷ ಸ್ಥಾನಿಕ ಜಾಗೃತದಳ ಸದಸ್ಯರನ್ನು ನೇಮಿಸಿದೆ. ಪರೀಕ್ಷಾ ನಡೆಯುವ ಪರೀಕ್ಷಾ ಕೇಂದ್ರಗಳ ಸುತ್ತಲಿನ 200ಮೀ.ಪ್ರದೇಶವನ್ನು ನಿಷೇಧಿತ ಪ್ರದೇಶ ಎಂದು ಆದೇಶಿಸಲಾಗಿದೆ.

## ಎತ್ತಿನ ಬಂಡಿಯಲ್ಲಿ ಸರಕು ಸಾಗಾಣಿಕೆ ಪರಿಷ್ಕೃತ ಧರ ಒಪ್ಪಂದ

• ಉದಯವಾಹಿನಿ ಬಳ್ಳಾರಿ

ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ನೇತೃತ್ವದಲ್ಲಿ ಬಳ್ಳಾರಿ ನಗರದ ಎಪಿಎಂಸಿ ಎತ್ತಿನ ಬಂಡಿಗಳಲ್ಲಿ ಸರಕು ಸಾಗಾಣಿಕೆ ಮಾಡುವ ಕುರಿತು ಬಂಡಿ ಚಾಲಕರ ಸಂಘ, ಅಕ್ಕಿ ವರ್ತಕರ ಸಂಘ ಮತ್ತು ಬಳ್ಳಾರಿ ಕಿರಾಣಿ ಅಸೋಸಿಯೇಷನ್ ಮಧ್ಯೆ ಧರ ಪರಿಷ್ಕರಣೆ ಮಾಡಿ, ಒಪ್ಪಂದ ಮಾಡಿಕೊಳ್ಳಲಾಗಿದೆ.

ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷರಾದ ಅವ್ವಾರು ಮಂಜುನಾಥ್ ಹಾಗೂ ಗೌರವ ಕಾರ್ಯದರ್ಶಿಗಳಾದ ಕೆ.ಸಿ. ಸುರೇಶಬಾಬು ಅವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ, ಬಂಡಿ ಚಾಲಕರ ಸಂಘದ ಪ್ರತಿನಿಧಿಗಳಾಗಿ ಬಿ. ರಾಜೇಶ್ ಮತ್ತು ನೂರ್, ಅಕ್ಕಿ ವರ್ತಕರ ಸಂಘದ ಅಧ್ಯಕ್ಷರಾದ ಜಿ. ಹನುಮೇಶ್, ಕಾರ್ಯದರ್ಶಿಗಳಾದ ಆರ್. ರಮೇಶ್ ಮತ್ತು ಬಳ್ಳಾರಿ ಕಿರಾಣಿ ಅಸೋಸಿಯೇಷನ್ನ ಪ್ರತಿನಿಧಿಯಾಗಿ ಬೆಲ್ಲಂಕೊಂಡ ವೀರಾಂಜಿನೇಯಲು ಅವರು ನೂತನ ಧರಪಟ್ಟಿ ಕರಾರು ಒಪ್ಪಂದಕ್ಕೆ ಸಹಿ ಮಾಡಿದರು.

## ಕಬ್ಬು ಬೆಳಗಾರರ ಹಣ ಪಾವತಿಸದಿದ್ದರೇ ಉಗ್ರ ಹೋರಾಟ: ಮಲ್ಲಿಕಾರ್ಜುನ ಸ್ವಾಮಿ

• ಉದಯವಾಹಿನಿ ಭಾಲ್ಕಿ

ಜಿಲ್ಲೆಯ ಕಬ್ಬು ಬೆಳೆಗಾರರು ಗೌರಿ ಸಕ್ಕರೆ ಕಾರ್ಖಾನೆಗೆ ಕಬ್ಬು ಸಾಗಿಸಿ ನಾಲ್ಕು ತಿಂಗಳು ಪೂರ್ಣಗೊಂಡಿವೆ. ಆದರೆ ಕಬ್ಬು ಪೂರೈಸಿದ ರೈತರ ಖಾತೆಗೆ ಇದು ವರೆಗೂ ಬಾಕಿ ಹಣ ಪಾವತಿಸಿಲ್ಲ, ಶೀಘ್ರವೇ ಹಣ ನೀಡದಿದ್ದರೇ ರೈತರೊಂದಿಗೆ ಸೇರಿ ಕಾರ್ಖಾನೆಗೆ ಬೀಗ ಜಡಿದು ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದು ರೈತ ಸಂಘದ ಜಿಲ್ಲಾಧ್ಯಕ್ಷ ಮಲ್ಲಿಕಾರ್ಜುನ ಸ್ವಾಮಿ ಎಚ್ಚರಿಕೆ ನೀಡಿದ್ದಾರೆ. ತಾಲ್ಲೂಕಿನ ಬಾಜೋಳಗಾ ಕ್ರಾಸ್ ಸಮೀಪದ ಗೌರಿ ಸಕ್ಕರೆ ಕಾರ್ಖಾನೆಗೆ ರೈತರೊಂದಿಗೆ ಭೇಟಿ ನೀಡಿ ಸಾಂಕೇತಿಕ ಧರಣಿ ನಡೆಸಿ ಅವರು ಮಾತನಾಡಿದರು.

ಸಕ್ಕರೆ ಕಾರ್ಖಾನೆ ಆಡಳಿತ ಮಂಡಳಿ ಅವರು ಕಬ್ಬು ಸಾಗಿಸಿದ ರೈತರಿಗೆ ಇದು ವರೆಗೂ ಬಾಕಿ ಹಣ ನೀಡಿಲ್ಲ, ಇದರಿಂದ ರೈತರು ಸಂಕಷ್ಟದಲ್ಲಿದ್ದಾರೆ. ಕೂಡಲೇ ನಿಗದಿ ಪಡಿಸಿದ ಬಾಕಿ ಹಣ ನೀಡಬೇಕು. ಸಧ್ಯದಲ್ಲೇ ಕಬ್ಬು ಬೆಳಗಾರರ ಖಾತೆಗೆ ಬಾಕಿ ಉಳಿದಿರುವ ಹಣ ಜಮೆಮಾಡುವುದಾಗಿ ಭರವಸೆ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಒಂದು ದಿನದ ಸಾಂಕೇತಿಕ ಧರಣಿ ಕೈಬಿಡುತ್ತಿದ್ದೇವೆ. ವಿಳಂಬ ಮಾಡಿದರೇ ಮುಂದಿನ ವಾರ ಉಗ್ರ ಹೋರಾಟ ಮಾಡಲಾಗುವುದು ಎಂದು ತಿಳಿಸಿದರು.

## ವಸತಿ, ಪಿಂಚಣಿ ಸೌಲಭ್ಯ ಕಲ್ಪಿಸಿ

• ಉದಯವಾಹಿನಿ ರೋಣ

ಸರ್ಕಾರಿ ಸೌಲಭ್ಯಗಳನ್ನು ವಿತರಿಸುವ ಸಂದರ್ಭದಲ್ಲಿ ವಿಶೇಷ ಪ್ರಕರಣವೆಂದು ಪರಿಗಣಿಸಿ ಮಾಜಿ ದೇವದಾಸಿಯರಿಗೆ ಆದ್ಯತೆ ನೀಡುವಂತೆ ಆಗ್ರಹಿಸಿ ವಿಮುಕ್ತ ದೇವದಾಸಿ ಮಹಿಳಾ ವೇದಿಕೆ ವತಿಯಿಂದ ರೋಣ ತಹಶೀಲ್ದಾರ್ ಹಾಗೂ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗೆ ಮನವಿ ಸಲ್ಲಿಸಲಾಯಿತು. ಈ ವೇಳೆ ಮಾತನಾಡಿದ ವಿಮುಕ್ತ ದೇವದಾಸಿ ಮಹಿಳಾ ವೇದಿಕೆಯ ಜಿಲ್ಲಾ ಘಟಕದ ಅಧ್ಯಕ್ಷ ಅಭಿಷೇಕ ಕೊಪ್ಪದ, ದಶಕಗಳಿಂದ ಶೋಷಣೆಗೆ ಒಳಗಾಗಿರುವ ದೇವದಾಸಿಯರು ಇಂದಿಗೂ ಮುಖ್ಯವಾಹಿನಿಗೆ ಬರಲು ಸಾಧ್ಯವಾಗಿಲ್ಲ, ಕಡುಬಡತನ, ಸಾಮಾಜಿಕ ಅಸಮಾನತೆ ನಡುವೆ ಬದುಕುತ್ತಿದ್ದಾರೆ. ಮಾಜಿ ದೇವದಾಸಿಯರ ಶ್ರೇಯೋಭಿವೃದ್ಧಿಗಾಗಿ ಸರ್ಕಾರವು ವಸತಿ, ಪಡಿತರ ಚೀಟಿ, ಸಾಮಾಜಿಕ ಪಿಂಚಣಿ ಸೌಲಭ್ಯಗಳನ್ನು ತಕ್ಷಣ ನೀಡಬೇಕು ಎಂದು ಒತ್ತಾಯಿಸಿದರು.

ಸರ್ಕಾರದ ವಿವಿಧ ನಿಗಮಗಳ ಮೂಲಕ ಸ್ವಯಂ ಉದ್ಯೋಗ ಕೈಗೊಳ್ಳಲು ನೀಡುವ ಸಾಲ ಸೌಲಭ್ಯದಲ್ಲಿ ಮಾಜಿ ದೇವದಾಸಿಯರ ಮಕ್ಕಳಿಗೆ ಆದ್ಯತೆ ನೀಡಬೇಕು. ಜಮೀನು ರಹಿತರಿಗೆ ಭೂಮಿಯ ಹಕ್ಕುಪತ್ರ ವಿತರಿಸಬೇಕು ಎಂದು ಆಗ್ರಹಿಸಿದರು.

## ಶ್ರೀ ಪಾಂಡುರಂಗ ರುಕ್ಕುಮಾಯಿಯವರ 89ನೇ ವರ್ಷದ ಅದ್ದೂರಿ ದಿಂಡಿ ಮಹೋತ್ಸವ

• ಬಾಣಾವರ ಉಮೇಶ್

• ಉದಯವಾಹಿನಿ ಅರಸೀಕೆರೆ

ಹಾಸನ ಜಿಲ್ಲೆ ಅರಸೀಕೆರೆ ನಗರದಲ್ಲಿರುವ ಶ್ರೀ ಪಾಂಡುರಂಗ ರುಕ್ಕುಮಾಯಿಯವರ 89ನೇ ವರ್ಷದ ಅದ್ದೂರಿ ದಿಂಡಿ ಮಹೋತ್ಸವ ಸಮಾರಂಭವನ್ನು ದಿನಾಂಕ 20.04 2026 ಅಂದರೆ ಸೋಮವಾರ ಮತ್ತು 21ನೇ ತಾರೀಕು ಮಂಗಳವಾರ ನಡೆಯಲಿದೆ ಎಂದು ಅರಸೀಕೆರೆ ಭಾವಸಾರ ಕ್ಷತ್ರಿಯ ಸಮಾಜದ ಅಧ್ಯಕ್ಷರಾದ ನಾಜರೆ ನರೇಶ್ ತಿಳಿಸಿದ್ದಾರೆ. ಸೋಮವಾರ ಸಂಜೆ ಆರಕ್ಕೆ ಶ್ರೀ ಸಂತ ಸಾಮ್ರಾಟ ಜ್ಞಾನದೇವರ


ಉದಯವಾಹಿನಿ ಚಿತ್ರ

ವಿರಚಿತ ಶ್ರೀ ಜ್ಞಾನೇಶ್ವರಿ ಗ್ರಂಥದ ಪೋತಿಸ್ಥಾಪನೆ ನಂತರ ಏಳು ಗಂಟೆಯಿಂದ ಕೀರ್ತನೆ ಖ್ಯಾತ ಕೀರ್ತನೆಕಾರರಾದ ಬಂಕಾಪುರದ ಶ್ರೀ ಹ ಭ್ ಪ ಭಾನು ದಾಸ್ ಸರ್ವದೇ . ನಂತರ ಮಂಗಳವಾರ ಬೆಳಗ್ಗೆ 5 ರಿಂದ 6:30ವರೆಗೆ ಕಾಕಡಾರತಿ ಬೆಳಗ್ಗೆ 9:00 ರಿಂದ 11 ಗಂಟೆಯವರೆಗೆ ಶ್ರೀ ಪಂಡರಿ ಸಾಂಪ್ರದಾಯಿಕ ಭಜನೆ ಹಾಗೂ ಕೀರ್ತನೆ ನಂತರ ಶ್ರೀ ಪಾಂಡುರಂಗ ರುಕ್ಕುಮಾಯಿ ಅವರಿಗೆ ಮಹಾಮಂಗಳಾರತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಮತ್ತು ಮಂಗಳವಾರ ಸಂಜೆ ಐದು ಮೂವತ್ತರಿಂದ ಶ್ರೀ ಪಾಂಡುರಂಗ ರುಕ್ಕು ಮಾಯಿ ಅವರ ಪಂಡರಿ ಭಜನೆಯೊಂದಿಗೆ ಅರಸೀಕೆರೆ ನಗರದ ರಾಜಬೀದಿಗಳಲ್ಲಿ ರಾತ್ರಿ 7:00ಗೆ ಉತ್ಸವ ನಂತರ ರಾತ್ರಿ 10ಗಂಟೆಗೆ ಶ್ರೀ ಪಾಂಡುರಂಗ ರುಕ್ಕು ಮಾಯಿ ಅವರ ಶಯನೋತ್ಸವ ಸಮಾರಂಭ ಅದ್ದೂರಿಯಾಗಿ ನಡೆಯಲಿದೆ ಈ ಸಮಾರಂಭದಲ್ಲಿ ಖ್ಯಾತ ವೀಣೆ ಕರಿ ಹ ಭ ಪ ಡಿ ಮಂಜುನಾಥ ರಾವ್ ಭಾರಟಿಕೆ. ವಾರ್ ಕರಿಗಳಾದ ಆ ಬ ಪ ಎಸ್ ಕಿರಣ್ ಕಾಂಗೋಕರ್. ಹಾಗೂ ಪ್ರಧಾನ ಅರ್ಚಕರಾದ ವೇದಬ್ರಹ್ಮ ಶ್ರೀ ನಾಗರಾಜ್ ಈ ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಎಂದು ಸಮಾಜದ ಅಧ್ಯಕ್ಷರಾದ ನಾಜರೇ ನರೇಶ್ ತಿಳಿಸಿದ್ದಾರೆ



ಉದಯವಾಹಿನಿ ಚಿತ್ರ

**ಸಮಾರಂಭಕ್ಕೆ ಶಾಸಕರಿಗೆ ಆಹ್ವಾನ**

ಅರಸೀಕೆರೆ ಕ್ಷೇತ್ರದ ಶಾಸಕ ಹಾಗೂ ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷರಾದ. ಕೆ ಎಂ ಶಿವಲಿಂಗೇಗೌಡ ಮತ್ತು ಅರಸೀಕೆರೆ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷರಾದ ಬಿಎಸ್ ಅರುಣ್ ಕುಮಾರ್ ತಾಲ್ಲೂಕ್ ಗ್ಯಾರಂಟಿ ಸಮಿತಿ ಅಧ್ಯಕ್ಷರಾದ ಗಿಜಿ ಹೇಳಿ ಧರ್ಮ ಶೇಖರ್ ಅರಸೀಕೆರೆ ನಗರಸಭೆ ಮಾಜಿ ಅಧ್ಯಕ್ಷರಾದ ಎಮ್ ಸಮೀವುಲ್ಲಾ ನಗರಸಭೆ ಮಾಜಿ ಉಪಾಧ್ಯಕ್ಷರಾದ ಎಮ್ ಮನೋಹರ್ ಮೇಸ್ತ್ರಿ ಸೇರಿದಂತೆ ಹಲವಾರು ಗಣ್ಯರು ಈ ಸಮಾರಂಭದಲ್ಲಿ ಭಾಗಿಯಾಗಲಿದ್ದಾರೆ ಎಂದು ಸಮಾಜದ ಮುಖಂಡರು ತಿಳಿಸಿದ್ದಾರೆ.

## ಬೆಳೆ ಕಟಾವು ಅಡ್ಡಿಪಡಿಸಿದರೆ ಎಫ್‌ಐಆರ್: ಡಿಸಿ ಎಚ್ಚರಿಕೆ

• ಉದಯವಾಹಿನಿ ಕಲಬುರಗಿ

ಜಿಲ್ಲೆಯಲ್ಲಿ ಬೆಳೆ ಕಟಾವು ಪ್ರಯೋಗಗಳಿಗೆ ಅಡ್ಡಿಪಡಿಸುವ ಅಥವಾ ಅಧಿಕಾರಿಗಳ ಮೇಲೆ ಒತ್ತಡ ಹೇರುವ ಮಧ್ಯವರ್ತಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಿ ಎಂದು ಜಿಲ್ಲಾಧಿಕಾರಿ ಬಿ. ಫೌಜಿಯಾ ತರುನ್ನಮ್ ಅವರು ಹೇಳಿದರು.

ನಗರದಲ್ಲಿ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಪ್ರಥಮ ತ್ರೈಮಾಸಿಕ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಬೆಳೆ ಕಟಾವು ಪ್ರಯೋಗಗಳ ವೇಳೆ ವಿಮಾ ಸೌಲಭ್ಯದ ದುರುಪಯೋಗಕ್ಕಾಗಿ ಅಧಿಕಾರಿಗಳ ಮೇಲೆ ಪ್ರಭಾವ ಬೀರಲು ಯತ್ನಿಸುವವರ ವಿರುದ್ಧ ತಕ್ಷಣವೇ ಎಫ್‌ಐಆರ್ ದಾಖಲಿಸಬೇಕು.

ಅತಿಯಾದ ಒತ್ತಡವಿರುವ ಪ್ರದೇಶಗಳಲ್ಲಿ ಪೊಲೀಸ್ ರಕ್ಷಣೆ ಪಡೆದು ಪಾರದರ್ಶಕವಾಗಿ ಕಟಾವು ಪ್ರಕ್ರಿಯೆ ನಡೆಸಬೇಕು ಎಂದು ಅಧಿಕಾರಿಗಳಿಗೆ ಆದೇಶ ನೀಡಿದರು.



ಇದೇ ವೇಳೆ ಜನನ -ಮರಣ ನೋಂದಣಿ ಪ್ರಕ್ರಿಯೆಯಲ್ಲಿನ ಲೋಪಗಳ ಬಗ್ಗೆ ಜಿಲ್ಲಾಧಿಕಾರಿಗಳು ಆಕ್ರೋಶ ವ್ಯಕ್ತಪಡಿಸಿದರು. E-Janama ಪೋರ್ಟಲ್‌ನಲ್ಲಿ ಅಸ್ಪಷ್ಟ ದಾಖಲೆಗಳನ್ನು ಅಪ್‌ಲೋಡ್ ಮಾಡುತ್ತಿರುವುದು ಹಾಗೂ ಪ್ರಮಾಣಪತ್ರ ವಿತರಣೆಯಲ್ಲಿ 30 ದಿನಗಳಿಗಿಂತ ಹೆಚ್ಚು ವಿಳಂಬ ಮಾಡುತ್ತಿರುವುದು ಅಕ್ಷಮ್ಯ. ಇಂತಹ ಪ್ರಕರಣಗಳಲ್ಲಿ ಕರ್ತವ್ಯ ಲೋಪ ಎಸಗುವ ನೊಂದಣಾಧಿಕಾರಿ ಹಾಗೂ ಉಪ ನೊಂದಣಾಧಿಕಾರಿ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಿದರು. ಜನನ ಮರಣ ನೋಂದಣಿ ಪ್ರಕ್ರಿಯೆಯಲ್ಲಿ ಆಗುವಂತಹ ತಾಂತ್ರಿಕ ಸಮಸ್ಯೆಗಳಿಗೆ ಕುರಿತು ಹಾಗೂ ಸದರಿ ಸಮಸ್ಯೆಗಳನ್ನು ಸರಿಪಡಿಸಲು ಅಧಿಕಾರಿಗಳಿಗೆ ವಿಶೇಷ ಕಾರ್ಯಾಗಾರ ನಡೆಸುವಂತೆ ಯಾಕೆಂದರೆ ಹೋಗ್ತದೆ ಜಿಲ್ಲಾ ಸಂಖ್ಯಾ ಸಂಗ್ರಹಾಧಿಕಾರಿಗಳಿಗೆ ಸೂಚಿಸಲಾಯಿತು. ಸಭೆಗೆ ಗೈರಾದ ಅಧಿಕಾರಿಗಳು, ಮುಂದಿನ ಸಭೆಗೆ ಕಡ್ಡಾಯವಾಗಿ ಹಾಜರಿರಲು ತಾಕೀತು ಮಾಡಿದರು.

## ಬಿಸಿಲಿನ ದೆಗೆಯಲ್ಲಿ ಬಾರದ ಶುದ್ಧ ಕುಡಿಯುವ ನೀರಿನ ಘಟಕ

• ಉದಯವಾಹಿನಿ ಬಳ್ಳಾರಿ

ಜಿಲ್ಲೆ ಸಂಡೂರು ತಾಲ್ಲೂಕು ತೋರಣಗಲ್ಲು ಗ್ರಾಮದ ಒಂದನೇ ವಾರ್ಡ್ ಜನತಾ ಕಾಲೋನಿಯಲ್ಲಿ ಆಸ್ಪತ್ರೆಯಲ್ಲಿರುವ ಕುಡಿಯುವ ನೀರಿನ ಫಿಲ್ಟರ್ ನೀರು ಘಟಕ ಆರು ತಿಂಗಳ ಹಿಂದಗಡೆ ಕೆಟ್ಟು ಹೋಗಿದೆ ಎಂದು. ದಿನಾಂಕ 26.01.2026 ರಂದು ತೋರಣಗಲ್ಲು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ಪೀಲ್ಟರ್ ನೀರು ಘಟಕ ಕೆಟ್ಟು ಹೋಗಿದೆ ಎಂದು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ಗ್ರಾಮ ಪಂಚಾಯಿತಿ ಮುಂದೆ ಪ್ರತಿಭಟನೆ ಮಾಡಿ ಮನವಿ ಪತ್ರ ಸಾರ್ವಜನಿಕರು ನೀಡಿದ್ದರು. ಆದನಂತರ ಮೋಟಾರ್ ಗಳು ಕೆಟ್ಟು ಹೋಗಿದೆ ಎಂದು ಮೋಟರುಗಳನ್ನು ಅಳವಡಿಸಿ ಹೊಸ


ಉದಯವಾಹಿನಿ ಚಿತ್ರ

ಫಿಲ್ಟರ್ ಮತ್ತು ಸಾಮಾನುಗಳನ್ನು ಹಾಕಿದ್ದೇವೆ ಎಂದು ಲಕ್ಷಗಟ್ಟಲೆ ಬಿಲ್ ಪಾಸ್ ಮಾಡಿರುವ ವಂಚನೆಯಾಗಿತ್ತಿದ್ದು ಮತ್ತು ಸರಿಯಾಗಿ ಫಿಲ್ಟರ್ ಆಗದೆ ನೀರು ಬರುತ್ತಿದ್ದು.ಇದನ್ನು ಸಂಪೂರ್ಣವಾಗಿ ತನಿಖೆ ಒಳಪಡಿಸಬೇಕು ಎಂದು ನಿವಾಸಿಗಳು ಎಚ್ಚರಿಕೆ ನೀಡಿದ್ದಾರೆ.

# ಕರ್ನಾಟಕ ವಿದ್ಯುತ್ ಕಂಪನಿ ಎಸ್ಕಾಂಗಳಿಗೆ ಸಾಲದ ಹೊರೆ

### • ಏಪ್ರಿಲ್ 1ರಿಂದಲೆ ಜಾರಿಗೆ ಬರುವಂತೆ ವಿದ್ಯುತ್ ದರ ಹೆಚ್ಚಳಕ್ಕೆ ಅನುಮೋದನೆ ನೀಡಿದೆ

• ಉದಯವಾಹಿನಿ ಶಿವಮೊಗ್ಗ

ರಾಜ್ಯದೆಲ್ಲೆಡೆ ವಿದ್ಯುತ್ ಗ್ರಾಹಕರು 'ಗೃಹಜ್ಯೋತಿ' ಉಚಿತ ವಿದ್ಯುತ್ ಸಂಭ್ರಮದಲ್ಲಿದ್ದರೆ ವಾರ್ಷಿಕ ಸಾವಿರಾರು ಕೋಟಿ ರೂ. ವಿದ್ಯುತ್ ಪೂರೈಕೆ ಮಾಡುವ ರಾಜ್ಯದ ಐದು ಎಸ್ಕಾಂಗಳು ಸಾಲದ ಸುಳಿಯಲ್ಲಿ ಸಿಲುಕಿವೆ.

ಎಸ್ಕಾಂಗಳ ಆರ್ಥಿಕ ಹೊರೆ ತಪ್ಪಿಸುವ ಸಲುವಾಗಿ ಕೆಇಆರ್‌ಸಿಯು ಏಪ್ರಿಲ್ 1ರಿಂದಲೆ ಜಾರಿಗೆ ಬರುವಂತೆ ವಿದ್ಯುತ್ ದರ ಹೆಚ್ಚಳಕ್ಕೆ ಅನುಮೋದನೆ ನೀಡಿದೆ. ಕರ್ನಾಟಕ ವಿದ್ಯುತ್ ನಿಗಮ(ಕೆಪಿಸಿಎಲ್)ವು ವಾರ್ಷಿಕ ಸಾವಿರಾರು ಕೋಟಿ ರೂ. ಮೌಲ್ಯದ ವಿದ್ಯುತ್ ಉತ್ಪಾದಿಸಿದರೆ, ಇದೇ ವಿದ್ಯುತ್ತನ್ನು ರಾಜ್ಯದ 5 ಎಸ್ಕಾಂಗಳು ಗ್ರಾಹಕರಿಗೆ ತಲುಪಿಸುತ್ತವೆ. ಆದರೆ, ಸರಿಯಾದ ಸಮಯಕ್ಕೆ ಆದಾಯ ಬರದೆ ಇವುಗಳು ನಷ್ಟದಲ್ಲೇ ಸಾಗುತ್ತಿವೆ. ನಷ್ಟವನ್ನು ಸರಿದೂಗಿಸಲು ಎಸ್ಕಾಂಗಳು ವಿವಿಧ ಹಣಕಾಸು ಸಂಸ್ಥೆಗಳಿಂದ ಬೃಹತ್ ಪ್ರಮಾಣದ ದೀರ್ಘಾವಧಿ ಸಾಲ ಮಾಡಿವೆ. ಎಲ್ಲಾ ಎಸ್ಕಾಂಗಳ ಸಾಲದ ಮೊತ್ತ ಫೆಬ್ರವರಿ ಅಂತ್ಯಕ್ಕೆ 43 ಸಾವಿರ ಕೋಟಿ ರೂ. ತಲುಪಿದೆ.

**ಇಲಾಖೆಗಳಿಂದ ಬಾಕಿ:** ಇದರಲ್ಲಿ ಬೆಸ್ಕಾಂ ಸಾಲದ ಮೊತ್ತವೇ 18 ಸಾವಿರ ಕೋಟಿ ರೂ . ಇದೆ. ಅಗತ್ಯಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ವಿದ್ಯುತ್


ಉದಯವಾಹಿನಿ ಚಿತ್ರ

- ಎಸ್ಕಾಂಗಳ ಆರ್ಥಿಕ ಹೊರೆ ತಪ್ಪಿಸುವ ಸಲುವಾಗಿ ಕೆಇಆರ್‌ಸಿಯು
- ಎಲ್ಲಾ ಎಸ್ಕಾಂಗಳ ಸಾಲದ ಮೊತ್ತ ಫೆಬ್ರವರಿ ಅಂತ್ಯಕ್ಕೆ 43 ಸಾವಿರ ಕೋಟಿ ರೂ. ತಲುಪಿದೆ.
- ಗ್ರಹಜ್ಯೋತಿ ಯೋಜನೆಯಿಂದ ಜನಸಾಮಾನ್ಯರ ಮೇಲಿನ ಹೊರೆ ಕಡಿಮೆಯಾದರೂ ಎಸ್ಕಾಂಗಳ ನಷ್ಟ ತಪ್ಪಿಸಲು ಸಾಧ್ಯವಾಗಿಲ್ಲ.

- ಎಸ್ಕಾಂಗಳಿಗೆ ಬರಬೇಕಾದ ಒಟ್ಟು ಬಾಕಿ- 12,500 ಕೋಟಿ ರೂ.
- ನಗರಾಭಿವೃದ್ಧಿ ಇಲಾಖೆ- 3,923 ಕೋಟಿ ರೂ.
- ಗ್ರಾಮೀಣಾಭಿವೃದ್ಧಿ ಇಲಾಖೆ- 5,626 ಕೋಟಿ ರೂ.
- ಇತರ ಇಲಾಖೆಗಳು- 2913 ಕೋಟಿ ರೂ.
- ಕೆಪಿಸಿಎಲ್‌ಗೆ ಎಸ್ಕಾಂಗಳ ಬಾಕಿ- 8,755 ಕೋಟಿ ರೂ.

ಖರೀದಿ ಮಾಡುತ್ತಿರುವುದು ಮತ್ತು ಮೂಲಸೌಕರ್ಯ ಅಭಿವೃದ್ಧಿಗಾಗಿ ಬ್ಯಾಂಕ್‌ಗಳಿಂದ ಪಡೆದ ಸಾಲವನ್ನು ನಿಯಮಿತವಾಗಿ ಪಾವತಿಸದೆ ಬಡ್ಡಿ ಮಿತಿಮೀರುತ್ತಿರುವುದು ಸಾಲದ ಮೊತ್ತ ಹೆಚ್ಚಳಕ್ಕೆ ಕಾರಣವಾಗಿದೆ. ಮತ್ತೊಂದು ಕಡೆ ರಾಜ್ಯ ಸರಕಾರದ ವಿವಿಧ ಇಲಾಖೆಗಳೇ 12,500 ಕೋಟಿ ರೂ. ಬಾಕಿ ಉಳಿಸಿಕೊಂಡಿವೆ.

ರಾಜ್ಯ ಸರಕಾರದ ಮಹತ್ವಾಕಾಂಕ್ಷಿ ಗೃಹ ಜ್ಯೋತಿ ಯೋಜನೆಯಡಿ ಗ್ರಾಹಕರಿಗೆ ನೀಡಲಾದ ಉಚಿತ ವಿದ್ಯುತ್‌ನ ಸಹಾಯಧನ 2023ನೇ ಆಗಸ್ಟ್‌ನಿಂದ 2026ನೇ ಮಾರ್ಚ್‌ವರೆಗಿನ 25,076 ಕೋಟಿ ರೂ.ಗಳನ್ನು ಸರಕಾರ ಪಾವತಿಸಿದೆ. ಈ ಯೋಜನೆಯಿಂದ ಜನಸಾಮಾನ್ಯರ ಮೇಲಿನ ಹೊರೆ ಕಡಿಮೆಯಾದರೂ ಎಸ್ಕಾಂಗಳ ನಷ್ಟತಪ್ಪಿಸಲು ಸಾಧ್ಯವಾಗಿಲ್ಲ.

**ಎಸ್ಕಾಂಗಳ ಮೇಲೆ ಸಾಲದ ಹೊರೆ**

**ಕೆಪಿಸಿಎಲ್‌ಗೂ ಬಾಕಿ:** ವಿದ್ಯುತ್ ಬಾಕಿ ಪಾವತಿಯಾಗದ ಕಾರಣದಿಂದಾಗಿ ಎಸ್ಕಾಂಗಳೂ ಕೆಪಿಸಿಎಲ್‌ಗೆ ನಿಯಮಿತವಾಗಿ ಪಾವತಿಸಬೇಕಾದ ವಿದ್ಯುತ್ ಬಿಲ್ಲನ್ನು ಪಾವತಿಸದೆ ಜನವರಿ ಅಂತ್ಯದವರೆಗೆ 8,755 ಕೋಟಿ ರೂ. ಬಾಕಿ ಉಳಿಸಿಕೊಂಡಿವೆ. ಇದರಲ್ಲಿ ಲೇಟ್ ಪೇಮೆಂಟ್ ಸರ್ಚಾರ್ಜ್ (ಎಲ್‌ಪಿಎಸ್) ಮೊತ್ತವೇ 5,277 ಕೋಟಿ ರೂ.ಗೆ ಏರಿಕೆಯಾಗಿದೆ.

> ಎಸ್ಕಾಂಗಳು ಸರಕಾರದ ಅಂಗ ಸಂಸ್ಥೆಗಳಾಗಿರುವುದರಿಂದ ಇಲ್ಲಿ ಲಾಭ, ನಷ್ಟದ ಪ್ರಶ್ನೆ ಬರುವುದಿಲ್ಲ. ಅವುಗಳ ಆರ್ಥಿಕ ಪುನಶ್ಚೇತನಕ್ಕಾಗಿ ನಿಯಮಿತವಾಗಿ ಸರಕಾರದಿಂದ ಸಹಾಯಧನ, ಗೃಹಜ್ಯೋತಿ ಸಹಾಯಧನವನ್ನೂ ಬಿಡುಗಡೆ ಮಾಡಲಾಗುತ್ತಿದೆ.
> -ಕೆ.ಜೆ.ಜಾರ್ಜ್, ಇಂಧನ ಸಚಿವ.

# ತಮಿಳುನಾಡು ಚುನಾವಣೆ: ನಟ ಪ್ರಕಾಶ್ ರಾಜ್ ವಿರುದ್ಧ ಖುಷ್ಬು ಸುಂದರ್ ಗರಂ

**ಚೆನ್ನೈ:** ಮಧುರೈ ಸೆಂಟ್ರಲ್ ವಿಧಾನಸಭಾ ಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸುತ್ತಿರುವ ತಮ್ಮ ಪತಿಯ ರಾಜಕೀಯ ಅರ್ಹತೆ ಪ್ರಶ್ನಿಸಿದ ನಟ ಪ್ರಕಾಶ್ ರಾಜ್ ವಿರುದ್ಧ ನಟಿ, ಬಿಜೆಪಿ ನಾಯಕಿ ಖುಷ್ಬು ಸುಂದರ್ ವಾಗ್ದಾಳಿ ನಡೆಸಿದ್ದಾರೆ. ಇತರರ ಅರ್ಹತೆಗಳನ್ನು ಪ್ರಶ್ನಿಸುವ ಮೊದಲು, ಅವರು (ಪ್ರಕಾಶ್ ರಾಜ್) ಚುನಾವಣೆಯಲ್ಲಿ ನಿಂತು ಠೇವಣಿ ಉಳಿಸಿಕೊಳ್ಳಲು ವಿಫಲರಾದ ಬಗ್ಗೆ ಒಮ್ಮೆ ಗಮನಕೊಡಲಿ ಎಂದು ಲೇವಡಿ ಮಾಡಿದ್ದಾರೆ. ಸುಂದರ್ ಸಿ. ಅವರು ಎಐಎಡಿಎಂಕೆಯ ಮಿತ್ರಪಕ್ಷ ನ್ಯೂ ಜಸ್ಟಿಸ್ ಪಾರ್ಟಿಯಿಂದ ಕಣಕ್ಕಿಳಿದಿದ್ದಾರೆ.

ಪ್ರಕಾಶ್ ರಾಜ್ ಹೇಳಿದ್ದೇನು? ಅದೇ ಕ್ಷೇತ್ರದಿಂದ ಸ್ಪರ್ಧಿಸುತ್ತಿರುವ ಡಿಎಂಕೆ ಅಭ್ಯರ್ಥಿ ಪಳನಿವೇಲ್ ತ್ಯಾಗರಾಜನ್ ಪರ ಪ್ರಚಾರ ನಡೆಸಿದ ಪ್ರಕಾಶ್ ರಾಜ್ ಅವರು, ಖುಷ್ಬು ಅವರ ಪತಿ ಸುಂದರ್ ಸಿ. ಅವರಿಗೆ ಟಿಕೆಟ್ ಸಿಕ್ಕಿರುವುದಕ್ಕೆ ಅಚ್ಚರಿ ವ್ಯಕ್ತಪಡಿಸಿದ್ದರು. ಅಭ್ಯರ್ಥಿಯಾಗಿ ಘೋಷಿಸುವ ಮೂರು ದಿನಗಳ ಮೊದಲು ಸುಂದರ್ ಅವರು ಸಿನಿಮಾ ಶೂಟಿಂಗ್‌ನಲ್ಲಿದ್ದರು. ಅವರು ಇದ್ದಕ್ಕಿದ್ದಂತೆ ರಾಜಕೀಯಕ್ಕೆ ಬಂದಿದ್ದಾರೆ.



ಅವರ ಪತ್ನಿ ಖುಷ್ಬು ಅವರು ಸುಮಾರು 10 ವರ್ಷಗಳಿಂದ ರಾಜಕೀಯದಲ್ಲಿದ್ದಾರೆ. ಮೂರು ಪಕ್ಷಗಳನ್ನು (ಕಾಂಗ್ರೆಸ್, ಡಿಎಂಕೆ ಮತ್ತು ಬಿಜೆಪಿ) ಬದಲಾಯಿಸಿದ್ದಾರೆ. ಆದರೆ ಅವರಿಗೆ ಟಿಕೆಟ್ ನೀಡಿಲ್ಲ ಎಂದು ಹೇಳಿದ್ದರು. ಯಾವುದೇ ರಾಜಕೀಯ ವಿಷಯಗಳನ್ನು ಪ್ರಶ್ನೆ ಮಾಡದ, ಮಧುರೈನ ಜನರಿಗಾಗಿ ಧ್ವನಿ ಎತ್ತದ ಸುಂದರ್ ಅವರನ್ನು ಅಭ್ಯರ್ಥಿ ಎಂದು ಘೋಷಿಸಲಾಗಿದೆ. ಅಭ್ಯರ್ಥಿ ಎಂದು ಘೋಷಿಸಿದ ತಕ್ಷಣವೇ ಅವರು ಶಾಸಕರಾಗಲು ನಿರ್ಧರಿಸಿದ್ದಾರೆ ಎಂದು ಟೀಕಿಸಿದ್ದರು.

ಸಿನಿಮಾ ನಿರ್ದೇಶಕ ಆಗಬೇಕಾದರೆ ಎಷ್ಟು ವಿಷಯಗಳನ್ನು ಕಲಿತಿರಬೇಕು. ತಕ್ಷಣ ಶಾಸಕರಾಗಲು ಸಾಧ್ಯವೇ? ಎಂದು ಪ್ರಶ್ನಿಸಿದ್ದರು. ಸುಮಾರು ವರ್ಷಗಳಿಂದ ನಿಮ್ಮ ಪತ್ನಿ ರಾಜಕೀಯದಲ್ಲಿದ್ದಾರೆ. ಪ್ರಶ್ನೆಗಳನ್ನೂ ಕೇಳುತ್ತಿದ್ದಾರೆ. ಅವರಿಗೆ ಸಿಗದ ಸೀಟು ನಿಮಗೆ ಹೇಗೆ ಸಿಕ್ಕಿತು. ಇದರಿಂದ ನಿಮಗೇನು ಅನಿಸಲಿಲ್ಲವೇ? ಇದನ್ನು ನಾವು ಹೇಗೆ ಒಪ್ಪಿಕೊಳ್ಳುವುದು' ಎಂದು ಅಸಮಾಧಾನ ವ್ಯಕ್ತಪಡಿಸಿದ್ದರು.

## ಮೊದಲ ವಿದೇಶ ಪ್ರವಾಸ: ಉಪರಾಷ್ಟ್ರಪತಿ ರಾಧಾಕೃಷ್ಣನ್ ಶ್ರೀಲಂಕಾ ಭೇಟಿ

**ಕೊಲಂಬೊ:** ಭಾರತದ ಉಪರಾಷ್ಟ್ರಪತಿ ರಾಧಾಕೃಷ್ಣನ್ ಅವರು ಎರಡು ದಿನಗಳ ಅಧಿಕೃತ ಭೇಟಿಗಾಗಿ ಶ್ರೀಲಂಕಾಕ್ಕೆ ಆಗಮಿಸಿದ್ದಾರೆ. ಇದು ಅವರು ಅಧಿಕಾರ ವಹಿಸಿಕೊಂಡ ನಂತರ ಕೈಗೊಂಡ ಮೊದಲ ವಿದೇಶ ಪ್ರವಾಸವಾಗಿದೆ. ಭಾರತ ಮತ್ತು ಶ್ರೀಲಂಕಾ ನಡುವಿನ ನಾಗರಿಕ ಸಂಬಂಧಗಳನ್ನು ಬಲಪಡಿಸಲು ಮತ್ತು ಜನರ ನಡುವಿನ ಸಂಪರ್ಕವನ್ನು ವೃದ್ಧಿಸಲು ಈ ಭೇಟಿ ಸಹಕಾರಿಯಾಗಲಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಅವರು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಈ ಬಗ್ಗೆ ಮಾಹಿತಿ ಹಂಚಿಕೊಂಡಿದ್ದಾರೆ. ರಾಧಾಕೃಷ್ಣನ್ ಅವರು ಎರಡು ದಿನಗಳ ಪ್ರವಾಸದ ಅಂಗವಾಗಿ ಕೊಲಂಬೊ ತಲುಪಿದ್ದಾರೆ. ಭಾರತದ ಉಪರಾಷ್ಟ್ರಪತಿಯೊಬ್ಬರು ಶ್ರೀಲಂಕಾಕ್ಕೆ ನೀಡುತ್ತಿರುವ ಮೊದಲ ಅಧಿಕೃತ ದ್ವಿಪಕ್ಷೀಯ ಭೇಟಿ ಇದಾಗಿದೆ. ಈ ಭೇಟಿಯು ಉಭಯ ದೇಶಗಳ ನಡುವಿನ ಸಾಂಸ್ಕೃತಿಕ ಸಂಬಂಧಗಳನ್ನು ಗಟ್ಟಿಗೊಳಿಸಲಿದೆ ಎಂದು ಬರೆದುಕೊಂಡಿದ್ದಾರೆ. ತಮ್ಮ ಪ್ರವಾಸದ ಅವಧಿಯಲ್ಲಿ ಉಪರಾಷ್ಟ್ರಪತಿಗಳು ಶ್ರೀಲಂಕಾದ ಉನ್ನತ ನಾಯಕರನ್ನು ಭೇಟಿ ಮಾಡಲಿದ್ದಾರೆ. ಭಾರತೀಯ ಮೂಲದ ತಮಿಳು ಸಮುದಾಯದವರೊಂದಿಗೆ ಸಂವಾದ ನಡೆಸಲಿದ್ದಾರೆ.



# ಗುಂಡಿನ ದಾಳಿಗೆ ಭಾರತೀಯ ಪ್ರಜೆಗಳು ಬಲಿ

### ವೈಶಾಖಿ ಹಬ್ಬದ ಆಚರಣೆ ಹಿನ್ನಲೆಯಲ್ಲಿ ಗುರುದ್ವಾರಕ್ಕೆ ಹೋಗಿ ಬರುತ್ತಿದ್ದ ವೇಳೆ ಘಟನೆ

**ಇಟಲಿ:** ಇಟಲಿಯ ಬರ್ಗಾಮೊ ಪ್ರಾಂತ್ಯದಲ್ಲಿರುವ ಕೊವೊದಲ್ಲಿ ಗುರುದ್ವಾರದಿಂದ ಹೊರಗೆ ನಡೆದ ಗುಂಡಿನ ದಾಳಿಯಲ್ಲಿ ಭಾರತೀಯ ಮೂಲದ 2 ಪ್ರಜೆಗಳು ಸಾವನ್ನಪ್ಪಿರುವ ಘಟನೆ ನಡೆದಿದೆ.

**ಗುಂಡಿನ ದಾಳಿಗೆ 2 ಭಾರತೀಯರು ಮೃತ:** ಇಟಲಿಯ ಕೊವೊ ಪಟ್ಟಣದ ಕೈಗಾರಿಕಾ ಪ್ರದೇಶದಲ್ಲಿ ವೈಶಾಖಿ ಹಬ್ಬವನ್ನು ಆಚರಣೆಯ ಹಿನ್ನಲೆಯಲ್ಲಿ ಅಲ್ಲಿನ ಗುರುದ್ವಾರ ಮಾತಾ ಸಾಹಿಬ್ ಕೌರ್ ಜಿ ಅವರ ಪೂಜಾ ಸ್ಥಳವಾಗಿ ಬಳಸಲಾಗುತ್ತಿದ್ದ ಗೋದಾಮಿನ ಹೊರಗಿನ ಚೌಕದಲ್ಲಿ 2 ಪುರುಷರು ಹೊರಗೆ ನಡೆಯುತ್ತಿದ್ದ ವೇಳೆ ಅವರ ಮೇಲೆ ದಾಳಿ ನಡೆಸಲಾಗಿದೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

ಇನ್ನು, ದಾಳಿಯಲ್ಲಿ ಸಾವನ್ನಪ್ಪಿದ ಮೃತರನ್ನು ಕೊವೊ ನಿವಾಸಿ 48 ವರ್ಷದ ರಾಗಿಂದರ್ ಸಿಂಗ್ ಮತ್ತು ಅಗ್ನಾಡೆಲ್ಲೊದಲ್ಲಿ ವಾಸಿಸುತ್ತಿದ್ದ 48 ವರ್ಷದ ಗುರ್ಮಿತ್ ಸಿಂಗ್ ಎಂದು ಗುರುತಿಸಲಾಗಿದ್ದು, ಇವರು ಭಾರತೀಯ ಮೂಲದ ಪ್ರಜೆಗಳು ಎಂದು ತಿಳಿದು ಬಂದಿದೆ.

**ಘಟನೆಯ ವಿವರ:** ಪ್ರಾಥಮಿಕ ಮಾಹಿತಿಯ ಪ್ರಕಾರ, ಪೂರ್ವ ಯೋಜಿತ ಘಟನೆಯಾಗಿರಬಹುದು ಎಂದು ತಿಳಿದು ಬಂದಿದೆ. ದಾಳಿಕೋರ ಸಹ ಒಬ್ಬ ಭಾರತೀಯ ಪ್ರಜೆಯಾಗಿದ್ದಾನೆ ಎಂದು ಶಂಕಿಸಲಾಗಿದ್ದು, ಈತ ಆಗಾಗ್ಗೆ ಈ ಗುರುದ್ವಾರಕ್ಕೆ ಭೇಟಿ ನೀಡುತ್ತಿದ್ದನು. ಇನ್ನು, ಈ ಘಟನೆಯಲ್ಲಿ 3 ಜನರ ಮೇಲೆ ಗುಂಡು ಹಾರಿಸಲಾಗಿದ್ದು, 3ನೇ ವ್ಯಕ್ತಿಯ ಕುರಿತು ಯಾವುದೇ ಹೆಚ್ಚಿನ ಮಾಹಿತಿ ಲಭ್ಯವಾಗಿಲ್ಲ. ಇವರ ಮೇಲಿನ ಗುಂಡಿನ ದಾಳಿ ನಡೆಸಿದ ಬಳಿಕ ಶಂಕಿತ ಅಲ್ಲಿಂದ ಕಾರಿನಲ್ಲಿ ಪರಾರಿಯಾಗಿದ್ದಾನೆ. ಇನ್ನು, ಘಟನೆ ನಡೆದ ಸ್ಥಳದಲ್ಲಿ ಪೊಲೀಸರಿಗೆ ಸುಮಾರು 10 ಶೆಲ್ ಕೇಸಿಂಗ್‌ಗಳನ್ನು ವಶಪಡಿಸಿಕೊಂಡಿದ್ದಾರೆ.



#### ಹೆಚ್ಚಿನ ಮಾಹಿತಿ ಲಭ್ಯವಾಗಿಲ್ಲ

**ಇಟಲಿಯ ಕೊವೊ ಪಟ್ಟಣದಲ್ಲಿ ವೈಶಾಖಿ ಹಬ್ಬದ ಹಿನ್ನಲೆಯಲ್ಲಿ ಗುರುದ್ವಾರಕ್ಕೆ ಹೋಗಿ ಹೊರಗೆ ಬಂದ ವೇಳೆ ಗುಂಡಿನ ದಾಳಿ ನಡೆದಿದ್ದು, ಇಬ್ಬರು ಭಾರತೀಯ ಮೂಲದ ಪ್ರಜೆಗಳು ಸಾವನ್ನಪ್ಪಿದ್ದಾರೆ. ಪ್ರಾಥಮಿಕ ಮಾಹಿತಿಯ ಪ್ರಕಾರ, 3 ಜನರ ಮೇಲೆ ಗುಂಡಿನ ದಾಳಿ ನಡೆದಿದ್ದು ಒಬ್ಬ ವ್ಯಕ್ತಿಯ ಬಗ್ಗೆ ಯಾವುದೇ ಹೆಚ್ಚಿನ ಮಾಹಿತಿ ಲಭ್ಯವಾಗಿಲ್ಲ. ಇನ್ನು, ದಾಳಿಕೋರನನ್ನು ಭಾರತೀಯ ಎಂದು ಶಂಕಿಸಲಾಗಿದ್ದು, ಈ ಕುರಿತು ತನಿಖೆ ನಡೆಯುತ್ತಿದೆ.**


#### ಆರೋಪಿ ಬಂಧನಕ್ಕೆ ತನಿಖೆ ಚುರುಕು

**ಇನ್ನು, ಈ ಘಟನೆ ವೈಶಾಖಿ ಆಚರಣೆ ಅಧಿಕೃತವಾಗಿ ಆರಂಭವಾಗುವ ಕೆಲವು ಗಂಟೆಗಳ ಮೊದಲು ನಡೆದಿದ್ದು, ಈ ಆಚರಣೆಯಲ್ಲಿ ಅಲ್ಲಿನ ಸ್ಥಳೀಯ ಸಂಸ್ಥೆಗಳು ಭಾಗವಹಿಸುವ ನಿರೀಕ್ಷೆಯಿತ್ತು. ಆದರೆ, ಈ ಘಟನೆಯಿಂದಾಗಿ ಸದ್ಯ ಈ ಪ್ರದೇಶದ ಭಾರತೀಯ ಮತ್ತು ಸಿಖ್ ಸಮುದಾಯಗಳನ್ನು ಬೆಚ್ಚಿ ಬೀಳಿಸಿದೆ. ಈ ಘಟನೆ ಕುರಿತು ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ಇಟಲಿಯ ಅಧಿಕಾರಿಗಳು ಶಂಕಿತನನ್ನು ಗುರುತಿಸಿ, ಬಂಧಿಸಲು ಹಾಗೂ ಮಾರಕ ದಾಳಿಯ ಹಿಂದಿನ ಉದ್ದೇಶವನ್ನು ತಿಳಿಯಲು ತನಿಖೆಯನ್ನು ನಡೆಸುತ್ತಿದ್ದಾರೆ ಎಂದು ವರದಿಯಾಗಿದೆ.**

## 2ನೇ ಸುತ್ತಿನ ಮಾತುಕತೆ: ಅಧಿಕೃತ ಘೋಷಣೆಗೂ ಮುನ್ನವೇ ಸಿದ್ಧತೆ ಪ್ರಾರಂಭಿಸಿದ ಪಾಕ್

**ಇಸ್ಲಾಮಾಬಾದ್:** ಅಮೆರಿಕ ಮತ್ತು ಇರಾನ್ ನಡುವಿನ ಎರಡನೇ ಸುತ್ತಿನ ಮಾತುಕತೆ ಬಗ್ಗೆ ಯಾವುದೇ ಅಧಿಕೃತ ಘೋಷಣೆ ಹೊರಬೀಳದಿದ್ದರೂ, ವಿದೇಶಿ ಗಣ್ಯರ ಆಗಮನಕ್ಕೆ ಪಾಕಿಸ್ತಾನದಲ್ಲಿ ಎಲ್ಲಾ ರೀತಿಯ ಸಿದ್ಧತೆ ನಡೆಯುತ್ತಿದೆ ಎಂದು 'ಎಕ್ಸ್‌ಪ್ರೆಸ್ ಟ್ರಿಬ್ಯೂನ್' ವರದಿ ಮಾಡಿದೆ. ಸಂಘರ್ಷವನ್ನು ಕೊನೆಗೊಳಿಸಿ ಶಾಂತಿ ಒಪ್ಪಂದ ಮಾಡಿಕೊಳ್ಳುವ ಉದ್ದೇಶದಿಂದ ಏ. 11, ಏ.12ರಂದು ಅಮೆರಿಕ, ಇರಾನ್ ನಡುವೆ ಇಸ್ಲಾಮಾಬಾದ್‌ದಲ್ಲಿ ಮೊದಲ ಸುತ್ತಿನ ಮಾತುಕತೆ ನಡೆದಿತ್ತು. ಆದರೆ, ಶಾಂತಿ ಒಪ್ಪಂದ ಬರುವುದಕ್ಕೆ ಉಭಯ ದೇಶಗಳು ನಾಯಕರು ವಿಫಲವಾಗಿದ್ದರು. ಯುದ್ಧ ಕೊನೆಗೊಳಿಸಲು ಪಣತೊಟ್ಟಿರುವ ಪಾಕಿಸ್ತಾನವು, ಅಮೆರಿಕ, ಇರಾನ್ ನಡುವೆ ಎರಡನೇ ಸುತ್ತಿನ ಮಾತುಕತೆ ನಡೆಸಲು ರಾಜತಾಂತ್ರಿಕ ಪ್ರಯತ್ನಗಳನ್ನು ಮಾಡಿದೆ.

ಪಾಕ್ ಪ್ರಧಾನಿ ಶೆಹಬಾಜ್ ಶರೀಫ್ ಅವರು ಸೌದಿ ಅರೇಬಿಯಾ, ಕತಾರ್ ಮತ್ತು ಟರ್ಕಿಗೆ ಭೇಟಿ ನೀಡಿದ್ದರೆ, ರಕ್ಷಣಾ ಪಡೆಗಳ ಮುಖ್ಯಸ್ಥ ಫೀಲ್ಡ್ ಮಾರ್ಷಲ್ ಆಸಿಂ ಮುನೀರ್ ಅವರು ಇರಾನ್‌ಗೆ ಮೂರು ದಿನಗಳ ಪ್ರವಾಸ ಕೈಗೊಂಡಿದ್ದರು.



ಹೇಗಿದೆ ಭದ್ರತಾ ವ್ಯವಸ್ಥೆ ಇಸ್ಲಾಮಾಬಾದ್‌ಗೆ ಹೊಂದಿಕೊಂಡಿರುವ ರಾವಲ್ಪಿಂಡಿ ನಗರದಾದ್ಯಂತ 10,000 ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಮತ್ತು 600ಕ್ಕೂ ಹೆಚ್ಚು ಚೆಕ್‌ಪೋಸ್ಟ್‌ಗಳನ್ನು ಸ್ಥಾಪಿಸಲಾಗಿದೆ ಎಂದು ಎಕ್ಸ್‌ಪ್ರೆಸ್ ಟ್ರಿಬ್ಯೂನ್ ವರದಿ ಮಾಡಿದೆ. ಸಂಭವನೀಯ ಮಾತುಕತೆ ಹಿನ್ನೆಲೆಯಲ್ಲಿ ರಾಜಧಾನಿದಲ್ಲಿಯೂ ಕಠಿಣ ಭದ್ರತಾ ಕ್ರಮ ಕೈಗೊಳ್ಳಲಾಗಿದೆ.

ಭಾನುವಾರ ಮಧ್ಯರಾತ್ರಿಯಿಂದ ನೂರ್ ಖಾನ್ ವಾಯುನೆಲೆ, ಇಸ್ಲಾಮಾಬಾದ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸುತ್ತಮುತ್ತಲಿನ ಹಲವಾರು ಸೂಕ್ಷ್ಮ ಪ್ರದೇಶಗಳನ್ನು ಬಂದ್ ಮಾಡುವುದಾಗಿ ಎಂದು ಅಧಿಕಾರಿಗಳು ಘೋಷಿಸಿದ್ದಾರೆ. ಇರಾನ್ ಜೊತೆಗೆ ಶಾಂತಿ ಒಪ್ಪಂದ ಅಂತಿಮಗೊಂಡರೆ, ಒಪ್ಪಂದಕ್ಕೆ ಸಹಿ ಹಾಕಲು ಪಾಕಿಸ್ತಾನಕ್ಕೆ ಬರುವುದದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇತ್ತೀಚೆಗೆ ಹೇಳಿಕೆ ನೀಡಿದ್ದರು. ಆದ್ದರಿಂದ ಕಠಿಣ ಭದ್ರತಾ ಕ್ರಮಕ್ಕೆ ಪಾಕಿಸ್ತಾನ ಮುಂದಾಗಿದೆ.

**ಡ್ರೋನ್ ಹಾರಾಟಕ್ಕೆ ಬ್ರೇಕ್:** ರಾವಲ್ಪಿಂಡಿಯಲ್ಲಿ ಡ್ರೋನ್ ಹಾರಾಟ, ಪಾರಿವಾಳ ಹಾರಿಸುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ. ವಿದೇಶಿ ಗಣ್ಯರನ್ನು ಹೊತ್ತ ವಿಮಾನಗಳ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಈ ಕ್ರಮ ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾವಲ್ಪಿಂಡಿಯಲ್ಲಿ, ವಿಶೇಷವಾಗಿ ನೂರ್ ಖಾನ್ ವಾಯುನೆಲೆ ಮತ್ತು ಇಸ್ಲಾಮಾಬಾದ್ ವಿಮಾನ ನಿಲ್ದಾಣದ ಸಮೀಪದಲ್ಲಿ 'ರೆಡ್ ಅಲರ್ಟ್' ಘೋಷಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಅಲ್ಲದೇ, ಹತ್ತಿರದ ಕಟ್ಟಡಗಳ ಮೇಲೆಯೂ ಸಿಬ್ಬಂದಿಯನ್ನು ನಿಯೋಜಿಸಲಾಗುವುದು.

## ಮಹಿಳಾ ಮೀಸಲಾತಿ ಜಾರಿಗೆ ಆಗ್ರಹ ಪ್ರಧಾನಿ ಪತಿಕೃತಿ ದಹಿಸಿ ಕಾಂಗ್ರೆಸ್ ಪ್ರತಿಭಟನೆ

**ನವದೆಹಲಿ:** ಲೋಕಸಭೆಯ ಹಾಲಿ ಬಲದ ಆಧಾರದ ಮೇಲೆ ಮಹಿಳಾ ಮೀಸಲಾತಿಯನ್ನು ತಕ್ಷಣವೇ ಜಾರಿ ಮಾಡಬೇಕೆಂದು ಒತ್ತಾಯಿಸಿ ಮೋದಿ ಸರ್ಕಾರದ ವಿರುದ್ಧ ಕಾಂಗ್ರೆಸ್ ಭಾನುವಾರ ಪ್ರತಿಭಟನೆ ನಡೆಸಿತು. ರಾಜಕೀಯ ಕಾರಣಗಳಿಗಾಗಿ ಉದ್ದೇಶಪೂರ್ವಕವಾಗಿ ಮಹಿಳಾ ಮೀಸಲಾತಿ ಜಾರಿಯನ್ನು ವಿಳಂಬಗೊಳಿಸುತ್ತಿದೆ ಎಂದು ಆರೋಪಿಸಿದೆ.

ಮಸೂದೆ ಅಂಗೀಕಾರವಾದಾಗ, 2024ರ ಲೋಕಸಭಾ ಚುನಾವಣೆಯಿಂದಲೇ ನಾರಿ ಶಕ್ತಿ ವಂದನ್ ಅಧಿನಿಯಮ ಜಾರಿಗೆ ತರಬೇಕೆಂದು ನಾವು ಆಗ್ರಹಿಸಿದ್ದೆವು. ಆದರೆ ಆ ಬೇಡಿಕೆಯನ್ನು ನಿರ್ಲಕ್ಷಿಸಲಾಯಿತು. ಜಾರಿಗೆ ತರುವ ದಿನಾಂಕವನ್ನು ನಂತರ ತಿಳಿಸಲಾಗುವುದು ಎಂದು ನಮಗೆ ಹೇಳಲಾಗಿತ್ತು. ಸುಮಾರು 30 ತಿಂಗಳು ಸುಮ್ಮನಿದ್ದು, ಇದ್ದಕ್ಕಿದ್ದಂತೆ, ಏಪ್ರಿಲ್ 16ರ ರಾತ್ರಿ ಮಸೂದೆಯನ್ನು ಜಾರಿಗೆ ತರಲಾಯಿತು ಎಂದು ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದರು. ದೆಹಲಿ ಕಾಂಗ್ರೆಸ್ ಅಧ್ಯಕ್ಷ ದೇವೇಂದರ್ ಯಾದವ್ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು. ಪಕ್ಷದ ಕಾರ್ಯಕರ್ತರು ಘೋಷಣೆಗಳನ್ನು ಕೂಗುತ್ತಾ ಬಿಜೆಪಿ ಪ್ರಧಾನ ಕಚೇರಿಯತ್ತ ಮೆರವಣಿಗೆ ನಡೆಸಿದರು. ಅಖಿಲ ಭಾರತ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಅಲ್ಕಾ ಲಂಬಾ,



ದೆಹಲಿ ಮಹಿಳಾ ಕಾಂಗ್ರೆಸ್ ಮುಖ್ಯಸ್ಥೆ ಪುಷ್ಪಾ ಸಿಂಗ್, ಎಐಸಿಸಿ ವಕ್ತಾರೆ ರಾಗಿಣಿ ನಾಯಕ್ ಸೇರಿದಂತೆ ಹಲವು ನಾಯಕರು ಭಾಗಿಯಾಗಿದ್ದರು. ಮಹಿಳಾ ಮೀಸಲಾತಿ ನೆಪದಲ್ಲಿ ಕ್ಷೇತ್ರ ಮರುವಿಂಗಡಣೆ ಮಾಡಲು ಸರ್ಕಾರ ಪ್ರಯತ್ನಿಸಿತು. ನೀವು ನಿಜವಾಗಿಯೂ ಮಹಿಳೆಯರ ಹಿತೈಷಿಗಳಾಗಿದ್ದರೆ, ಪ್ರಸ್ತುತ ಲೋಕಸಭೆಯ 543 ಸ್ಥಾನಗಳಲ್ಲೇ ಮೀಸಲಾತಿಯನ್ನು ಜಾರಿಗೊಳಿಸಿ ಎಂದು ದೇವೇಂದರ್ ಯಾದವ್ ಸವಾಲು ಹಾಕಿದರು.

ರೌಸ್ ಅವೆನ್ಯೂ ಕೋರ್ಟ್ ಸಮೀಪವಿರುವ ದೆಹಲಿ ಕಾಂಗ್ರೆಸ್ ಕಚೇರಿಯಲ್ಲಿ ಜಮಾಯಿಸಿದ ಹಲವಾರು ಪ್ರತಿಭಟನಾಕಾರರು ಪ್ರಧಾನಮಂತ್ರಿ ಮೋದಿಯವರ ಪ್ರತಿಕೃತಿ ದಹಿಸಿ ಬಿಜೆಪಿ ಪ್ರಧಾನ ಕಚೇರಿಯತ್ತ ಸಾಗಿದರು.

## ಇರಾನ್ ಸಂಘರ್ಷದ ಬೆನ್ನಲ್ಲೇ ಕ್ಷಿಪಣಿ ಉಡಾಯಿಸಿ ಆತಂಕ ಹೆಚ್ಚಿಸಿದ ಉತ್ತರ ಕೊರಿಯಾ


**ಸಿಯೋಲ್:** ಇರಾನ್-ಇಸ್ರೇಲ್, ಅಮೆರಿಕಾ ನಡುವಿನ ಯುದ್ಧವೇ ಇನ್ನೂ ತಾರ್ಕಿಕ ಅಂತ್ಯ ಪಡೆಯದ ಹೊತ್ತಿನಲ್ಲಿ, ಉತ್ತರ ಕೊರಿಯಾ ಭಾನುವಾರ ಅಲ್ಪ ದೂರದ ಹಲವು ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ಸಮುದ್ರದ ದಿಕ್ಕಿನತ್ತ ಉಡಾಯಿಸಿ ಆತಂಕ ಮೂಡಿಸಿದೆ. ಜಾಗತಿಕ ಸಂಘರ್ಷದ ಹಿನ್ನೆಲೆಯಲ್ಲಿ ಉತ್ತರ ಕೊರಿಯಾ ತನ್ನ ಅಣ್ವಸ್ತ್ರ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುತ್ತಿರುವುದು ನೆರೆಯ ರಾಷ್ಟ್ರಗಳ ನಿದ್ದೆಗೆಡಿಸಿದೆ. ವಿಶ್ವಸಂಸ್ಥೆಯ ಅಣು ನಿಯಂತ್ರಣ ಸಂಸ್ಥೆ ಉತ್ತರ ಕೊರಿಯಾ ಅಣ್ವಸ್ತ್ರ ನಿರ್ಮಾಣದಲ್ಲಿ ತೀವ್ರ ಪ್ರಗತಿ ಸಾಧಿಸುತ್ತಿದೆ ಎಂದು ಎಚ್ಚರಿಕೆ ನೀಡಿದ್ದ ಕೆಲವೇ ದಿನಗಳಲ್ಲಿ ಈ ಪರೀಕ್ಷೆಗಳು ನಡೆದಿವೆ. ಏತನಧ್ಯೆ, ದಕ್ಷಿಣ ಕೊರಿಯಾದ ಸಂಯುಕ್ತ ಸೈನಿಕ ಮುಖ್ಯಸ್ಥರ ಪ್ರಕಾರ, ಸಿನ್ಪೋ ಪ್ರದೇಶದಿಂದ ಉಡಾಯಿಸಲಾದ ಕ್ಷಿಪಣಿಗಳು ಸುಮಾರು 140 ಕಿಲೋಮೀಟರ್ ದೂರ ಪೂರ್ವ ಸಮುದ್ರದತ್ತ ಹಾರಿವೆ. ಉತ್ತರ ಕೊರಿಯಾದ ಯಾವುದೇ ಪ್ರಚೋದನೆಗೆ ತಕ್ಕ ಪ್ರತಿಕ್ರಿಯೆ ನೀಡಲು ದಕ್ಷಿಣ ಕೊರಿಯಾ ಸಿದ್ಧವಾಗಿದೆ. ಇದೇ ಸಮಯದಲ್ಲಿ ವಿಶ್ವಸಂಸ್ಥೆ ಹಾಗೂ ಜಪಾನ್ ಜೊತೆ ನಿಕಟ ಸಂಪರ್ಕದಲ್ಲಿದೆ ಎಂದು ತಿಳಿಸಿದೆ.

ದಕ್ಷಿಣ ಕೊರಿಯಾದ ರಾಷ್ಟ್ರೀಯ ಭದ್ರತಾ ಮಂಡಳಿಯ ತುರ್ತು ಸಭೆಯಲ್ಲಿ, ಉತ್ತರ ಕೊರಿಯಾದ ಪದೇ ಪದೇ ಕ್ಷಿಪಣಿ ಪರೀಕ್ಷೆಗಳ ಬಗ್ಗೆ ಆತಂಕ ವ್ಯಕ್ತಪಡಿಸಲಾಗಿದೆ. ತಕ್ಷಣವೇ ಈ ರೀತಿಯ ಪರೀಕ್ಷೆಗಳನ್ನು ನಿಲ್ಲಿಸುವಂತೆ ಆಗ್ರಹಿಸಲಾಗಿದೆ. ದಕ್ಷಿಣ ಕೊರಿಯಾದ ಅಧ್ಯಕ್ಷ ಲೀ ಜಾ ಮ್ಯೆಯುಂಗ್ ಭಾರತ, ವಿಯೆಟ್ನಾಂ ಪ್ರವಾಸಕ್ಕೆ ತೆರಳುವ ಮುನ್ನಾ ಈ ಕ್ಷಿಪಣಿ ಉಡಾವಣೆಗಳು ನಡೆದಿವೆ.ಅಮೆರಿಕ ಮತ್ತು ಜಪಾನ್ ಸೇನೆಗಳು ಕೂಡ ಈ ಕ್ಷಿಪಣಿ ಉಡಾವಣೆಗಳನ್ನು ದೃಢಪಡಿಸಿವೆ.

## ಪಾಕ್ ಭಯೋತ್ಪಾದನೆ ಬಗ್ಗೆ ಅಮೆರಿಕದಲ್ಲಿ ಭಾರತದ ಪ್ರದರ್ಶನ

**ವಾಷಿಂಗ್ಟನ್:** ಪೆಹಲ್ಗಾಮ್ ಭಯೋತ್ಪಾದಕ ದಾಳಿಗೆ ವರ್ಷ ತುಂಬುತ್ತಿರುವ ಹಿನ್ನೆಲೆ ಪಾಕಿಸ್ತಾನ ಪ್ರಾಯೋಜಿತ ಭಯೋತ್ಪಾದನೆಯನ್ನು ಎತ್ತಿ ತೋರಿಸಲು ಮತ್ತು ಅಪರೇಷನ್ ಸಿಂಧೂರ ಮೂಲಕ ಉಗ್ರರ ಹುಟ್ಟಡಗಿಸಿದ್ದನ್ನು ಗುರುತಿಸಲು ಅಮೆರಿಕದಲ್ಲಿರುವ ಭಾರತೀಯ ರಾಯಭಾರ ಕಚೇರಿಯು ಮಂಗಳವಾರ(ಏ 22) ಕ್ಯಾಪಿಟಲ್ ಹಿಲ್‌ನಲ್ಲಿ ಪ್ರದರ್ಶನವನ್ನು ಆಯೋಜಿಸಲಿದೆ.

ಫೆಬ್ರುವರಿ 28ರಿಂದ ಅಮೆರಿಕ-ಇರಾನ್ ನಡುವೆ ನಡೆಯುತ್ತಿರುವ ಯುದ್ಧ ಅಂತ್ಯಕ್ಕೆ ಸಂಧಾನ ಮಾತುಕತೆಗೆ ವೇದಿಕೆ ಕಲ್ಪಿಸುವ ಮೂಲಕ ಶಾಂತಿಪ್ರಿಯ ಎಂದು ಪಾಕಿಸ್ತಾನ ಬಿಂಬಿಸಿಕೊಳ್ಳುತ್ತಿರುವ ಸಮಯದಲ್ಲಿ ಅಮೆರಿಕದಲ್ಲಿರುವ ಭಾರತದ ರಾಯಭಾರಿ ವಿನಯ್ ಮೋಹನ್ ಕ್ವಾತ್ರಾ, ಭಯೋತ್ಪಾದನೆಯ ಮಾನವ ವೆಚ್ಚ ಎಂಬ ಪ್ರದರ್ಶನವನ್ನು ಉದ್ಘಾಟಿಸಲಿದ್ದಾರೆ.



2025ರ ಏಪ್ರಿಲ್ 22ರಂದು ಜಮ್ಮು ಮತ್ತು ಕಾಶ್ಮೀರದ ಪೆಹಲ್ಗಾಮ್‌ನ ಬೈಸರನ್ ಕಣಿವೆಯಲ್ಲಿ ಪ್ರವಾಸಿಗರ ಮೇಲೆ ಪಾಕಿಸ್ತಾನ ಮೂಲದ ಸಂಘಟನೆಗಳ ಭಯೋತ್ಪಾದಕರು ಗುಂಡು ಹಾರಿಸಿ 25 ಭಾರತೀಯರು, ಒಬ್ಬ ನೇಪಾಳಿ ನಾಗರಿಕನನ್ನು ಕೊಂದಿದ್ದರು. ಕಳೆದ ವರ್ಷ ಜುಲೈನಲ್ಲಿ ಪಾಕಿಸ್ತಾನವು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಅಧ್ಯಕ್ಷತೆಯನ್ನು ವಹಿಸಿಕೊಂಡಾಗ ಭಾರತವು ವಿಶ್ವಸಂಸ್ಥೆಯ ಪ್ರಧಾನ ಕಚೇರಿಯಲ್ಲಿ ಇದೇ ರೀತಿಯ ಪ್ರದರ್ಶನವನ್ನು ನಡೆಸಿತ್ತು.

**ಈ ಡಿಜಿಟಲ್ ಪ್ರದರ್ಶನದಲ್ಲಿ 1993ರ ಮುಂಬೈ ಬಾಂಬ್ ಸ್ಫೋಟಗಳು, 2008ರ ಮುಂಬೈ ಭಯೋತ್ಪಾದಕ ದಾಳಿಗಳು, ಪೆಹಲ್ಗಾಮ್ ಭಯೋತ್ಪಾದಕ ದಾಳಿ ಸೇರಿದಂತೆ ಪ್ರಪಂಚದಾದ್ಯಂತದ ಭಯಾನಕ ಭಯೋತ್ಪಾದಕ ದಾಳಿಗಳನ್ನು ಪ್ರದರ್ಶಿಸಲಾಗುತ್ತದೆ. ಪಾಕಿಸ್ತಾನ ಮೂಲದ ಹಲವು ವ್ಯಕ್ತಿಗಳು, ಲಷ್ಕರ್-ಎ ತೊಯ್ಬಾದಂತಹ ಭಯೋತ್ಪಾದಕ ಸಂಘಟನೆಗಳನ್ನು ಹೆಸರಿಸಲಾಗುತ್ತದೆ.**

## ಕೋಲ್ಕತ್ತ ಪೊಲೀಸ್ ಉಪ ಕಮಿಷನರ್ ನಿವಾಸದ ಮೇಲೆ ಇಡಿ ದಾಳಿ

**ಕೋಲ್ಕತ್ತ:** ಕೋಲ್ಕತ್ತಾ ಪೊಲೀಸ್ ಉಪ ಕಮಿಷನರ್ ಶಾಂತನು ಸಿನ್ಹಾ ಬಿಸ್ವಾಸ್ ಮತ್ತು ಸ್ಥಳೀಯ ಉದ್ಯಮಿಯೊಬ್ಬರಿಗೆ ಸೇರಿದ ಸ್ಥಳಗಳ ಮೇಲೆ ಇ.ಡಿ ಭಾನುವಾರ ದಾಳಿ ನಡೆಸಿದೆ. ಹಣ ಅಕ್ರಮ ವರ್ಗಾವಣೆ ತನಿಖೆಯ ಭಾಗವಾಗಿ ಈ ದಾಳಿ ನಡೆದಿದೆ.

ಬಿಸ್ವಾಸ್ ಅವರ ಬಾಲಿಗಂಜ್ ಪ್ರದೇಶದ ನಿವಾಸ ಸೇರಿದಂತೆ ಎರಡು ಸ್ಥಳಗಳಲ್ಲಿ, ಸನ್ ಎಂಟರ್‌ಪ್ರೆಸ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಜಾಯ್ ಕಮ್ದಾರ್ ಎಂಬ ಉದ್ಯಮಿಗೆ ಸೇರಿದ ಒಂದು ಕಡೆ ಶೋಧ ಕಾರ್ಯಾಚರಣೆ ನಡೆಯುತ್ತಿದೆ. ಹೆಚ್ಚಿನ ವಿಚಾರಣೆಗಾಗಿ ಕಮ್ದಾರ್ ಅವರನ್ನು ಸ್ಥಳೀಯ ಇ.ಡಿ ಕಚೇರಿಗೆ ಕರೆದುಕೊಂಡು ಹೋಗಲಾಗಿದೆ.

ಪಶ್ಚಿಮ ಬಂಗಾಳ ಮತ್ತು ಕೋಲ್ಕತ್ತ ಪೊಲೀಸ್ ಕಲ್ಯಾಣ ಸಮಿತಿಯ ಮುಖ್ಯ ಸಂಯೋಜಕ ಮತ್ತು ನೋಡಲ್ ಅಧಿಕಾರಿಯಾಗಿರುವ ಬಿಸ್ವಾಸ್ ದಾಳಿಯ ಸಮಯದಲ್ಲಿ ಸ್ಥಳದಲ್ಲಿ ಇರಲಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಕೊಲೆ ಯತ್ನ, ಸುಲಿಗೆ ಸೇರಿದಂತೆ ಹಲವಾರು ಪ್ರಕರಣಗಳಲ್ಲಿ ಭಾಗಿಯಾಗಿರುವ ಸ್ಥಳೀಯ ಕ್ರಿಮಿನಲ್ ವಿಶ್ವಜಿತ್ ಪೋದ್ದಾರ್ ಅಲಿಯಾಸ್ ಸೋನಾ ಪಪ್ಪು ಮತ್ತು ಆತನಿಗೆ ಸಂಬಂಧಿಸಿದ ಗುಂಪಿನ ವಿರುದ್ಧದ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ದಾಳಿ ನಡೆದಿದೆ. ಪ್ರಕರಣ ಸಂಬಂಧ ಏಪ್ರಿಲ್ 1 ರಂದು ಮೊದಲ ಸುತ್ತಿನ ಶೋಧ ಕಾರ್ಯ ನಡೆಸಲಾಗಿತ್ತು.

ಆ ವೇಳೆ 1.47 ಕೋಟಿ ನಗದು ಮತ್ತು 67.64 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ ಬೆಳ್ಳಿಯ ಜೊತೆಗೆ ನಾಡ ಬಂದೂಕು ವಶಪಡಿಸಿಕೊಳ್ಳಲಾಗಿತ್ತು. ಗಲಭೆ, ಕೊಲೆ ಯತ್ನ, ಕ್ರಿಮಿನಲ್ ಪಿತೂರಿ ಮತ್ತು ಶಸ್ತ್ರಾಸ್ತ್ರ ಕಾಯ್ದೆಯ ಉಲ್ಲಂಘನೆಯಡಿ ದಾಖಲಾಗಿರುವ ಪ್ರಕರಣ ಸಂಬಂಧ ಪೋದ್ದಾರ್ ವಿರುದ್ಧ ಕೋಲ್ಕತ್ತ ಪೊಲೀಸರು ದಾಖಲಿಸಿರುವ ಎಫ್‌ಐಆರ್ ಆಧರಿಸಿ ಈ ತನಿಖೆ ನಡೆಯುತ್ತಿದೆ.

ಕೋಲ್ಕತ್ತಾದ ಗೋಲ್ಪಾರ್ಕ್ ಬಳಿಯ ಕಂಕುಲಿಯಾ ರಸ್ತೆಯಲ್ಲಿ ನಡೆದ ಹಿಂಸಾಚಾರ ಪ್ರಕರಣದಲ್ಲಿ ಪೊಲೀಸರಿಗೆ ಬೇಕಾಗಿರುವ ಪೋದ್ದಾರ್ ಸದ್ಯ ತಲೆಮರೆಸಿಕೊಂಡಿದ್ದಾನೆ.

ಇಡಿ ಪೋದ್ದಾರ್‌ಗೆ ಸಮನ್ಸ್ ಜಾರಿ ಮಾಡಿದ್ದರೂ, ಆತ ಇದುವರೆಗೆ ತನಿಖೆಗೆ ಹಾಜರಾಗಿಲ್ಲ ಎಂದು ಸಂಸ್ಥೆ ತಿಳಿಸಿದೆ. ಪಶ್ಚಿಮ ಬಂಗಾಳದಲ್ಲಿ ಏಪ್ರಿಲ್ 23 ಮತ್ತು ಏಪ್ರಿಲ್ 29 ರಂದು ಎರಡು ಹಂತಗಳಲ್ಲಿ ಮತದಾನ ನಡೆಯಲಿದೆ.

# ಐ-ಪ್ಯಾಕ್ ಕಾರ್ಯಾಚರಣೆ ಸ್ಥಗಿತ ವರದಿ ಆಧಾರರಹಿತ

### ಮಾಧ್ಯಮ ವರದಿಗಳು ಸಂಪೂರ್ಣ ಆಧಾರರಹಿತ, ಸುಳ್ಳು : ಟಿಎಂಸಿ, ಐ-ಪ್ಯಾಕ್ ತಂಡವು ಪಕ್ಷದೊಂದಿಗೆ ಪೂರ್ಣ ಪ್ರಮಾಣದಲ್ಲಿ ಕೆಲಸ ಮಾಡುತ್ತಿದೆ

**ಕೋಲ್ಕತ್ತಾ:** ಪಶ್ಚಿಮ ಬಂಗಾಳದಲ್ಲಿ ಚುನಾವಣಾ ಕಾರ್ಯತಂತ್ರ ರೂಪಿಸುವ ಐ-ಪ್ಯಾಕ್ ಸಂಸ್ಥೆಯು ತನ್ನ ಕಾರ್ಯಾಚರಣೆಯನ್ನು 20 ದಿನಗಳ ಕಾಲ ಸ್ಥಗಿತಗೊಳಿಸಿದೆ ಎಂಬ ವರದಿಗಳನ್ನು ತೃಣಮೂಲ ಕಾಂಗ್ರೆಸ್ ತೀವ್ರವಾಗಿ ನಿರಾಕರಿಸಿದೆ. ಈ ಕುರಿತಾದ ಮಾಧ್ಯಮ ವರದಿಗಳು ಸಂಪೂರ್ಣ ಆಧಾರರಹಿತ ಮತ್ತು ಸುಳ್ಳು ಎಂದು ಸ್ಪಷ್ಟಪಡಿಸಿದೆ. ಚುನಾವಣಾ ಸಂದರ್ಭದಲ್ಲಿ ಗೊಂದಲ ಮೂಡಿಸುವ ಉದ್ದೇಶದಿಂದ ಇಂತಹ ಸುಳ್ಳು ಸುದ್ದಿಗಳನ್ನು ಹರಡಲಾಗುತ್ತಿದೆ ಎಂದು ಟಿಎಂಸಿ ಆಕ್ರೋಶ ವ್ಯಕ್ತಪಡಿಸಿದೆ. ಐ-ಪ್ಯಾಕ್ ತಂಡವು ಪಕ್ಷದೊಂದಿಗೆ ಪೂರ್ಣ ಪ್ರಮಾಣದಲ್ಲಿ ಕೆಲಸ ಮಾಡುತ್ತಿದ್ದು, ರಾಜ್ಯದಾದ್ಯಂತ ಚುನಾವಣಾ ಪ್ರಚಾರ ಕಾರ್ಯಗಳು ಯೋಜಿತವಾಗಿಯೇ ನಡೆಯುತ್ತಿವೆ ಎಂದು ಪಕ್ಷದ ಪ್ರಕಟಣೆ ತಿಳಿಸಿದೆ.



ಕಲ್ಲಿದ್ದಲು ಅಕ್ರಮ ಸಾಗಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ ನಡೆಸುತ್ತಿರುವ ತನಿಖೆ ಮತ್ತು ಐ-ಪ್ಯಾಕ್ ಸಂಸ್ಥೆಯ ಸಹ-ಸಂಸ್ಥಾಪಕ ವಿನೇಶ್ ಚಂದೇಲ್ ಅವರ ಬಂಧನದ ಹಿನ್ನೆಲೆಯಲ್ಲಿ, ಸಂಸ್ಥೆಯು ಬಂಗಾಳದಲ್ಲಿ ತನ್ನ ಕೆಲಸವನ್ನು 20 ದಿನಗಳ ಕಾಲ ನಿಲ್ಲಿಸಲಿದೆ ಎಂದು ಹೇಳಲಾಗಿತ್ತು. ಅಲ್ಲದೆ, ಕೋಲ್ಕತ್ತಾ ಕಚೇರಿಯ ಉದ್ಯೋಗಿಗಳಿಗೆ ಮೇ 11ರವರೆಗೆ ರಜೆ ನೀಡಲಾಗಿದೆ ಎಂಬ ವದಂತಿಗಳು ಹರಡಿದ್ದವು.

**ಗೊಂದಲ ಮೂಡಿಸುವ ಪ್ರಯತ್ನ**

**ಪಶ್ಚಿಮ ಬಂಗಾಳದ ಐ-ಪ್ಯಾಕ್ ಸಂಸ್ಥೆಯು ತನ್ನ ಕಾರ್ಯಾಚರಣೆಯನ್ನು 20 ದಿನಗಳ ಕಾಲ ಸ್ಥಗಿತಗೊಳಿಸಿದೆ ಎಂಬ ಮಾಧ್ಯಮ ವರದಿಗಳನ್ನು ತೃಣಮೂಲ ಕಾಂಗ್ರೆಸ್ ಖಂಡಿಸಿದ್ದು, ಆರೋಪಗಳನ್ನು ತಳ್ಳಿ ಹಾಕಿದೆ. ಇಂತಹ ವರದಿಗಳು ಸಂಪೂರ್ಣ ಸುಳ್ಳು ಮತ್ತು ಆಧಾರರಹಿತವಾಗಿದ್ದು, ಚುನಾವಣಾ ಸಮಯದಲ್ಲಿ ಗೊಂದಲ ಮೂಡಿಸುವ ಪ್ರಯತ್ನ ಎಂದು ಪಕ್ಷ ಆಕ್ರೋಶ ವ್ಯಕ್ತಪಡಿಸಿದೆ.**

**ತೃಣಮೂಲ ಕಾಂಗ್ರೆಸ್ ಸ್ಪಷ್ಟನೆ:** ಐ-ಪ್ಯಾಕ್ ತಂಡವು ತೃಣಮೂಲ ಕಾಂಗ್ರೆಸ್ ಜೊತೆ ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಂಡಿದೆ.

ಯೋಜಿತವಾಗಿಯೇ ರಾಜ್ಯಾದ್ಯಂತ ಪ್ರಚಾರ ಕಾರ್ಯಗಳು ಯಾವುದೇ ಅಡೆತಡೆಯಿಲ್ಲದೆ ನಡೆಯುತ್ತಿವೆ. ಚುನಾವಣಾ ಸಮಯದಲ್ಲಿ ಮತದಾರರಲ್ಲಿ ಮತ್ತು ಕಾರ್ಯಕರ್ತರಲ್ಲಿ ಗೊಂದಲ ಮೂಡಿಸಲು ಇಂತಹ ಸುಳ್ಳು ಸುದ್ದಿಗಳನ್ನು ಹರಡಲಾಗುತ್ತಿದೆ ಎಂದು ಟಿಎಂಸಿ ಆರೋಪಿಸಿದೆ.

**ಐ-ಪ್ಯಾಕ್ ನಿರ್ದೇಶಕರ ಬಂಧನ:** ಐ-ಪ್ಯಾಕ್ ನಿರ್ದೇಶಕರ ಬಂಧನವನ್ನು ಟಿಎಂಸಿ ತೀವ್ರವಾಗಿ ಖಂಡಿಸಿದೆ.ಚುನಾವಣೆಗೂ ಮುನ್ನ ವಿರೋಧ ಪಕ್ಷಗಳನ್ನು ಹತ್ತಿಕ್ಕಲು ಕೇಂದ್ರ ಸರ್ಕಾರವು ಇಡಿ, ಸಿಬಿಐನಂತಹ ಸಂಸ್ಥೆಗಳನ್ನು ರಾಜಕೀಯ ಅಸ್ತ್ರವಾಗಿ ಬಳಸಿಕೊಳ್ಳುತ್ತಿದೆ ಎಂದು ಅಭಿಷೇಕ್ ಬ್ಯಾನರ್ಜಿ ಸೇರಿದಂತೆ ಹಲವು ನಾಯಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

## ಮಿನಿ ನ್ಯೂಸ್

### ಯುಎಇಗೆ 2 ಬಿಲಿಯನ್ ಡಾಲರ್ ಸಾಲ ವಾಪಸ್: ಪಾಕ್ ಕೇಂದ್ರ ಬ್ಯಾಂಕ್

**ಕರಾಚಿ:** ಯುನೈಟೆಡ್ ಅರಬ್ ಎಮಿರೇಟ್ಸ್‌ಗೆ ನೀಡಬೇಕಿದ್ದ 2 ಬಿಲಿಯನ್ ಡಾಲರ್ ಸಾಲವನ್ನು ಹಿಂದಿರುಗಿಸಿರುವುದಾಗಿ ಪಾಕಿಸ್ತಾನದ ಕೇಂದ್ರ ಬ್ಯಾಂಕ್ ಆಗಿರುವ ಸ್ಟೇಟ್ ಬ್ಯಾಂಕ್ ಆಫ್ ಪಾಕಿಸ್ತಾನ ತಿಳಿಸಿದೆ. ಆರ್ಥಿಕ ನೆರವಿನ ಭಾಗವಾಗಿ ಸೌದಿ ಅರೇಬಿಯಾವು 3 ಬಿಲಿಯನ್ ಡಾಲರ್ ಅನ್ನು ಸ್ಟೇಟ್ ಬ್ಯಾಂಕ್ ಆಫ್ ಪಾಕಿಸ್ತಾನದಲ್ಲಿ ಜಮೆ ಇರಿಸಿದ ಎರಡು ದಿನಗಳ ನಂತರ, ಎಸ್‌ಬಿಪಿ ಈ ಘೋಷಣೆ ಮಾಡಿದೆ. ಪಾಕಿಸ್ತಾನ ಸರ್ಕಾರವು ಯುಎಇಗೆ ನೀಡಬೇಕಿದ್ದ 2 ಬಿಲಿಯನ್ ಡಾಲರ್ ಸಾಲವನ್ನು ಹಿಂದಿರುಗಿಸಿರುವುದನ್ನು ಕೇಂದ್ರ ಬ್ಯಾಂಕ್ ಖಚಿತಪಡಿಸಿದೆ ಎಂದು ಎಸ್‌ಬಿಪಿ ವಕ್ತಾರರು ತಿಳಿಸಿದ್ದಾರೆ.

ಆರ್ಥಿಕ ಸಂಕಷ್ಟ ಎದುರಿಸುತ್ತಿರುವ ಪಾಕಿಸ್ತಾನಕ್ಕೆ ಯುಎಇ ನೆರವಾಗಿತ್ತು. ಆದರೆ, ಇದೀಗ ಇರಾನ್ ವಿರುದ್ಧ ಅಮೆರಿಕ-ಇಸ್ರೇಲ್ ಯುದ್ಧದ ನಂತರ ಪಶ್ಚಿಮ ಏಷ್ಯಾದಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿರುವುದರಿಂದ ಸಾಲ ಮರುಪಾವತಿಸುವಂತೆ ಯುಎಇ ಒತ್ತಾಯಿಸಿತ್ತು ಎಂದು ಮಾಧ್ಯಮಗಳಲ್ಲಿ ಕಳೆದ ತಿಂಗಳು ವರದಿಯಾಗಿತ್ತು.

### ಕಲ್ಲಿದ್ದಲು ಹಗರಣ: ಐಎಎಸ್ ಅಧಿಕಾರಿಯ 4 ಕೋಟಿ ಮೌಲ್ಯದ ಆಸ್ತಿ ಜಪ್ತಿ

**ರಾಯ್ಪುರ್:** ಕಲ್ಲಿದ್ದಲು ಲೆವಿ ಹಗರಣಕ್ಕೆ ಸಂಬಂಧಿಸಿದಂತೆ ಆರೋಪಿಯಾಗಿರುವ ಅಮಾನತುಗೊಂಡ ಐಎಎಸ್ ಅಧಿಕಾರಿ ಸಮೀರ್ ವಿಷ್ಣೋಯ್ ಅವರ 4 ಕೋಟಿ ಮೌಲ್ಯದ ಆಸ್ತಿಗಳನ್ನು ಆರ್ಥಿಕ ಅಪರಾಧ ವಿಭಾಗ ಜಪ್ತಿ ಮಾಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕಳೆದ 2024ರ ಜುಲೈನಲ್ಲಿ ವಿಷ್ಣೋಯ್ ವಿರುದ್ಧ ಅಕ್ರಮ ಆಸ್ತಿ ಸಂಪಾದನೆ ಪ್ರಕರಣವನ್ನು ದಾಖಲಿಸಿತ್ತು . ತನಿಖೆಯ ವೇಳೆ, ವಿಷ್ಣೋಯ್ ಅವರ ಕುಟುಂಬ ಸದಸ್ಯರು ಹಾಗೂ ಸಂಬಂಧಿತ ಸಂಸ್ಥೆಗಳ ಹೆಸರಿನಲ್ಲಿ ಅಕ್ರಮವಾಗಿ ಸಂಪಾದಿಸಲ್ಪಟ್ಟಿವೆ ಎಂದು ಶಂಕಿಸಲಾದ ಒಟ್ಟು ಒಂಭತ್ತು ಸ್ಥಿರ ಆಸ್ತಿಗಳನ್ನು ತನಿಖಾ ಸಂಸ್ಥೆ ಗುರುತಿಸಿದೆ ಎಂದು ಹೇಳಲಾಗಿದೆ. ಈ ಆಸ್ತಿಗಳನ್ನು ಜಪ್ತಿ ಮಾಡುವಂತೆ ರಾಯ್ಪುರದಲ್ಲಿರುವ ಭ್ರಷ್ಟಾಚಾರ ತಡೆ ಕಾಯ್ದೆಯ ವಿಶೇಷ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಲಾಗಿತ್ತು. ಏ. 17ರಂದು ವಿಚಾರಣೆ ನಡೆಸಿದ ಬಳಿಕ, ನ್ಯಾಯಾಲಯವು ಎಲ್ಲಾ ಆಸ್ತಿಗಳನ್ನು ಜಪ್ತಿ ಮಾಡಲು ಆದೇಶಿಸಿದೆ, ಇದಕ್ಕೆ ಅನುಸಾರವಾಗಿ, ಭ್ರಷ್ಟಾಚಾರ ನಿಗ್ರಹ ದಳ/ಆರ್ಥಿಕ ಅಪರಾಧ ವಿಭಾಗವು ಆಸ್ತಿಗಳನ್ನು ಜಪ್ತಿ ಮಾಡಿದೆ. ಜಪ್ತಿಯಾದ ಆಸ್ತಿಗಳನ್ನು ಮಾರಾಟ ಅಥವಾ ಹಸ್ತಾಂತರ ಮಾಡಲು ಸದ್ಯಸಾಧ್ಯವಿಲ್ಲ ಎಂದು ತಿಳಿಸಲಾಗಿದೆ.ಈ ಪ್ರಕರಣಕ್ಕೆ ಸಂಬಂಧಿಸಿ, ಜಾರಿ ನಿರ್ದೇಶನಾಲಯ (ಇಡಿ) ಹಿಂದೆಯೇ ವಿಷ್ಣೋಯ್ ಅವರಿಗೆ ಸಂಬಂಧಿಸಿದ ಐದು ಸ್ಥಿರ ಆಸ್ತಿಗಳನ್ನು ತಾತ್ಕಾಲಿಕವಾಗಿ ಜಪ್ತಿ ಮಾಡಿತ್ತು. ಇದಲ್ಲದೆ, ಇತರ ಸಾರ್ವಜನಿಕ ಅಧಿಕಾರಿಗಳ ವಿರುದ್ಧವೂ ಕ್ರಮಗಳು ಮುಂದುವರಿದಿವೆ.

ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಮುಖ್ಯಮಂತ್ರಿಗಳ ಕಚೇರಿಯಲ್ಲಿ ಉಪ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದ ಸೌಮ್ಯ ಚೌರಾಸಿಯಾ ಅವರಿಗೆ ಸಂಬಂಧಿಸಿದ ಆಸ್ತಿಗಳ ಮೇಲೂ ಕ್ರಮ ಕೈಗೊಳ್ಳಲಾಗಿದೆ ಎಂದು ತನಿಖಾ ಸಂಸ್ಥೆ ತಿಳಿಸಿದೆ.2009 ಬ್ಯಾಚ್‌ನ ಐಎಎಸ್ ಅಧಿಕಾರಿಯಾದ ವಿಷ್ಣೋಯ್ ಅವರನ್ನು 2022ರಲ್ಲಿ ಈ ಕಲ್ಲಿದ್ದಲು ಲೆವಿ ಹಗರಣದ ಸಂಬಂಧ ಮೊದಲ ಬಾರಿಗೆ ಬಂಧಿಸಿತ್ತು. ಬಳಿಕ ಕಳೆದ ವರ್ಷ ಸುಪ್ರೀಂ ಕೋರ್ಟ್ ಅವರಿಗೂ ಸೇರಿದಂತೆ ಹಲವು ಆರೋಪಿಗಳಿಗೆ ಜಾಮೀನು ನೀಡಿತ್ತು. ಈ ಪ್ರಕರಣವು ಜುಲೈ 2020ರಿಂದ ಜೂನ್ 2022ರವರೆಗೆ ನಡೆದಿದ್ದ ಅಂದಾಜು 540 ಕೋಟಿ ಮೌಲ್ಯದ ಅಕ್ರಮ ಜಾಲಕ್ಕೆ ಸಂಬಂಧಿಸಿದ್ದು, ರಾಜ್ಯದಲ್ಲಿ ಸಾಗಾಟವಾಗುವ ಪ್ರತೀ ಟನ್ ಕಲ್ಲಿದ್ದಲಿಗೆ 25ರ ಅಕ್ರಮ ಲೆವಿ ವಸೂಲಿ ಮಾಡಲಾಗುತ್ತಿತ್ತು ಎಂಬ ಆರೋಪ ಇದೆ. ಇದರಲ್ಲಿ ಹಿರಿಯ ಅಧಿಕಾರಿಗಳು, ವ್ಯಾಪಾರಿಗಳು, ರಾಜಕೀಯ ನಾಯಕರು ಮತ್ತು ಮಧ್ಯವರ್ತಿಗಳ ಭಾಗಿಯಾಗಿದ್ದರೆಂದು ಆರೋಪಿಸಲಾಗಿದೆ.

### ಮಹಿಳಾ ಮೀಸಲಾತಿ ಮಸೂದೆ ಸೋಲಿಸಲು ಟಿಎಂಸಿ-ಕಾಂಗ್ರೆಸ್ ಒಪ್ಪಂದ

**ಬಿಷ್ಣುಪುರ:** ಲೋಕಸಭೆಯಲ್ಲಿ ಸಾಂವಿಧಾನಿಕ ತಿದ್ದುಪಡಿ ಮಸೂದೆ ಅಂಗೀಕಾರಗೊಳ್ಳಲು ವಿಫಲವಾದ ನಂತರ ವಿರೋಧ ಪಕ್ಷದ ಮೇಲೆ ಮತ್ತೆ ದಾಳಿ ಮುಂದುವರಿಸಿದ ಪ್ರಧಾನಿ ನರೇಂದ್ರ ಮೋದಿ, ಪಶ್ಚಿಮ ಬಂಗಾಳ ಸಿಎಂ ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್ ಮಹಿಳಾ ಮೀಸಲಾತಿ ಮಸೂದೆ ಸೋಲಾಗುವಂತೆ ನೋಡಿಕೊಳ್ಳಲು ಕಾಂಗ್ರೆಸ್ ಜೊತೆ ಒಪ್ಪಂದ ಮಾಡಿಕೊಂಡಿದೆ ಎಂದು ಆರೋಪಿಸಿದ್ದಾರೆ. ಬಿಷ್ಣುಪುರದಲ್ಲಿ ನಡೆದ ಚುನಾವಣಾ ರ್‍ಯಾಲಿಯಲ್ಲಿ ಮಾತನಾಡಿದ ಪ್ರಧಾನಿ, ದೇಶದ ಮತ್ತಷ್ಟು ಅಭಿವೃದ್ಧಿಗಾಗಿ ಮತ್ತು ವಿಕಸಿತ್ ಭಾರತದ ಕನಸನ್ನು ನನಸಾಗಿಸಲು ಕೇಂದ್ರವು ಭಾರತದ ರಾಜಕೀಯದಲ್ಲಿ ಮಹಿಳೆಯರ ಹೆಚ್ಚಿನ ಭಾಗವಹಿಸುವಿಕೆಯನ್ನು ಬಯಸಿದೆ. ಆದರೆ ಆಡಳಿತಾರೂಢ ಟಿಎಂಸಿ ಪಶ್ಚಿಮ ಬಂಗಾಳದ ತಾಯಂದಿರು, ಸಹೋದರಿಯರಿಗೆ ದ್ರೋಹ ಮಾಡಿದೆ. ಜನರನ್ನು ನಿರಂತರವಾಗಿ ಲೂಟಿ ಮಾಡುತ್ತಿರುವ ಟಿಎಂಸಿಯಿಂದಾಗಿ ಪಶ್ಚಿಮ ಬಂಗಾಳದ ಮಹಿಳೆಯರು ತಮ್ಮ ಹಕ್ಕುಗಳನ್ನು ಪಡೆದಿಲ್ಲ ಎಂದು ಆರೋಪಿಸಿದರು. ಪಶ್ಚಿಮ ಬಂಗಾಳಕ್ಕೆ ನುಸುಳುಕೋರರು ಪ್ರವೇಶಿಸುವುದನ್ನು ಖಚಿತಪಡಿಸಿಕೊಳ್ಳಲು ಟಿಎಂಸಿ ಎಲ್ಲಾ ಕಾನೂನುಗಳನ್ನು ಉಲ್ಲಂಘಿಸಿದೆ. ನಂತರ ಅವರಿಗೆ ಧರ್ಮದ ಆಧಾರದ ಮೇಲೆ ಕೋಟಾ ನೀಡಲಾಗಿದೆ. ಮೇ 4 ರಂದು ಫಲಿತಾಂಶಗಳು ಪ್ರಕಟವಾದ ನಂತರ ಎಲ್ಲಾ ಟಿಎಂಸಿ ಗೂಂಡಾಗಳು ಪೊಲೀಸರಿಗೆ ಶರಣಾಗಬೇಕು ಏಕೆಂದರೆ ಅವರನ್ನು ಬಿಡಲಾಗುವುದಿಲ್ಲ ಎಂದು ಎಚ್ಚರಿಸಿದರು.

### ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆ

**2026 ರ ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯು ಏಪ್ರಿಲ್ 23 ಮತ್ತು 29 ರಂದು ನಡೆಯಲಿದ್ದು, ಮೇ 4 ರಂದು ಫಲಿತಾಂಶ ಪ್ರಕಟವಾಗಲಿದೆ. ಮಮತಾ ಬ್ಯಾನರ್ಜಿ ಅವರ ನೇತೃತ್ವದ ಟಿಎಂಸಿಗೆ ಐ-ಪ್ಯಾಕ್ ಸಂಸ್ಥೆಯು ಕಳೆದ ಹಲವು ಚುನಾವಣೆಗಳಿಂದ ತಾಂತ್ರಿಕ ಮತ್ತು ಕಾರ್ಯತಂತ್ರದ ಬೆಂಬಲ ನೀಡುತ್ತಾ ಬಂದಿದೆ. ಪ್ರಸ್ತುತ ತನಿಖಾ ಸಂಸ್ಥೆಗಳ ದಾಳಿಯ ನಡುವೆಯೂ ತಮ್ಮ ಚುನಾವಣಾ ಪ್ರಚಾರಕ್ಕೆ ಯಾವುದೇ ಹಿನ್ನಡೆಯಾಗಿಲ್ಲ ಎಂದು ಪಕ್ಷವು ದೃಢವಾಗಿ ಹೇಳಿಕೊಂಡಿದೆ. ಒಟ್ಟಾರೆಯಾಗಿ, ಐ - ಪ್ಯಾಕ್ ಸಂಸ್ಥೆಯು ಬಂಗಾಳದಿಂದ ಹೊರನಡೆದಿದೆ ಅಥವಾ ಕೆಲಸ ನಿಲ್ಲಿಸಿದೆ ಎಂಬುದು ಕೇವಲ ವದಂತಿ ಎಂದು ಟಿಎಂಸಿ ಸ್ಪಷ್ಟಪಡಿಸಿದೆ. ಮತದಾರರು ಇಂತಹ ತಪ್ಪು ಮಾಹಿತಿಗೆ ಕಿವಿಗೊಡಬಾರದು ಎಂದು ವಿನಂತಿಸಿದೆ.**



# ಪರಶುರಾಮ ಘೋಷಿಸಿದ ಹೊಂಬಾಳೆ

'ಮಹಾವತಾರ ನರಸಿಂಹ' ಅನಿಮೇಟೆಡ್ ಸಿನಿಮಾವನ್ನು ವಿತರಣೆ ಮಾಡಿದ್ದ ಹೊಂಬಾಳೆ ಫಿಲಮ್ಸ್ ಒಳ್ಳೆಯ ವಿತರಣೆ ಮತ್ತು ಮಾರುಕಟ್ಟೆ ತಂತ್ರಗಳಿಂದ ಹೇಗೆ ಒಂದು ಸಿನಿಮಾವನ್ನು ಅದ್ದೂರಿಯಾಗಿ ಗೆಲ್ಲಿಸಬಹುದು ಎಂದು ತೋರಿಸಿಕೊಟ್ಟಿತು. ಇದೀಗ ಅದೇ 'ಮಹಾವತಾರ' ಸರಣಿಯ ಎರಡನೇ ಸಿನಿಮಾವನ್ನು ಹೊಂಬಾಳೆ ಘೋಷಿಸಿದೆ. ಈ ಬಾರಿ ಹೊಂಬಾಳೆಯೂ ನಿರ್ಮಾಣ ಕ್ರಿಯೆಯಲ್ಲಿ ಭಾಗಿ ಆಗಲಿದೆ. 'ಕೆಜಿಎಫ್', 'ಕಾಂತಾರ' ಸರಣಿ, 'ಸಲಾರ್' ಇನ್ನೂ ಕೆಲವು ಬ್ಲಾಕ್ ಬಸ್ಟರ್ ಸಿನಿಮಾಗಳನ್ನು ನೀಡಿರುವ ಹೊಂಬಾಳೆ ಫಿಲಮ್ಸ್, ಕಳೆದ ವರ್ಷ ವಿಶಿಷ್ಟ ಸಾಹಸವೊಂದನ್ನು ಮಾಡಿತು. 'ಮಹಾವತಾರ ನರಸಿಂಹ' ಅನಿಮೇಟೆಡ್ ಸಿನಿಮಾವನ್ನು ವಿತರಣೆ ಮಾಡಿತು. ಒಳ್ಳೆಯ ವಿತರಣೆ ಮತ್ತು ಮಾರುಕಟ್ಟೆ ತಂತ್ರಗಳಿಂದ ಹೇಗೆ ಒಂದು ಸಿನಿಮಾವನ್ನು ಅದ್ದೂರಿಯಾಗಿ ಗೆಲ್ಲಿಸಬಹುದು ಎಂದು ತೋರಿಸಿಕೊಟ್ಟಿತು. 'ಕ್ಲೀಮ್ ಪ್ರೊಡಕ್ಷನ್ಸ್' ನಿರ್ಮಿಸಿದ್ದ 'ಮಹಾವತಾರ ನರಸಿಂಹ' ಸಿನಿಮಾವನ್ನು ಹೊಂಬಾಳೆ ಫಿಲಮ್ಸ್ ಪ್ರೆಸೆಂಟ್ ಮಾಡಿತ್ತು. ಸಿನಿಮಾ ಬ್ಲಾಕ್ ಬಸ್ಟರ್ ಆಯ್ತು. ಇದೀಗ ಅದೇ 'ಮಹಾವತಾರ' ಸರಣಿಯ ಎರಡನೇ ಸಿನಿಮಾವನ್ನು ಹೊಂಬಾಳೆ ಘೋಷಿಸಿದೆ. ಈ ಬಾರಿ ಹೊಂಬಾಳೆಯೂ ನಿರ್ಮಾಣ ಕ್ರಿಯೆಯಲ್ಲಿ ಭಾಗಿ ಆಗಲಿದೆ. 'ಮಹಾವತಾರ ನರಸಿಂಹ' ಬಿಡುಗಡೆ ಆದಾಗಲೇ ಈ 'ಮಹಾವತಾರ' ಸರಣಿ ಮುಂದುವರೆಯುತ್ತದೆ ಎಂದು ಚಿತ್ರತಂಡ ಘೋಷಿಸಿತ್ತು. ಅದರಂತೆ ಈಗ 'ಮಹಾವತಾರ ಪರಶುರಾಮ' ಸಿನಿಮಾವನ್ನು ಘೋಷಿಸಲಾಗಿದೆ. 'ಯಾವಾಗ ಧರ್ಮ ಬೀಳುತ್ತದೆಯೋ ಆಗೆಲ್ಲ 'ಪರಶು' ಏಳುತ್ತದೆ' ಎಂಬ ಕ್ಯಾಚಿ ಲೈನ್ ಜೊತೆಗೆ ಅನಿಮೇಟೆಡ್ ವಿಡಿಯೋ ಒಂದನ್ನು ಟೀಸರ್ ರೀತಿ ಬಿಡುಗಡೆ ಮಾಡಲಾಗಿದೆ. ಪೌರಾಣಿಕ ಕತೆಯಾದ ಪರಶುರಾಮನ ಕುರಿತಾದ ಕತೆಯನ್ನು ಈ ಸಿನಿಮಾ ಒಳಗೊಂಡಿದ್ದು, ಸಿನಿಮಾ ಮುಂದಿನ ವರ್ಷ ಡಿಸೆಂಬರ್‌ನಲ್ಲಿ ತೆರೆಗೆ ಬರಲಿದೆ.


# 'ಜೈಲರ್ 2' 160 ಕೋಟಿ ರೂ. ಒಟಿಟಿ ಡೀಲ್



ನಟ ರಜನಿಕಾಂತ್ ಅವರು 'ಜೈಲರ್ 2' ಸಿನಿಮಾದ ಕೆಲಸಗಳಲ್ಲಿ ಬ್ಯುಸಿ ಆಗಿದ್ದಾರೆ. ಈ ಸಿನಿಮಾ ರಿಲೀಸ್‌ಗೂ ಮೊದಲೇ ಒಟಿಟಿ ಡೀಲ್ ಬಗ್ಗೆ ದೊಡ್ಡ ಸುದ್ದಿ ಕೇಳಿಬಂದಿದೆ. ಬರೋಬ್ಬರಿ 160 ಕೋಟಿ ರೂಪಾಯಿಗೆ ಈ ಚಿತ್ರದ ಒಟಿಟಿ ಹಕ್ಕುಗಳು ಮಾರಾಟ ಆಗಿವೆ ಎಂದು ಹೇಳಲಾಗುತ್ತಿದೆ.

ಸೂಪರ್‌ಸ್ಟಾರ್ ರಜನಿಕಾಂತ್ ಅಭಿನಯದ 'ಜೈಲರ್' ಸಿನಿಮಾ ಬಾಕ್ಸ್ ಆಫೀಸ್‌ನಲ್ಲಿ ಯಶಸ್ಸು ಕಂಡಿತ್ತು. ಈಗ ಅದರ ಮುಂದುವರಿದ ಭಾಗ 'ಜೈಲರ್ 2' ಮೇಲೆ ನಿರೀಕ್ಷೆ ಹೆಚ್ಚಿದೆ. ಚಿತ್ರೀಕರಣದ ಹಂತದಲ್ಲಿರುವ ಈ ಸಿನಿಮಾ ಬಿಡುಗಡೆಗೂ ಮುನ್ನವೇ ದಾಖಲೆಗಳ ಮೇಲೆ ದಾಖಲೆ ಬರೆಯಲು ಶುರು ಮಾಡಿದೆ. ನೆಲ್ಸನ್ ದಿಲೀಪ್ ಕುಮಾರ್ ಮತ್ತು ರಜನಿಕಾಂತ್ ಕಾಂಬಿನೇಷನ್‌ನ ಈ ಸಿನಿಮಾ ಬಿಗ್ ಬಜೆಟ್‌ನಲ್ಲಿ ತಯಾರಾಗುತ್ತಿದೆ. ಚಿತ್ರಮಂದಿರಕ್ಕೆ ಬರುವ ಮೊದಲೇ ಈ ಸಿನಿಮಾ ಡಿಜಿಟಲ್ ಲೋಕದಲ್ಲಿ ಇತಿಹಾಸ ನಿರ್ಮಿಸಿದೆ. ವರದಿಗಳ ಪ್ರಕಾರ, ಅಮೆಜಾನ್ ಪ್ರೈಮ್ ವಿಡಿಯೋ ಸಂಸ್ಥೆಯು 'ಜೈಲರ್ 2' ಚಿತ್ರದ ಒಟಿಟಿ ಹಕ್ಕುಗಳನ್ನು ಬರೋಬ್ಬರಿ 160 ಕೋಟಿ ರೂಪಾಯಿ ಮೊತ್ತಕ್ಕೆ ಖರೀದಿಸಿದೆ ಎನ್ನಲಾಗಿದೆ. ಇದು ತಮಿಳು ಚಿತ್ರರಂಗದ ಇತಿಹಾಸದಲ್ಲೇ ಅತಿ ದೊಡ್ಡ ಒಟಿಟಿ ಡೀಲ್ ಆಗಿದೆ. ಈಗಲೂ ರಜನಿಕಾಂತ್ ಅವರ ಸಿನಿಮಾಗಳಿಗೆ ಎಷ್ಟು ಬೇಡಿಕೆ ಇದೆ ಎಂಬುದಕ್ಕೆ ಈ ಅಂಕಿಅಂಶಗಳೇ ಸಾಕ್ಷಿ ಆಗಿವೆ. ಈ ಹಿಂದೆ ಕಮಲ್ ಹಾಸನ್ ಮತ್ತು ಮಣಿರತ್ನಂ ಅವರ 'ಥಗ್ ಲೈಫ್' ಸಿನಿಮಾ 150 ಕೋಟಿ ರೂಪಾಯಿಗೆ ಮಾರಾಟವಾಗಿ ದಾಖಲೆ ಬರೆದಿತ್ತು. ಈಗ ರಜನಿ ಆ ದಾಖಲೆಯನ್ನು ಅಳಿಸಿಹಾಕಿದ್ದಾರೆ. 160 ಕೋಟಿ ರೂಪಾಯಿ ಒಟಿಟಿ ಡೀಲ್ ಬಗ್ಗೆ ಚಿತ್ರತಂಡ ಇನ್ನೂ ಅಧಿಕೃತವಾಗಿ ಏನನ್ನೂ ಹೇಳಿಲ್ಲ.

# ಅಕ್ಷಯ್ ಪುತ್ರನ ಸಂಬಳ 4,500 ರೂಪಾಯಿ



ಸ್ಟಾರ್ ಕಲಾವಿದರ ಮಕ್ಕಳು ಚಿತ್ರರಂಗದಲ್ಲಿ ಮಿಂಚಲು ಪ್ರಯತ್ನಿಸುತ್ತಾರೆ. ಅದೇ ಅವರ ಮೊದಲ ಆದ್ಯತೆ ಆಗಿರುತ್ತದೆ. ಆದರೆ ಅಕ್ಷಯ್ ಕುಮಾರ್ ಅವರ ಮಗ ಆರವ್ ಭಾಟಿಯಾ ಆ ರೀತಿ ಇಲ್ಲ. ಸಿನಿಮಾ ಬಿಟ್ಟು ಅವರು ಬೇರೆ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಆ ಬಗ್ಗೆ ಅಕ್ಷಯ್ ಕುಮಾರ್ ಮಾಹಿತಿ ನೀಡಿದ್ದಾರೆ.

ಬಾಲಿವುಡ್ ನಟ ಅಕ್ಷಯ್ ಕುಮಾರ್ ದಶಕಗಳಿಂದ ಚಿತ್ರರಂಗದಲ್ಲಿ ಮಿಂಚುತ್ತಿದ್ದಾರೆ. ವರ್ಷಕ್ಕೆ ನಾಲ್ಕೈದು ಸಿನಿಮಾ ಮಾಡುವ ಅಕ್ಷಯ್ ಕುಮಾರ್ ಅವರ ಆಸ್ತಿ ಕೋಟ್ಯಂತರ ರೂಪಾಯಿ. ಆದರೆ, ಇವರ ಪುತ್ರ ಆರವ್ ಭಾಟಿಯಾ ಮಾತ್ರ ತಂದೆಯ ಹಾದಿ ತುಳಿಯದೇ, ಸಂಪೂರ್ಣ ಭಿನ್ನವಾದ ಹಾದಿ ಆರಿಸಿಕೊಂಡಿದ್ದಾರೆ. ಅಚ್ಚರಿಯ ವಿಷಯವೆಂದರೆ, 23 ವರ್ಷದ ಆರವ್ ಈಗ ಕೇವಲ 4,500 ರೂಪಾಯಿ ಸಂಬಳಕ್ಕೆ ಕೆಲಸ ಮಾಡುತ್ತಿದ್ದಾರೆ. ಸ್ವತಃ ಅಕ್ಷಯ್ ಕುಮಾರ್ ಅವರು ಈ ವಿಷಯ ತಿಳಿಸಿದ್ದಾರೆ.

ತಮ್ಮ ಮಗನಿಗೆ ಸಿನಿಮಾ ರಂಗಕ್ಕೆ ಬರುವ ಪ್ಲ್ಯಾನ್ ಇಲ್ಲ ಎಂದು ಕೂಡ ಅವರು ಹೇಳಿದ್ದಾರೆ. ಸಾಮಾನ್ಯವಾಗಿ ಸ್ಟಾರ್ ನಟರ ಮಕ್ಕಳು ಬೆಳೆದು ದೊಡ್ಡವರಾದ ಮೇಲೆ ಸಿನಿಮಾಗೆ ಬರುವುದು ವಾಡಿಕೆ. ಆದರೆ ಆರವ್ ಭಾಟಿಯಾಗೆ ನಟನೆಯಲ್ಲಿ ಆಸಕ್ತಿ ಇಲ್ಲವಂತೆ. ಇತ್ತೀಚೆಗೆ ಶುಭಂಕರ್ ಮಿಶ್ರಾ ಅವರೊಂದಿಗೆ ಮಾತನಾಡಿದ ಅಕ್ಷಯ್ ಕುಮಾರ್ ಅವರು ತಮ್ಮ ಮಗನ ಬಗ್ಗೆ ಹೆಮ್ಮೆಯ ವಿಷಯಗಳನ್ನು ಹಂಚಿಕೊಂಡಿದ್ದಾರೆ.

# ನಟಿಯ ಕೈಯಲ್ಲಿ ವಿವಿಐಪಿ ಐಪಿಎಲ್ ಟಿಕೆಟ್



ಎಲ್ಲರ ಕಣ್ಣು ಸಿಎಂ ಮೇಲೆ

ನಟಿ, ಇನ್‌ಸ್ಟಾಗ್ರಾಂ ಇನ್‌ಫ್ಲ್ಯುಯೆನ್ಸರ್ ಒಬ್ಬರು ತಮಗೆ ಸಿಕ್ಕಿದ್ದ ಐಪಿಎಲ್ ಟಿಕೆಟ್‌ನ ಚಿತ್ರಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದರು. ಇದು ದೊಡ್ಡ ಸುದ್ದಿಯಾಗಿದೆ. ಏಕೆಂದರೆ ನಟಿ ಹಂಚಿಕೊಂಡಿದ್ದಿದ್ದು ವಿವಿಐಪಿ ಟಿಕೆಟ್ ಅದೂ ಮಾರಾಟದ ಟಿಕೆಟ್ ಅಲ್ಲ ಬದಲಿಗೆ ಕಾಯ್ದಿರಿಸಿದ ಟಿಕೆಟ್. ಟಿಕೆಟ್ ಚಿತ್ರಗಳು ವೈರಲ್ ಆಗುತ್ತಿದ್ದಂತೆ ಎಲ್ಲರ ಕಣ್ಣು ಸಿಎಂ ಕಡೆ ತಿರುಗಿದೆ.

ಐಪಿಎಲ್ ಸೀಸನ್ ಚಾಲ್ತಿಯಲ್ಲಿದೆ. ಕೋಟ್ಯಂತರ ಮಂದಿ ಟಿವಿಗಳಲ್ಲಿ ಪಂದ್ಯಗಳನ್ನು ನೋಡುತ್ತಿದ್ದಾರೆ. ಕ್ರೀಡಾಂಗಣಕ್ಕೆ ಹೋಗಿ ಪಂದ್ಯ ನೋಡಲಂತೂ ನೂಕು-ನುಗ್ಗಲಿದೆ. ಟಿಕೆಟ್‌ಗಳೇ ಸಿಗುತ್ತಿಲ್ಲ. ಸಿಕ್ಕರು ಬ್ಲಾಕ್‌ನಲ್ಲಿ ಒಂದಕ್ಕೆ ಹತ್ತರಷ್ಟು ಬೆಲೆ. ಆದರೆ ಇದೀಗ ನಟಿ, ಇನ್‌ಸ್ಟಾಗ್ರಾಂ ಇನ್‌ಫ್ಲ್ಯುಯೆನ್ಸರ್ ಒಬ್ಬರು ತಮಗೆ ಸಿಕ್ಕಿದ್ದ ಐಪಿಎಲ್ ಟಿಕೆಟ್‌ನ ಚಿತ್ರಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದರು. ಇದು ದೊಡ್ಡ ಸುದ್ದಿಯಾಗಿದೆ. ಏಕೆಂದರೆ ನಟಿ ಹಂಚಿಕೊಂಡಿದ್ದಿದ್ದು ವಿವಿಐಪಿ ಟಿಕೆಟ್ ಅದೂ ಮಾರಾಟದ ಟಿಕೆಟ್ ಅಲ್ಲ ಬದಲಿಗೆ ಕಾಯ್ದಿರಿಸಿದ ಟಿಕೆಟ್. ಟಿಕೆಟ್ ಚಿತ್ರಗಳು ವೈರಲ್ ಆಗುತ್ತಿದ್ದಂತೆ ಎಲ್ಲರ ಕಣ್ಣು ತೆಲಂಗಾಣ ಸಿಎಂ ರೇವಂತ್ ರೆಡ್ಡಿ ಮೇಲೆ ಬಿದ್ದಿದೆ.

ತೆಲಂಗಾಣದಲ್ಲಿ ಸೋಷಿಯಲ್ ಮೀಡಿಯಾ ಇನ್‌ಫ್ಲುಯೆನ್ಸರ್ ಕುಶಿತಾ ಕಲ್ಲಪು ಅವರು ಇತ್ತೀಚೆಗೆ ಸಾಮಾಜಿಕ ಜಾಲತಾಣದಲ್ಲಿ ಐಪಿಎಲ್ ಟಿಕೆಟ್‌ನ ಚಿತ್ರಗಳನ್ನು ಹಂಚಿಕೊಂಡಿದ್ದರು. ಹೈದರಾಬಾದ್‌ನಲ್ಲಿ ನಡೆದ ಐಪಿಎಲ್ ಪಂದ್ಯದ ಟಿಕೆಟ್‌ಗಳವು. ಆದರೆ ಅವು ಸಾಮಾನ್ಯ ಟಿಕೆಟ್ ಆಗಿರಲಿಲ್ಲ ವಿವಿಐಪಿ ಪಾಸ್‌ಗಳಾಗಿದ್ದವು. ಸೂಕ್ಷ್ಮವಾಗಿ ಗಮನಿಸಿದರೆ ಆ ಟಿಕೆಟ್‌ಗಳು ಸರ್ಕಾರದ ಉನ್ನತ ರಾಜಕಾರಣಿಗಳಿಗೆ, ಅಧಿಕಾರಿಗಳಿಗೆ ಮೀಸಲಿಟ್ಟಿದ್ದ ಟಿಕೆಟ್‌ಗಳಾಗಿದ್ದವು.

# ದೀಪಿಕಾ ಪಡುಕೋಣೆ ಮತ್ತೆ ಪ್ರೆಗ್ನೆಂಟ್

2ನೇ ಮಗುವಿನ ನಿರೀಕ್ಷೆಯಲ್ಲಿ ರಣವೀರ್



ರಣವೀರ್ ಸಿಂಗ್ ಮತ್ತು ದೀಪಿಕಾ ಪಡುಕೋಣೆ ದಂಪತಿ ಈಗ ಗುಡ್ ನ್ಯೂಸ್ ನೀಡಿದ್ದಾರೆ. ಎರಡನೇ ಮಗುವಿನ ಆಗಮನದ ನಿರೀಕ್ಷೆಯಲ್ಲಿ ತಾವಿರುವುದಾಗಿ ತಿಳಿಸಿದ್ದಾರೆ. ಮಗಳು ದುವಾ ಕೈಯಲ್ಲಿ ಪ್ರೆಗ್ನೆನ್ಸಿ ಕಿಟ್ ಹಿಡಿದುಕೊಂಡ ಫೋಟೋವನ್ನು ದೀಪಿಕಾ ಮತ್ತು ರಣವೀರ್ ಸಿಂಗ್ ಪೋಸ್ಟ್ ಮಾಡಿದ್ದಾರೆ. ಆ ಬಗ್ಗೆ ಇಲ್ಲಿದೆ ಮಾಹಿತಿ..

ಬಾಲಿವುಡ್ ಸುಂದರಿ ದೀಪಿಕಾ ಪಡುಕೋಣೆ ಮತ್ತು ರಣವೀರ್ ಸಿಂಗ್ ಈಗ ಎರಡನೇ ಮಗುವಿನ ಆಗಮನವನ್ನು ನಿರೀಕ್ಷಿಸುತ್ತಿದ್ದಾರೆ. ತಮ್ಮ ಪುತ್ರಿ ದುವಾ ಜೊತೆಗಿನ ಫೋಟೋವನ್ನು ಸೋಶಿಯಲ್ ಮೀಡಿಯಾದಲ್ಲಿ ಪೋಸ್ಟ್ ಮಾಡುವ ಮೂಲಕ ಈ ಸುದ್ದಿಯನ್ನು ಅವರಿಬ್ಬರು ತಮ್ಮ ಅಭಿಮಾನಿಗಳಿಗೆ ತಿಳಿಸಿದ್ದಾರೆ. ತಮ್ಮ ಅಧಿಕೃತ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಪೋಸ್ಟ್ ಹಂಚಿಕೊಂಡಿರುವ ಈ ಜೋಡಿ, ಶೀರ್ಷಿಕೆಯಲ್ಲಿ ಸರಳವಾಗಿ 'ದೃಷ್ಟಿ ತಗುಲದಿರಲಿ' ಎಂಬ ಅರ್ಥ ನೀಡುವ ಎಮೋಜಿಗಳನ್ನು ಬಳಸಿದ್ದಾರೆ. ದೀಪಿಕಾ ಪಡುಕೋಣೆ ಈ ಪೋಸ್ಟ್ ಮಾಡಿದ ಕೆಲವೇ ಕ್ಷಣಗಳಲ್ಲಿ ಅಭಿಮಾನಿಗಳು ಮತ್ತು ಚಿತ್ರರಂಗದ ಗಣ್ಯರು ಶುಭಾಶಯಗಳ ಮಳೆ ಸುರಿಸಿದ್ದಾರೆ.

ದೀಪಿಕಾ ಪಡುಕೋಣೆ ಮತ್ತು ರಣವೀರ್ ಸಿಂಗ್ ಅವರು 2018ರಲ್ಲಿ ಇಟಲಿಯಲ್ಲಿ ಅದ್ದೂರಿಯಾಗಿ ವಿವಾಹವಾಗಿದ್ದರು. ಈ ದಂಪತಿಗೆ 2024ರ ಸೆಪ್ಟೆಂಬರ್ 8ರಂದು ಮೊದಲ ಪುತ್ರಿ ದುವಾ ಜನಿಸಿದಳು. ಇದೇ ವರ್ಷ ನವೆಂಬರ್ ತಿಂಗಳಲ್ಲಿ ಮಗಳ ಹೆಸರನ್ನು ಅಧಿಕೃತವಾಗಿ ಘೋಷಿಸಲಾಗಿತ್ತು. ಈಗ ದುವಾಳಿಗೆ ಒಬ್ಬ ತಮ್ಮ ಅಥವಾ ತಂಗಿ ಬರಲಿರುವ ಸುದ್ದಿ ಮನೆಮಂದಿಯಲ್ಲಿ ಸಂಭ್ರಮ ತಂದಿದೆ.

ಪ್ರಸ್ತುತ ರಣವೀರ್ ಸಿಂಗ್ ಅವರು ತಮ್ಮ ಇತ್ತೀಚಿನ ಚಿತ್ರ 'ಧುರಂಧರ್ 2' ಯಶಸ್ಸಿನ ಅಲೆಯಲ್ಲಿ ತೇಲುತ್ತಿದ್ದಾರೆ. ಈ ಸ್ಪೈ ಥ್ರಿಲ್ಲರ್ ಸಿನಿಮಾ ಬಿಡುಗಡೆಯಾಗಿ ಒಂದು ತಿಂಗಳಾದರೂ ಬಾಕ್ಸ್ ಆಫೀಸ್‌ನಲ್ಲಿ ಗಟ್ಟಿಯಾಗಿ ನಿಂತು ದಾಖಲೆಗಳನ್ನು ಬರೆಯುತ್ತಿದೆ. ಈ ಗೆಲುವಿನ ಬೆನ್ನಲ್ಲೇ ಅವರು ಎರಡನೇ ಮಗುವಿನ ಆಗಮನದ ನಿರೀಕ್ಷೆಯಲ್ಲಿದ್ದಾರೆ.

ಇನ್ನೊಂದೆಡೆ, ದೀಪಿಕಾ ಪಡುಕೋಣೆ ಕೂಡ ಸಾಲು ಸಾಲು ದೊಡ್ಡ ಚಿತ್ರಗಳಲ್ಲಿ ಬ್ಯುಸಿಯಾಗಿದ್ದಾರೆ. ಶಾರುಖ್ ಖಾನ್ ಜೊತೆ ಸಿದ್ದಾರ್ಥ್ ಆನಂದ್ ಮಾಡುತ್ತಿರುವ 'ಕಿಂಗ್' ಸಿನಿಮಾದಲ್ಲಿ ದೀಪಿಕಾ ಕಾಣಿಸಿಕೊಳ್ಳಲಿದ್ದಾರೆ. ಅಲ್ಲದೆ, ಸ್ಟೈಲಿಶ್ ಸ್ಟಾರ್ ಅಲ್ಲು ಅರ್ಜುನ್ ಮತ್ತು ಅಟ್ಲಿ ಕಾಂಬಿನೇಷನ್‌ನ ಬಹುನಿರೀಕ್ಷಿತ ಸಿನಿಮಾದಲ್ಲೂ ದೀಪಿಕಾ ನಟಿಸುತ್ತಿದ್ದಾರೆ.

# ಹೀಗೊಂದು ಅವಮಾನಕರ ದಾಖಲೆ ಬರೆದ ಆರ್‌ಸಿಬಿ

ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ನಡೆದ ಐಪಿಎಲ್‌ನ 26ನೇ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ 20 ಓವರ್‌ಗಳಲ್ಲಿ ಕಲೆಹಾಕಿದ್ದು 175 ರನ್‌ಗಳು ಮಾತ್ರ. ಈ ಗುರಿಯನ್ನು ಬೆನ್ನತ್ತಿದ ಡೆಲ್ಲಿ ಕ್ಯಾಪಿಟಲ್ಸ್ ತಂಡವು 19.5 ಓವರ್‌ಗಳಲ್ಲಿ 179 ರನ್‌ಗಳಿಸಿ 6 ವಿಕೆಟ್‌ಗಳ ಜಯ ಸಾಧಿಸಿದೆ. ಈ ಸೋಲಿನೊಂದಿಗೆ ಆರ್‌ಸಿಬಿ ಅವಮಾನಕರ ದಾಖಲೆಯೊಂದನ್ನು ತನ್ನದಾಗಿಸಿಕೊಂಡಿದೆ.

ಟಿ20 ಕ್ರಿಕೆಟ್ ಇತಿಹಾಸದಲ್ಲಿ ಆರು ತಂಡಗಳು ಒಂದೇ ಮೈದಾನದಲ್ಲಿ 100 ಪಂದ್ಯಗಳನ್ನಾಡಿದೆ. ಈ ನೂರು ಪಂದ್ಯಗಳ ಸಾಧನೆ ಮಾಡಿದ ಮೊದಲ ತಂಡ ಎಂದರೆ ಇಂಗ್ಲೆಂಡ್‌ನ ಸರ್ರೆ ಟೀಮ್. ಇದಾದ ಬಳಿಕ ಹ್ಯಾಂಪ್‌ಶೇರ್ ಸೇರಿದಂತೆ ಹಲವು ತಂಡಗಳು ಕೌಂಟಿ ಕ್ರಿಕೆಟ್‌ನಲ್ಲಿ ಒಂದೇ ಮೈದಾನದಲ್ಲಿ 100 ಕ್ಕಿಂತ ಹೆಚ್ಚು ಪಂದ್ಯಗಳನ್ನಾಡಿದೆ. ಈ ಪಟ್ಟಿಗೆ ಹೊಸ ಸೇರ್ಪಡೆ ರಾಯಲ್ ಚಾಲೆಂಜರ್ಸ್ ಬೆಂಗಳೂರು. ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು 100 ಪಂದ್ಯಗಳನ್ನಾಡಿದ ವಿಶೇಷ ದಾಖಲೆ ಬರೆದಿದೆ. ಆದರೆ ಈ ವಿಶೇಷ ಪಂದ್ಯದಲ್ಲಿ ಆರ್‌ಸಿಬಿ ತಂಡವು ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ 6 ವಿಕೆಟ್‌ಗಳ ಸೋಲನುಭವಿಸಿದೆ. ಈ ಸೋಲಿನೊಂದಿಗೆ ಆರ್‌ಸಿಬಿ ಹೆಸರಿಗೆ ಹೀನಾಯ ದಾಖಲೆಯೊಂದು ಸೇರ್ಪಡೆಯಾಗಿದೆ.



ಅಂದರೆ ಒಂದೇ ಮೈದಾನದಲ್ಲಿ 100 ಪಂದ್ಯಗಳನ್ನಾಡಿದ ತಂಡಗಳ ಪೈಕಿ ಮೂರು ಸ್ಮರಣೀಯ ಮ್ಯಾಚ್‌ಗಳಲ್ಲಿ ಸೋಲನುಭವಿಸಿದ ಅಪಕೀರ್ತಿ ಆರ್‌ಸಿಬಿ ಪಾಲಾಗಿದೆ.


ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಮೊದಲ ಮತ್ತು 50ನೇ ಹಾಗೂ 100ನೇ ಪಂದ್ಯದಲ್ಲಿ ಸೋಲುವ ಮೂಲಕ ಈ ಹೀನಾಯ ದಾಖಲೆ ಬರೆದಿದೆ. 2008 ರಲ್ಲಿ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ನಡೆದ ಐಪಿಎಲ್‌ನ ಚೊಚ್ಚಲ ಪಂದ್ಯದಲ್ಲಿ ಆರ್‌ಸಿಬಿ ತಂಡವು ಕೆಕೆಆರ್ ವಿರುದ್ಧ 140 ರನ್‌ಗಳ ಹೀನಾಯ ಸೋಲನುಭವಿಸಿತ್ತು. ಈ ಸೋಲಿನೊಂದಿಗೆ ಐಪಿಎಲ್ ಅಭಿಯಾನ ಆರಂಭಿಸಿದ್ದ ಆರ್‌ಸಿಬಿ 2015 ರಲ್ಲಿ ಇದೇ ಮೈದಾನದಲ್ಲಿ ತನ್ನ 50ನೇ ಪಂದ್ಯವಾಡಿತ್ತು.

ಆದರೆ ಈ ಸ್ಮರಣೀಯ ಪಂದ್ಯದಲ್ಲೂ ಮುಂಬೈ ಇಂಡಿಯನ್ಸ್ ವಿರುದ್ಧ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ 18 ರನ್‌ಗಳಿಂದ ಪರಾಜಯಗೊಂಡಿತು. ಇದೀಗ ಮತ್ತೊಂದು ಮೈಲುಗಲ್ಲಿನ ಪಂದ್ಯದಲ್ಲೂ ಸೋಲನುಭವಿಸಿದೆ. ಬೆಂಗಳೂರಿನಲ್ಲಿ ಕಣಕ್ಕಿಳಿದ 100ನೇ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ 6 ವಿಕೆಟ್‌ಗಳಿಂದ ಸೋಲೊಪ್ಪಿಕೊಂಡಿದೆ. ಈ ಮೂಲಕ ಟಿ20 ಕ್ರಿಕೆಟ್ ಇತಿಹಾಸದಲ್ಲೇ ಒಂದೇ ಮೈದಾನದಲ್ಲಿ ಮೊದಲ ಮತ್ತು 50ನೇ ಹಾಗೂ 100ನೇ ಪಂದ್ಯಗಳನ್ನು ಸೋತ ವಿಶ್ವದ ಮೊದಲ ತಂಡವೆಂಬ ಅಪಕೀರ್ತಿಯನ್ನು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ತನ್ನದಾಗಿಸಿಕೊಂಡಿದೆ.

# ಪಂದ್ಯದ ವೇಳೆ ಬ್ಲ್ಯಾಕ್ ಮ್ಯಾಜಿಕ್; ನಿಂಬೆ ಹಣ್ಣು ಮಂತ್ರಿಸಿದ ಕೂಡಲೇ ಬಿತ್ತು ವಿಕೆಟ್!

ಐಪಿಎಲ್ 2026 ರ 27ನೇ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ಸಿಎಸ್‌ಕೆ ವಿರುದ್ಧ ಗೆಲುವು ಸಾಧಿಸಿತು. ಈ ಪಂದ್ಯದ ವೇಳೆ 'ಮಾಟ-ಮಂತ್ರ'ದ ಪ್ರಯೋಗ ನಡೆದಿದೆ ಎಂಬ ವಿಡಿಯೋ ಹಾಗೂ ಬಿಸಿಸಿಐಗೆ ದೂರು ನೀಡಲಾಗಿದೆ ಎಂಬ ಸುದ್ದಿ ವೈರಲ್ ಆಗಿದೆ. ಆದರೆ, ವಿಡಿಯೋದಲ್ಲಿನ ಘಟನೆ ಕೇವಲ ಕಾಕತಾಳೀಯ. ಅಲ್ಲದೆ, ಸಿಎಸ್‌ಕೆ ಬಿಸಿಸಿಐಗೆ ದೂರು ನೀಡಿದೆ ಎಂಬ ಸುದ್ದಿ ಸಂಪೂರ್ಣ ಸುಳ್ಳು ಮತ್ತು ನಕಲಿ ದೂರು ಪ್ರತಿಯೂ ಸತ್ಯಾಂಶಕ್ಕೆ ದೂರವಾಗಿದೆ.

ಐಪಿಎಲ್ 2026 ರ 27 ನೇ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಮ್ಮ ಮೂರನೇ ಗೆಲುವು ದಾಖಲಿಸಿತು. ಸನ್‌ರೈಸರ್ಸ್ ಹೈದರಾಬಾದ್ ನೀಡಿದ್ದ 195 ರನ್‌ಗಳ ಗುರಿಯನ್ನು ಬೆನ್ನಟ್ಟುವಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ವಿಫಲವಾಯಿತು. ಪರಿಣಾಮವಾಗಿ ಸಿಎಸ್‌ಕೆ ಲೀಗ್‌ನಲ್ಲಿ 4ನೇ ಸೋಲು ಅನುಭವಿಸಿದರೆ, ಇತ್ತ ಸನ್‌ರೈಸರ್ಸ್ ಮೂರನೇ ಗೆಲುವು ದಾಖಲಿಸಿ ಪಾಯಿಂಟ್ ಪಟ್ಟಿಯಲ್ಲಿ 4ನೇ ಸ್ಥಾನಕ್ಕೇರಿದೆ. ಇದು ಪಂದ್ಯದ ವಿಚಾರವಾದರೆ, ಇದೇ ಪಂದ್ಯದ ವೇಳೆ ಮಾಟ-ಮಂತ್ರದ ಪ್ರಯೋಗ ನಡೆದಿದ್ದು, ಇದರಿಂದಾಗಿ ಸಿಎಸ್‌ಕೆ ತಂಡ ಸೋತಿದೆ ಎಂಬ ವಿಡಿಯೋ ಸೋಶಿಯಲ್ ಮೀಡಿಯಾದಲ್ಲಿ ಹರಿದಾಡುತ್ತಿದೆ. ಇದರ ಜೊತೆಗೆ ಈ ವಿಚಾರವಾಗಿ ಸಿಎಸ್‌ಕೆ ಆಡಳಿತ ಮಂಡಳಿ ಬಿಸಿಸಿಐಗೆ ದೂರು ನೀಡಿದೆ ಎಂದು ವರದಿಯಾಗಿದ್ದು, ದೂರಿನ ಪ್ರತಿಯೂ ಕೂಡ ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ. ಹೀಗಾಗಿ ಅದರ ಅಸಲಿಯತ್ತೇನು ಎಂಬುದನ್ನು ನೋಡುವುದಾದರೆ..



**ವೈರಲ್ ವಿಡಿಯೋದಲ್ಲಿ ಇರುವುದೇನು:** ಸೋಶಿಯಲ್ ಮೀಡಿಯಾದಲ್ಲಿ ಹರಿದಾಡುತ್ತಿರುವ ವಿಡಿಯೋದಲ್ಲಿ ಇರುವುದೇನು ಎಂಬುದನ್ನು ನೋಡುವುದಾದರೆ.. ಸನ್‌ರೈಸರ್ಸ್ ತಂಡದ ಜೆರ್ಸಿ ತೊಟ್ಟಿರುವ ಅಭಿಮಾನಿಯೊಬ್ಬ ಸಿಎಸ್‌ಕೆ ತಂಡದ ಬ್ಯಾಟಿಂಗ್ ನಡೆಯುವ ವೇಳೆ ತನ್ನ ಕಿಸೆಯಲ್ಲಿದ್ದ ನಿಂಬೆ ಹಣ್ಣನ್ನು ಹೊರತೆಗೆದು ಮಂತ್ರ ಜಪಿಸಿದ್ದಾನೆ. ಆತ ಹಾಗೆ ಮಾಡಿದ ಕೂಡಲೇ ಸಿಎಸ್‌ಕೆ ಪರ ಬ್ಯಾಟಿಂಗ್ ಮಾಡುತ್ತಿದ್ದ ಸ್ಫೋಟಕ ದಾಂಡಿಗ ಶಿವಂ ದುಬೆ ಕ್ಲೀನ್ ಬೌಲ್ಡ್ ಆಗಿದ್ದಾರೆ. ಇದೆಲ್ಲವು ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗಿರುವ ವಿಡಿಯೋದಲ್ಲಿದೆ.

ಆದಾಗ್ಯೂ ಈ ವಿಡಿಯೋದಲ್ಲಿ ಸನ್‌ರೈಸರ್ಸ್ ಅಭಿಮಾನಿ ನಿಂಬೆ ಹಣ್ಣನ್ನು ಮಂತ್ರಿಸಿರುವುದು ಸತ್ಯವಾಗಿದ್ದರೂ, ಆತನ ಮಂತ್ರದಿಂದಲೇ ವಿಕೆಟ್ ಬಿತ್ತು ಎಂದು ಹೇಳಲಾಗದು. ಆತ ಹಾಗೆ ಮಾಡುವುದಕ್ಕೂ ವಿಕೆಟ್ ಬೀಳುವುದಕ್ಕೂ ಕಾಕತಾಳೀಯವಿರಬಹುದೇ ಹೊರತು ಇದರಲ್ಲಿ ಯಾವುದೇ ಬ್ಲ್ಯಾಕ್ ಮ್ಯಾಜಿಕ್ ನಡೆದಿಲ್ಲ. ಇಂತಹ ಮೂಢನಂಬಿಕೆಗಳನ್ನು ಪ್ರೋತ್ಸಾಹಿಸುವುದಿಲ್ಲ.

**ದೂರು ನೀಡಿತಾ ಸಿಎಸ್‌ಕೆ:** ಇನ್ನು ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗಿರುವ ಈ ವಿಡಿಯೋಗೆ ಸಂಬಂಧಿಸಿದಂತೆ ಚೆನ್ನೈ ಸೂಪರ್ ಕಿಂಗ್ಸ್ ಆಡಳಿತ ಮಂಡಳಿ ಬಿಸಿಸಿಐಗೆ ದೂರು ಸಲ್ಲಿಸಿದೆ ಎಂಬ ಸುದ್ದಿಯೂ ಹರಿದಾಡುತ್ತಿದೆ. ದೂರಿನ ಪ್ರತಿಯೂ ವೈರಲ್ ಆಗಿದೆ.

ಆದರೆ ಈ ಬಗ್ಗೆ ಸಿಎಸ್‌ಕೆ ಆಡಳಿತ ಮಂಡಳಿಯಿಂದ ಯಾವುದೇ ಅಧಿಕೃತ ಮಾಹಿತಿ ಹೊರಬಂದಿಲ್ಲ. ಹಾಗೆಯೇ ಸಿಎಸ್‌ಕೆ ಆಡಳಿತ ಮಂಡಳಿ ಈ ರೀತಿಯ ವಿಚಾರಗಳಿಗೆ ದೂರು ನೀಡುವ ಸಾಧ್ಯತೆಗಳಿಲ್ಲ.

ಹೀಗಾಗಿ ವೈರಲ್ ಆಗಿರುವ ದೂರಿನ ಪ್ರತಿ ನಕಲಿಯಾಗಿದ್ದು, ಇದರಲ್ಲಿ ಯಾವುದೇ ಸತ್ಯಾಂಶವಿಲ್ಲ.

# ಐಪಿಎಲ್‌ನಲ್ಲಿ ದುರಾದೃಷ್ಟದ ದಾಖಲೆ ಬರೆದ ಇಶಾನ್ ಕಿಶನ್

ಸತತ 6 ಮ್ಯಾಚ್‌ನಲ್ಲೂ ಟಾಸ್ ಸೋಲು



ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಈವರೆಗೆ 73 ಹೆಚ್ಚು ನಾಯಕರುಗಳು ಕಣಕ್ಕಿಳಿದಿದ್ದಾರೆ. ಈ 73 ನಾಯಕರುಗಳ ಪೈಕಿ ನತದೃಷ್ಟದ ದಾಖಲೆ ಬರೆದಿರುವುದು ಇಶಾನ್ ಕಿಶನ್ ಮಾತ್ರ. ಅಂದರೆ ಐಪಿಎಲ್ ಇತಿಹಾಸದಲ್ಲೇ ಮೊದಲ ಆರು ಪಂದ್ಯಗಳಲ್ಲೂ ಟಾಸ್ ಸೋತ ಏಕೈಕ ಕ್ಯಾಪ್ಟನ್ ಎಂಬ ಅಪಕೀರ್ತಿಯೊಂದು ಇಶಾನ್ ಕಿಶನ್ ಪಾಲಾಗಿದೆ.

ಏಪ್ರಿಲ್ 18 ರಂದು ನಡೆದ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧದ ಪಂದ್ಯದಲ್ಲಿ ಇಶಾನ್ ಕಿಶನ್ ನಾಯಕರಾಗಿ ತಮ್ಮ ಸತತ ಆರನೇ ಟಾಸ್ ಸೋಲುವ ಮೂಲಕ ಐಪಿಎಲ್ ಇತಿಹಾಸದಲ್ಲಿ ಹೊಸದೊಂದು 'ದುರಾದೃಷ್ಟದ' ದಾಖಲೆ ಬರೆದಿದ್ದಾರೆ. ಇದಕ್ಕೂ ಮುನ್ನ ಇಂತಹದೊಂದು ನತದೃಷ್ಟದ ದಾಖಲೆ ಪಂಜಾಬ್ ಕಿಂಗ್ಸ್ ತಂಡದ ಮಾಜಿ ನಾಯಕ ಡೇವಿಡ್ ಮಿಲ್ಲರ್ ಹೆಸರಿನಲ್ಲಿತ್ತು. 2016 ರ ಐಪಿಎಲ್ ಆವೃತ್ತಿಯಲ್ಲಿ ಕಿಂಗ್ಸ್ ಇಲೆವೆನ್ ಪಂಜಾಬ್ (ಈಗಿನ ಪಂಜಾಬ್ ಕಿಂಗ್ಸ್) ತಂಡದ ನಾಯಕರಾಗಿದ್ದ ಡೇವಿಡ್ ಮಿಲ್ಲರ್, ತಮ್ಮ ನಾಯಕತ್ವದ ಮೊದಲ 5 ಪಂದ್ಯಗಳಲ್ಲಿ ಸತತವಾಗಿ ಟಾಸ್ ಸೋತಿದ್ದರು.


ಇದೀಗ ಸನ್‌ರೈಸರ್ಸ್ ಹೈದರಾಬಾದ್ ಪರ ಹಂಗಾಮಿ ನಾಯಕನಾಗಿ ಕಣಕ್ಕಿಳಿಯುತ್ತಿರುವ ಇಶಾನ್ ಕಿಶನ್ ಸತತ 6 ಮ್ಯಾಚ್‌ಗಳಲ್ಲೂ ಟಾಸ್ ಸೋತಿದ್ದಾರೆ.

ಈ ಮೂಲಕ ಐಪಿಎಲ್ ಇತಿಹಾಸದಲ್ಲೇ ಮೊದಲ ಆರು ಮ್ಯಾಚ್‌ಗಳಲ್ಲೂ ಟಾಸ್ ಸೋತ ಮೊದಲ ಕ್ಯಾಪ್ಟನ್ ಎಂಬ 'ದುರಾದೃಷ್ಟ'ದ ದಾಖಲೆ ಬರೆದಿದ್ದಾರೆ. ಇನ್ನು ಇಶಾನ್ ಕಿಶನ್ 6 ಪಂದ್ಯಗಳಲ್ಲಿ ಟಾಸ್ ಸೋತರೂ ಸನ್‌ರೈಸರ್ಸ್ ಹೈದರಾಬಾದ್ ತಂಡವು ಮೂರು ಮ್ಯಾಚ್‌ಗಳಲ್ಲಿ ಜಯ ಸಾಧಿಸಿದೆ. ಹೀಗಾಗಿ ನತದೃಷ್ಟದ ನಡುವೆ ಇಶಾನ್ ತಂಡವನ್ನು ಗೆಲುವಿನತ್ತ ಮುನ್ನಡೆಸಿದ್ದಾರೆ. ಈ ಗೆಲುವುಗಳೊಂದಿಗೆ ಇದೀಗ ಸನ್‌ರೈಸರ್ಸ್ ಹೈದರಾಬಾದ್ ತಂಡವು ಅಂಕ ಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿದೆ.

# ಕೊನೆಗೂ ಕೋಲ್ಕತಾ ತೆರೆಯಿತು ಗೆಲುವಿನ ಖಾತೆ!

ಆರು ಪಂದ್ಯಗಳನ್ನಾಡಿಯೂ ಈ ಸೀಸನ್ ನಲ್ಲಿ ಗೆಲುವು ಕಾಣದ ಕೋಲ್ಕತಾ ನೈಟ್ ರೈಡರ್ಸ್ ತಂಡ ಇದೀಗ ಮೊದಲ ಗೆಲುವಿನ ಸವಿಯುಂಡಿದೆ. ವರುಣ್ ಚಕ್ರವರ್ತಿ, ಕಾರ್ತಿಕ್ ತ್ಯಾಗಿ ಅವರ ಬಿಗು ಬೌಲಿಂಗ್ ದಾಳಿ ಮತ್ತು ರಿಂಕು ಸಿಂಗ್ ಅವರ ಸಮಯೋಚಿತ ಅಜೇಯ ಅರ್ಧಶತಕದ ನೆರವಿನಿಂದ ಬಲಿಷ್ಠ ರಾಜಸ್ಥಾನ ರಾಯಲ್ಸ್ ವಿರುದ್ಧ 4 ವಿಕೆಟ್‌ಗಳ ಜಯ ಸಾಧಿಸಿದೆ.

ಈ ಮೂಲಕ ಐಪಿಎಲ್ ಅಂಕಪಟ್ಟಿಯಲ್ಲಿ ಕೊನೇ ಸ್ಥಾನದಿಂದ ಒಂದು ಸ್ಥಾನ ಮೇಲೇರಿದೆ. ಇದೇವೇಳೆ ರಾಜಸ್ಥಾನ ರಾಯಲ್ಸ್ ಈ ಪಂದ್ಯದ ಸೋಲಿನ ಬಳಿಕ 3ನೇ ಸ್ಥಾನದಲ್ಲಿದೆ. ಕೋಲ್ಕತಾದ ಈಡನ್ ಗಾರ್ಡನ್ ನಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ರಾಜಸ್ಥಾನ ರಾಯಲ್ಸ್ ತಂಡ ನಿಗದಿತ 20 ಓವರ್ ಗಳಲ್ಲಿ 9 ವಿಕೆಟ್ ಕಳೆದುಕೊಡು 155 ರನ್ ಗಳಿಸಿತು. ಇದಕ್ಕೆ ಉತ್ತರವಾಗಿ ಕೋಲ್ಕತಾ ನೈಟ್ ರೈಡರ್ಸ್ ಇನ್ನೂ 2 ಎಸೆತಗಳು ಬಾಕಿ ಇರಿವಂತೆ 6 ವಿಕೆಟ್ ಕಳೆದುಕೊಂಡು ಗುರಿ ತಲುಪಿತು.



ವರುಣ್ ಕೈಚಳಕ ರಿಂಕು ಸಾಹಸ

ಸಾಧಾರಣ ಮೊತ್ತವಿದ್ದರೂ ಕೋಲ್ಕತಾ ನೈಟ್ ರೈಡರ್ಸ್ ತಂಡವನ್ನು ಮೊದಲ ಎಸೆತದಿಂದಲೇ ಒತ್ತಡಕ್ಕೆ ಸಿಲುಕಿಸುವಲ್ಲಿ ರಾಜಸ್ಥಾನ ಬೌಲರ್‌ಗಳು ಯಶಸ್ವಿಯಾದರು. ಜೋಫ್ರಾ ಆರ್ಚರ್ ಅವರು ಎಸೆದ ಇನ್ನಿಂಗ್ಸ್ ನ ಮೊದಲ ಎಸೆತಕ್ಕೇ ಟಿಂ ಸೈಫರ್ಟ್ ಕ್ಲೀನ್ ಬೌಲ್ಡ್ ಆದರೆ, ಎರಡನೇ ಓವರ್ ನಲ್ಲಿ ಬರ್ಗರ್ ಅವರು ನಾಯಕ ಅಜಿಂಕ್ಯ ರಹಾನೆ ಅವರನ್ನು ಕೀಪರ್ ಜೋಸ್ ಬಟ್ಲರ್ ಅವರಿಗೆ ಕ್ಯಾಚ್ ಕೊಡಿಸುವ ಮೂಲಕ ಮತ್ತೊಂದು ಆಘಾತ ನೀಡಿದರು. ಆಗ ತಂಡದ ಮೊತ್ತ 5 ಅಷ್ಟೇ ಆಗಿತ್ತು.

ತಂಡದ ಮೊತ್ತ 52 ಆಗುವುದರೊಳಗೆ ಉತ್ತಮವಾಗಿ ಆಡುತ್ತಿದ್ದ ಕ್ಯಾಮರೂನ್ ಗ್ರೀನ್(27), ಅಂಗಕ್ರಿಷ್ ರಘುವಂಶಿ(10) ಅವರ ವಿಕೆಟ್ ಗಳನ್ನೂ ಕಳೆದುಕೊಂಡಿತು. ಈ ಹಂತದಲ್ಲಿ ರೋವ್ಮನ್ ಪೋವೆಲ್(23), ರಮಣ್ ದೀಪ್ ಸಿಂಗ್ (10) ಮತ್ತು ಅನುಕೂಲ್ ರಾಯ್(ಅಜೇಯ 29) ಅವರೊಂದಿಗೆ ಸಣ್ಣ ಪುಟ್ಟ ಜೊತೆಯಾಟಗಳಲ್ಲಿ ಭಾಗಿಯಾದ ರಿಂಕು ಸಿಂಗ್ ಅವರು ತಂಡವನ್ನು ಗೆಲುವಿನ ದಡ ತಲುಪಿಸಿದರು. ರಿಂಕು ಸಿಂಗ್ ಅವರು 34 ಎಸೆತಗಳನ್ನು ಎದುರಿಸಿ 5 ಬೌಂಡರಿ ಮತ್ತು 2 ಸಿಕ್ಸರ್ ಗಳಿದ್ದ ಅಜೇಯ 53 ರನ್ ಬಾರಿಸಿದರು.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com, epaper.udayavahini.in, www.udayavahini.in, Udaya vahini news, Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966